07 July 2026 Tuesday
SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಕೋಪ ಹರಿಯುವ ನೀರಿನಂತೆ ಇರಬೇಕು, ಅದನ್ನು ಹಿಡಿದಿಟ್ಟು ಕೊಂಡರೆ ದ್ವೇಷದ ರೂಪ ಪಡೆಯುತ್ತದೆ!

-ಸ್ನೇಹಾ ಆನಂದ್

info.varthaman@gmail.com



ಭೀಮನಕಿಂಡಿ ಬೆಟ್ಟದಲ್ಲಿ ಚಾರಣ: ಪರಿಸರ ಪಾಠ ಪುಟ ಸಂ. 2



ಬಿಜೆಪಿಯಲ್ಲಿ ಸಣ್ಣ ಸಮುದಾಯಗಳಿಗೂ ಮಾನ್ಯತೆ ಪುಟ ಸಂ. 3



ಮಳೆಗಾಗಿ ಮಲೆಮಹದೇಶ್ವರನ ಮೊರೆ ಹೋದ ರೈತರು ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 218 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ರಾಜ್ಯ ಸರ್ಕಾರದಿಂದ ಅಕ್ರಮ 'ಸರ್'

## ಮುಖ್ಯ ಚುನಾವಣಾಧಿಕಾರಿಗೆ ಎನ್‌ಡಿಎ ನಾಯಕರಿಂದ ದೂರು | ಇದುವರೆಗಿನ ಸಮೀಕ್ಷೆ ರದ್ದಿಗೆ ಆಗ್ರಹ

**ಬೆಂಗಳೂರು:** ರಾಜ್ಯದಲ್ಲಿ ಕಳೆದ ಐದು ದಿನಗಳಿಂದ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರವೇ ಅಕ್ರಮಕ್ಕೆ ಕುಮ್ಮಕ್ಕು ನೀಡುತ್ತಿದೆ. ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಎನ್‌ಡಿಎ ನಾಯಕರು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಸೋಮವಾರ ದೂರು ನೀಡಿದ್ದಾರೆ.

ದೂರು ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಷಿ ಮತ್ತು ಎಚ್.ಡಿ.ಕುಮಾರಸ್ವಾಮಿ ಮಾತನಾಡಿದರು. ಅಕ್ರಮಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಐದು ದಿನಗಳಿಂದ ಕೆಳಹಂತದ ಅಧಿಕಾರಿಗಳಿಗೆ ದೂರುಗಳನ್ನು ನೀಡಿದರೂ ಕ್ರಮ ಕೈಗೊಂಡಿಲ್ಲ. ಹೀಗಾಗಿ ಎಲ್ಲರೂ ಒಟ್ಟಾಗಿ ಬಂದು ಮುಖ್ಯ ಚುನಾವಣಾಧಿಕಾರಿಗೆ ದೂರು ಕೊಟ್ಟಿದ್ದೇವೆ. ಅಗತ್ಯ ಬಿದ್ದರೆ ಕೇಂದ್ರ ಚುನಾವಣಾ ಆಯೋಗಕ್ಕೂ ದೂರು ಕೊಡುತ್ತೇವೆ ಎಂದು ಹೇಳಿದರು.

ಇದುವರೆಗೂ ನಡೆದಿರುವ ಸಮೀಕ್ಷೆಯನ್ನು ರದ್ದುಪಡಿಸಿ ಮರು ಸಮೀಕ್ಷೆ ನಡೆಸಬೇಕು ಎಂದು ಆಗ್ರಹಿಸಿದ್ದೇವೆ. ಅಕ್ರಮಗಳನ್ನು ಪತ್ತೆ ಹಚ್ಚಲು ಅಧಿಕಾರಿಗಳನ್ನು ನಿಯೋಜಿಸಬೇಕು ಎಂದೂ ಕೋರಿದ್ದೇವೆ ಎಂದು ಅವರು ಹೇಳಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಉಪನಾಯಕ ಅರವಿಂದ ಬೆಲ್ಲದ, ವಿಧಾನ ಪರಿಷತ್ ವಿಪಕ್ಷನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದೆ ಶೋಭಾ ಕರಂದ್ಲಾಜೆ, ಸಿ.ಟಿ.ರವಿ ಪಾಲ್ಗೊಂಡಿದ್ದರು.



### ಮನೆಗಳಿಗೆ ಭೇಟಿ ನೀಡದ ಬಿಎಲ್‌ಓಗಳು

ಸಂತೆ, ಮದರಸ, ಮಸೀದಿಗಳಲ್ಲಿ ಎಸ್‌ಐಆರ್ ನಡೆಯುತ್ತಿದೆ. ಬಿಎಲ್‌ಓಗಳು ಮನೆಗಳಿಗೆ ಭೇಟಿ ನೀಡದೇ ಇದ್ದರೆ ನಿವಾಸಿಗಳು ಸ್ಥಳೀಯರೋ ಹೊರಗಿನ ವರೋ ಎಂದು ಹೇಗೆ ಗೊತ್ತಾಗುತ್ತದೆ ಎಂದು ಆಕ್ಷೇಪಿಸಿದರು. ಚುನಾಯಿತ ಪ್ರತಿನಿಧಿಗಳ ಮನೆಯಲ್ಲಿ, ಮುಸಲ್ಮಾನರ ಮನೆಯಲ್ಲಿ, ಕೆಲವೆಡೆ ಬಿಬಿಎಂಪಿ ಬೂತ್ ಗಳಲ್ಲಿ ಪ್ರತ್ಯೇಕವಾಗಿ ಸಮೀಕ್ಷೆ ನಡೆಯುತ್ತಿದೆ. ಕೆಲವೆಡೆ ಶಾಸಕರ ಭಾವಚಿತ್ರಗಳನ್ನೂ ಬಿಎಲ್‌ಓಗಳು ತೋರಿಸಿ ಸಮೀಕ್ಷೆ ನಡೆಸುತ್ತಿದ್ದಾರೆ ಎಂದು ದೂರಿದರು.

### ಪೆನ್ ಡ್ರೈವ್, ದಾಖಲೆಗಳ ಸಲ್ಲಿಕೆ

ಎಸ್‌ಐಆರ್ ಪ್ರಕ್ರಿಯೆಗಳ ಅಕ್ರಮಗಳ ಕುರಿತು ಪೆನ್ ಡ್ರೈವ್ ಸೇರಿ ದಂತೆ ಹಲವು ದಾಖಲೆಗಳನ್ನು ಚುನಾವಣಾಧಿಕಾರಿಗೆ ನೀಡಲಾ ಗಿದೆ. ದೂರುಗಳ ಬಗ್ಗೆ ಕೇಂದ್ರ ಆಯೋಗದ ಗಮನ ಸೆಳೆದಿರು ವುದಾಗಿಯೂ ಅವರು ತಿಳಿಸಿದ್ದಾರೆ. ಕ್ರಮ ಕೈಗೊಳ್ಳುವ ಭರವಸೆ ಯನ್ನು ನೀಡಿದ್ದಾರೆ ಎಂದು ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು. ಕೇಂದ್ರ ಸರ್ಕಾರವನ್ನು ಮತ್ತು ಇತರೆ ರಾಜ್ಯಗಳ ಮೇಲೆ ಅಕ್ರಮದ ಆರೋಪ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರವೇ ಅಕ್ರಮ ಎಸಗುತ್ತಿದೆ. 2002ರ ಮತದಾರರ ಪಟ್ಟಿಯಲ್ಲಿರುವ ಅಪ್ಪ, ಅಮ್ಮ, ಅಜ್ಜ, ಅಜ್ಜಿ ಸಂಬಂಧಿಕರೆಂದು ಪರಿಗಣಿಸಬೇಕು ಎಂದು ನಿಯಮ ಸ್ಪಷ್ಟವಾಗಿ ಹೇಳುತ್ತದೆ. ಆದರೆ ಅದನ್ನು ಮೀರಿ ಸಂಬಂಧಿಕರ ವ್ಯಾಖ್ಯಾನ ಮಾಡಲಾಗಿದೆ. ಮುಲ್ಲಾ, ನದಾಫ್ ಎಂಬಂತೆ ಒಂದೇ ಹೆಸರಿ ನವರು ಹಲವರು ಇದ್ದಾಗ ಅಕ್ರಮ ಆಗದೆ ಇರುತ್ತದೆಯೇ ಎಂದು ಪ್ರಶ್ನಿಸಿದರು.

### ಆಯೋಗ ಕತ್ತೆ ಕಾಯುತ್ತಿಲ್ಲ

ಸಚಿವ ಪ್ರಿಯಾಂಕ ಖರ್ಗೆ ಅವರು ಚುನಾವಣಾ ಆಯೋಗ ಕತ್ತೆ ಕಾಯುತ್ತಿದೆಯೇ ಎಂದು ಕೇಳಿದ್ದಾರೆ. ಆದರೆ, ಆಯೋಗ ಕತ್ತೆ ಕಾಯುತ್ತಿಲ್ಲ. ಅಂಥ ಕೆಲಸವನ್ನು ತಡೆಯುವ ಕೆಲಸ ಮಾಡುತ್ತಿದೆ ಎಂದು ಆರ್.ಅಶೋಕ್ ತಿರುಗೇಟು ನೀಡಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜನರನ್ನು ಹೆದರಿಸಿ ಸಮೀಕ್ಷೆ ನಡೆಸುವ ಷಡ್ಯಂತ್ರ ನಡೆಸಿದ್ದಾರೆ. ಮತದಾರರ ಪಟ್ಟಿಯಿಂದ ಹೆಸರು ತೆಗೆಯಲ್ಪಟ್ಟವರಿಗೆ ಗ್ಯಾರಂಟಿ ಸೌಲಭ್ಯ ಕೊಡುವುದಿಲ್ಲ ಎನ್ನುವುದು ಬೆದರಿಕೆ ತಾನೆ ಎಂದು ಛಲವಾದಿ ನಾರಾಯಣಸ್ವಾಮಿ ಕಿಡಿಕಾರಿದರು.

# ಬೇನಾಮಿ ಗುತ್ತಿಗೆದಾರರಿಗೆ ಲಾಭ

## ಎಸ್.ಸುರೇಶ್ ಕುಮಾರ್ ವಿರುದ್ಧ ಕಾಂಗ್ರೆಸ್ ಆರೋಪ

**ಬೆಂಗಳೂರು:** ಮಾಜಿ ಸಚಿವ, ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಅವರ ವಿರುದ್ಧ ಗಂಭೀರ ಆರೋಪ ಕೇಳಿ ಬಂದಿದೆ. ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಅನುದಾನ ಹಾಗೂ ಪಾಲಿಕೆ ವತಿಯಿಂದ ಕೈಗೊಳ್ಳಲಾದ ವಿವಿಧ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳಲ್ಲಿ ನಿಯಮ ಬಾಹಿರವಾಗಿ ಬೇನಾಮಿ ಗುತ್ತಿಗೆದಾರರಿಗೆ ಲಾಭ ಮಾಡಿಕೊಟ್ಟಿದ್ದಾರೆ ಎಂದು ಆರೋಪಿಸಲಾಗಿದೆ.

ಸುರೇಶ್ ಕುಮಾರ್ ಅವರ ವಿರುದ್ಧ ಧಿಕ್ಕಾರ ಕೂಗುತ್ತಲೇ ಆರ್‌ಟಿಒ ಕಚೇರಿ ಬಳಿ ಆಗಮಿಸಿದ ಕಾಂಗ್ರೆಸ್ ಕಾರ್ಯಕರ್ತರು, ಆರ್‌ಟಿಒ ಕಚೇರಿ ಒಳನುಗ್ಗಲು ಯತ್ನಿಸಿದ್ದಾರೆ. ಇದೇ ವೇಳೆ ಬಿಜೆಪಿ ಕಾರ್ಯಕರ್ತರು ಬಂದರು. ಕೈಕೈ ಮಿಲಾಯಿಸುವ ಹಂತಕ್ಕೆ ಹೋಗಿದ್ದಾರೆ. ಅಷ್ಟರಲ್ಲಿ ಬ್ಯಾರಿಕೇಡ್ ಅಳವಡಿಸಿದ್ದ ಪೊಲೀಸರು ಎರಡೂ ಪಕ್ಷದ ಕಾರ್ಯಕರ್ತರನ್ನು ಚದುರಿಸಿ ಪರಿಸ್ಥಿತಿ ನಿಯಂತ್ರಣಕ್ಕೆ ತೆಗದುಕೊಂಡಿದ್ದಾರೆ.

### ಎಸ್‌ಐಆರ್ ವೇಳಾಪಟ್ಟಿ ವಿರುದ್ಧ ಕೋರ್ಟ್ ಮೊರೆ

ಎಸ್‌ಐಆರ್ ಪ್ರಕ್ರಿಯೆ ವೇಳಾಪಟ್ಟಿ ಬಗ್ಗೆ ನಮಗೆ ಅಸಮಾಧಾನವಿದೆ. ಅದರ ವಿರುದ್ಧವೂ ಕೋರ್ಟ್ ಮೊರೆ ಹೋಗುತ್ತೇವೆ. ನಾವು ಎಲ್ಲರಿಗೂ ಮತದಾನದ ಹಕ್ಕು ರಕ್ಷಣೆ ಮಾಡಬೇಕು ಎಂದು ಪುಟ 2ಕ್ಕೆ

# ಚಂಪತ್ ರಾಯ್‌ಗೆ 'ಗೇಟ್ ಪಾಸ್'

## ಅಯೋಧ್ಯೆ ರಾಮಮಂದಿರದಲ್ಲಿ ದೇಣಿಗೆ ಕಳವು ಪ್ರಕರಣ

ಲಕ್ನೋ: ಅಯೋಧ್ಯೆ ರಾಮ ಮಂದಿರದಲ್ಲಿ ದೇಣಿಗೆ ಕಳ್ಳತನ ವಿವಾದದ ನಡುವೆ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ರಾಜೀನಾಮೆಯನ್ನು ಟ್ರಸ್ಟ್ ಸಭೆಯಲ್ಲಿ ಅಂಗೀಕರಿಸಲಾಗಿದೆ. ಬಜರಂಗ್ ಬಾಗ್ರಾ ಅವರನ್ನು ಹೊಸ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಟ್ರಸ್ಟಿ ಡಾ. ಅನಿಲ್ ಮಿಶ್ರಾ ಸಹ ರಾಜೀನಾಮೆ ನೀಡಿದ್ದಾರೆ.

ಆದರೆ, ಟ್ರಸ್ಟ್ನಿಂದ ಇನ್ನೂ ಅಧಿಕೃತ ಘೋಷಣೆ ಆಗಿಲ್ಲ. ಘೋಷಣೆ ನಂತರ ಅಂತಿಮ ವಿವರಗಳು ಸ್ಪಷ್ಟವಾಗುತ್ತವೆ. ನಿರ್ಣಾಯಕ ಸಭೆಗೆ ಮೊದಲು, ಟ್ರಸ್ಟ್ ಅಧ್ಯಕ್ಷ ಮಹಂತ್ ನೃತ್ಯ ಗೋಪಾಲ್ ದಾಸ್ ಈ ವಿಷಯದ ಬಗ್ಗೆ ಮೌನ ಮುರಿದು ಮಾತನಾಡಿದರು. ಕಳವು ಘಟನೆಯಿಂದ ತಮಗೆ ತೀವ್ರ ನೋವಾಗಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಈ ಪಾಪದಲ್ಲಿ ಭಾಗಿಯಾಗಿರುವವರಿಗೆ ಕಠಿಣ ಶಿಕ್ಷೆ ವಿಧಿಸುತ್ತಾರೆ ಎಂದು ಆಶಿಸಿದ್ದಾರೆ. ಟ್ರಸ್ಟ್ ಸಭೆಯಲ್ಲಿ, ದೇವಾಲಯದಿಂದ ಕಾಣಿಕೆಗಳ ಕಳ್ಳತನ ಆರೋಪದ ತನಿಖೆ ಮತ್ತು ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಟ್ರಸ್ಟಿ ಡಾ. ಅನಿಲ್ ಮಿಶ್ರಾ ಅವರ ರಾಜೀನಾಮೆಯನ್ನು ಅಂಗೀಕರಿಸಲಾಯಿತು. ಪುಟ 2ಕ್ಕೆ



### ಟ್ರಸ್ಟ್ ಸಭೆಗೆ ಚಂಪತ್, ಗೋಪಾಲ್‌ಗೆ ನಿಷೇಧ

**ಅಯೋಧ್ಯೆ:** ರಾಮ ಮಂದಿರ ದೇಣಿಗೆ ಹಗರಣದ ಹಿನ್ನೆಲೆಯಲ್ಲಿ ಅಯೋಧ್ಯೆ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಸಭೆಗೆ ವಿವಾದಿತ ನಾಯಕರಿಗೆ ಪ್ರವೇಶ ನಿರಾಕರಿಸಲಾಗಿದೆ.

ಟ್ರಸ್ಟ್ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಹಾಗೂ ಟ್ರಸ್ಟಿ ಗೋಪಾಲ್ ರಾವ್ ಅವರಿಗೆ ಈ ಮಹತ್ವದ ಪುಟ 2ಕ್ಕೆ

# ವಿದ್ಯಾರ್ಥಿನಿಗೆ ಚಾಕು ಇರಿತ

**ಮಂಗಳೂರು:** ಬಸ್ ನಿಲ್ದಾಣದಲ್ಲಿ ಕಾಯುತ್ತಿದ್ದ ಪಿಯುಸಿ ವಿದ್ಯಾರ್ಥಿನಿಗೆ ಯುವಕನೊಬ್ಬ ಚಾಕುವಿನಿಂದ ಇರಿದು ಗಾಯಗೊಳಿಸಿರುವ ಘಟನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಮವಾರ ನಡೆದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಮೊಂಟಿಮಾರು ಪಡ್ಪು ಬಸ್ ನಿಲ್ದಾಣದಲ್ಲಿ ಈ ಘಟನೆ ನಡೆದಿದೆ. ಆರೋಪಿಯನ್ನು ಮೊಂಟಿಮಾರು ಪಡ್ಪುವಿನ ನಿವಾಸಿ ಜವ್ವಾರ್ (28) ಎಂದು ಗುರುತಿಸಲಾಗಿದೆ. ಈತ ಬಸ್ ನಿಲ್ದಾಣದ ಬಳಿ ದಿನಸಿ ಅಂಗಡಿ ಇಟ್ಟುಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.



17 ವರ್ಷದ ವಿದ್ಯಾರ್ಥಿನಿ ಕಾಲೇಜಿಗೆ ಹೋಗಲು ಬಸ್‌ಗಾಗಿ ಕಾಯುತ್ತಿದ್ದಾಗ ಆರೋಪಿ ಆಕೆಯ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದ್ದಾನೆ. ಬಸ್ ನಿಲ್ದಾಣದಲ್ಲಿದ್ದ ಪ್ರಯಾಣಿಕರು ಕೂಗಾಡಿದಾಗ, ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾನೆ. ಗಾಯಗೊಂಡ ವಿದ್ಯಾರ್ಥಿನಿಯನ್ನು ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪ್ರಕರಣ ದಾಖಲಿಸಲಾಗಿದೆ ಮತ್ತು ತಲೆಮರೆಸಿಕೊಂಡಿರುವ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲು ವಿಶೇಷ ಪೊಲೀಸ್ ತಂಡವನ್ನು ರಚಿಸಲಾಗಿದೆ. ಈ ದಾಳಿಯ ಹಿಂದಿನ ಉದ್ದೇಶವೇನೆಂಬುದು ಇನ್ನೂ ತಿಳಿದುಬಂದಿಲ್ಲ. ತನಿಖೆಯ ಸಂದರ್ಭದಲ್ಲಿ ಅದನ್ನು ಖಚಿತಪಡಿಸಿಕೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

# ಎಸ್‌ಐಆರ್ ಮರು ಪರಿಷ್ಕರಣೆ ಇಲ್ಲ

## ರಾಜ್ಯಕ್ಕೆ ಬಂದಿಳಿದ ಚುನಾವಣಾ ಆಯೋಗದ ಅಧಿಕಾರಿಗಳ ತಂಡ

**ಬೆಂಗಳೂರು:** ರಾಜ್ಯದಲ್ಲಿ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಗಂಭೀರ ವಿವಾದ ಮತ್ತು ರಾಜಕೀಯ ಆರೋಪದ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗದ ಹಿರಿಯ ಅಧಿಕಾರಿಗಳ ತಂಡ ಸೋಮವಾರ ಬೆಂಗಳೂರಿಗೆ ದೌಡಾಯಿಸಿದೆ.




ಉಪ ಚುನಾವಣಾ ಆಯುಕ್ತ ಸಂಜಯ್ ಕುಮಾರ್ ನೇತೃತ್ವದ ತಂಡ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕೇಂದ್ರ ಕಚೇರಿಯಲ್ಲಿ ರಾಜ್ಯ ಚುನಾವಣಾ ಅಧಿಕಾರಿಗಳು ಮತ್ತು ಜಿಬಿಎ ಆಡಳಿತಾಧಿಕಾರಿಗಳೊಂದಿಗೆ ಮಹತ್ವದ ಸಭೆ ನಡೆಸಿದೆ. ವಿರೋಧ ಪಕ್ಷಗಳು ಮಾಡಿರುವ ಆರೋಪಗಳು ಮತ್ತು ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಆಳವಾಗಿ ಚರ್ಚಿಸಿದ ಆಯೋಗ, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದೆ.

ಎಸ್‌ಐಆರ್ ಪ್ರಕ್ರಿಯೆ ಪುನರ್ ಪರಿಶೀಲನೆ ಇಲ್ಲ ಎಂದು ಆಯೋಗ ಸ್ಪಷ್ಟಪಡಿಸಿದೆ. ಈ ಮೂಲಕ ವಿರೋಧ ಪಕ್ಷಗಳ ಆರೋಪಗಳಿಗೆ ತೆರೆ ಎಳೆದಿದೆ. ಪ್ರತಿ ಮನೆಗೆ ಭೇಟಿ ನೀಡಿ ಮತದಾರರ ವಿವರ ಪರಿಷ್ಕರಿಸುವಂತೆ ಬಿಎಲ್‌ಓಗಳಿಗೆ ಕಡ್ಡಾಯ ಸೂಚನೆ ನೀಡಲಾಗಿದೆ. ಯಾವುದೇ ಧಾರ್ಮಿಕ ಕೇಂದ್ರ ಅಥವಾ ಸಮೂಹ ಸಭೆಗಳಲ್ಲಿ ಫಾರ್ಮ್ ವಿತರಿಸುವಂತಿಲ್ಲ ಎಂದು ಆಯೋಗ ಸೂಚಿಸಿದೆ. ಪುಟ 2ಕ್ಕೆ

# ಕುಸಿದುಬಿದ್ದು ಬಿಎಲ್‌ಓ ಸಾವು

**ಶಿವಮೊಗ್ಗ:** ಎಸ್‌ಐಆರ್ ಕರ್ತವ್ಯದ ಸಂದರ್ಭದಲ್ಲಿ ಬಿಎಲ್‌ಓ ಕುಸಿದು ಬಿದ್ದು ಮೃತಪಟ್ಟಿರುವ ಘಟನೆ ಜಿಲ್ಲೆಯ ಭದ್ರಾವತಿ ತಾಲೂಕಿನ ಕಲ್ಲಾಪುರ ಬಳಿಯ ಕೋಡಿ ಹೊಸೂರು ಗ್ರಾಮದಲ್ಲಿ ನಡೆದಿದೆ.



ಭದ್ರಾವತಿ ಕಲ್ಲಾಪುರದ ಅಂಗನವಾಡಿ ಶಿಕ್ಷಕಿ ಮಂಜುಳಾ (50) ಮೃತಪಟ್ಟವರು. ಅರಕರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಲ್ಲಾಪುರ ಬಳಿಯ ಕೋಡಿ ಹೊಸೂರು ಗ್ರಾಮದ ಅಂಗನವಾಡಿಯಲ್ಲಿ ಎಸ್‌ಐಆರ್ ಕೆಲಸ ಮಾಡುತ್ತಿದ್ದರು. ಈ ವೇಳೆ ಸೋಮವಾರ ಮಧ್ಯಾಹ್ನ ಏಕಾಏಕಿ ಕುಸಿದು ಬಿದ್ದಿದ್ದಾರೆ.

ಅವರ ಜೊತೆ ಕೆಲಸ ಮಾಡುತ್ತಿದ್ದ ಪುಟ 2ಕ್ಕೆ

# ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ಕಡ್ಡಾಯ: ಪ್ರಿಯಾಂಕ್

**ಬೆಂಗಳೂರು:** ನಾನು ಗೃಹಸಚಿವನಾಗಿ ಇರುವವರೆಗೂ ರಾಜ್ಯದಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ಕಡ್ಡಾಯ ಎಂದು ಸಚಿವ ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದರು.



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಡುವಿನ ಸಂಘರ್ಷ ಹೊಸ ತಿರುವು ಪಡೆದುಕೊಂಡಿದೆ. ಅವಕಾಶ ಸಿಕ್ಕಾಗಲೆಲ್ಲಾ ಆರ್.ಎಸ್.ಎಸ್ ವಿರುದ್ಧ ವಾಗ್ದಾಳಿ ನಡೆಸುವ ಸಚಿವ ಪ್ರಿಯಾಂಕ್ ಖರ್ಗೆ ಈಗ ಸಂಘಕ್ಕೆ ಮತ್ತೊಂದು ಬಿಗ್ ಶಾಕ್ ನೀಡಿದ್ದಾರೆ.



ಮಾಧ್ಯಮಗಳ ಜೊತೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ನಾನು ಈಗಾಗಲೇ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಪತ್ರ ಬರೆದಿದ್ದೇನೆ. ಪುಟ 2ಕ್ಕೆ

# ಸರ್ಕಾರದ ಹಸ್ತಕ್ಷೇಪವಿಲ್ಲ 'ಸರ್'

## ಸರ್ಕಾರ ಜಾಗೃತಿಗೆ ವಿಪಕ್ಷಗಳ ಆತಂಕ: ಸಿಎಂ ಡಿಕೆಶಿ ತಿರುಗೇಟು

**ಬೆಂಗಳೂರು:** ರಾಜ್ಯದಲ್ಲಿ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಸರ್ಕಾರ ಯಾವುದೇ ರೀತಿಯ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದರು.

ಬೆಂಗಳೂರಿನಲ್ಲಿ ಚುನಾವಣಾ ಆಯೋಗಕ್ಕೆ ಎನ್‌ಡಿಎ ನಾಯಕರು ನೀಡಿರುವ ದೂರಿನ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್ ಐ ಆರ್ ಬಗ್ಗೆ ಸರ್ಕಾರ ಸೃಷ್ಟಿಸುತ್ತಿರುವ ದೊಡ್ಡ ಪ್ರಮಾಣದ ಜಾಗೃತಿಯಿಂದ ವಿರೋಧ ಪಕ್ಷ ಚಿಂತಿತವಾಗಿದೆ ಎಂದು ತಿರುಗೇಟು ನೀಡಿದರು.

ಬಡವರು ಮತ್ತು ಅಲ್ಪಸಂಖ್ಯಾತರನ್ನು ಸಬಲೀಕರಣಗೊಳಿಸುವ ಸರ್ಕಾರದ ಪ್ರಯತ್ನಗಳು ವಿರೋಧ ಪಕ್ಷದ ಹತಾಶೆಗೆ ಕಾರಣ. ಸರ್ಕಾರ ಎಸ್‌ಐಆರ್‌ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಸರ್ಕಾರ ಈ ಪ್ರಕ್ರಿಯೆಯ ಬಗ್ಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಜಾಗೃತಿ ಮೂಡಿಸುತ್ತಿರುವುದರಿಂದ ವಿರೋಧ ಪಕ್ಷವು ಚಿಂತಿತವಾಗಿದೆ. ಸುಮಾರು 45 ಮಿಲಿಯನ್ (4.5 ಕೋಟಿ) ಜನರು ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ಪಡೆದಿದ್ದಾರೆ. ಅವರಿಗೆ ಈ ಪ್ರಮಾಣಪತ್ರಗಳನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡುವ ಸೌಲಭ್ಯವನ್ನು ನೀಡಲಾಗಿದೆ.



ಬಡವರು ಮತ್ತು ಅಲ್ಪಸಂಖ್ಯಾತರು ತೊಂದರೆಗಳನ್ನು ಎದುರಿಸಬೇಕೆಂದು ಮಾತ್ರ ವಿರೋಧ ಪಕ್ಷವು ಬಯಸುತ್ತದೆ ಎಂದು ಶಿವಕುಮಾರ್ ಆರೋಪಿಸಿದರು.

ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸುವಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಮಹತ್ವವನ್ನು ಒತ್ತಿ ಹೇಳಿದ ಅವರು, ಪ್ರತಿಯೊಬ್ಬರೂ ಮತದಾನದ ಹಕ್ಕನ್ನು ಪಡೆಯುವುದನ್ನು ನಾವು ಖಚಿತಪಡಿಸಿಕೊಳ್ಳುತ್ತಿದ್ದೇವೆ. ನಾವು ಮಾಡಿದ ಕೆಲಸವನ್ನು ವಿರೋಧ ಪಕ್ಷಗಳು ಪ್ರಶಂಸಿಸಬೇಕು. ನಮ್ಮ ಪಕ್ಷದ ಕಾರ್ಯಕರ್ತರು ಜಾಗರೂಕರಾಗಿರಲು ನಾನು ಸೂಚಿಸಿದ್ದೇನೆ. ವಿರೋಧ ಪಕ್ಷಗಳು ಟೀಕಿಸಲು ಮಾತ್ರ ಮಾತನಾಡುತ್ತವೆ ಎಂದರು.

### ಬಾಂಗ್ಲಾ ವಲಸಿಗರ ವಿರುದ್ಧ ನೀವೇಕೆ ಕ್ರಮಕೈಗೊಳ್ಳಲಿಲ್ಲ?

ಬಾಂಗ್ಲಾದೇಶಿ ವಲಸಿಗರು ಎಲ್ಲಿದ್ದಾರೆಂದು ನಮಗೆ ತಿಳಿಸಿ. ಅವರು ಅಲ್ಲಿದ್ದರೆ, ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಏಕೆ ಕ್ರಮ ಕೈಗೊಳ್ಳಲಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಪ್ರಶ್ನಿಸಿದರು?

ವಿಪಕ್ಷಗಳು ಎಷ್ಟು ಬೇಕಾದರೂ ಟೀಕಿಸಲಿ. ಟೀಕೆಗಳು ಮಾಯವಾಗುತ್ತವೆ, ಆದರೆ ಒಳ್ಳೆಯ ಕೆಲಸಗಳು ಉಳಿಯುತ್ತವೆ. ಕರ್ನಾಟಕ ಸರ್ಕಾರ ಪ್ರಾರಂಭಿಸಿದ 'ಐದು ಖಾತರಿಗಳು' ಈಗ ರಾಷ್ಟ್ರಮಟ್ಟದಲ್ಲಿ ಅನುಕರಿಸಲ್ಪಡುತ್ತಿವೆ. ನಾವು ಐದು ಖಾತರಿ ಯೋಜನೆಗಳನ್ನು ನೀಡಿದ್ದೇವೆ. ಜನರಿಗೆ ಆರ್ಥಿಕ ನೆರವು ನೀಡಲು ನಾವು ಈ ಖಾತರಿಗಳನ್ನು ಪರಿಚಯಿಸಿದ್ದೇವೆ. ನಾವು ಜಾರಿಗೆ ತಂದ ನಿರ್ಧಾರಗಳನ್ನು ಈಗ ಕೇಂದ್ರ ಸರ್ಕಾರವೂ ಅಳವಡಿಸಿಕೊಳ್ಳುತ್ತಿದೆ. ಕರ್ನಾಟಕವು ಇತರರಿಗೆ ಮಾದರಿಯಾಗಿದೆ" ಎಂದು ಸಿಎಂ ಹೇಳಿದರು.

# ಕೇಂದ್ರ ಯೋಜನೆ ಸಮರ್ಪಕ ಅನುಷ್ಠಾನ

## ರಾಜ್ಯ ಸರ್ಕಾರದ ಕಾರ್ಯಕ್ಕೆ ಕೇಂದ್ರ ಅಧಿಕಾರಿಗಳ ತಂಡದ ಶ್ಲಾಘನೆ

**ಬೆಂಗಳೂರು:** ಕರ್ನಾಟಕ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಪ್ರಮುಖ ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನ ಸುಗಮವಾಗಿ ನಡೆಯುತ್ತಿದೆ. ಯೋಜನೆಗಳ ಪರಿಣಾಮಕಾರಿ ಜಾರಿಗಾಗಿ ರಾಜ್ಯ ಸರ್ಕಾರದೊಂದಿಗೆ ನಿರಂತರ ಸಹಕಾರ ಇರಲಿದೆ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಉನ್ನತ ಮಟ್ಟದ ಅಧಿಕಾರಿಗಳ ತಂಡ ತಿಳಿಸಿದೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಉಪ ಮಹಾನಿರ್ದೇಶಕರು ಹಾಗೂ ಸಂಖ್ಯಾಶಾಸ್ತ್ರ ಸಲಹೆಗಾರ ಅಲ್ತಾಫ್ ಹುಸೇನ್ ಹಾಜಿ ನೇತೃತ್ವದ ತಂಡ ಸೋಮವಾರ ರಾಜ್ಯಕ್ಕೆ ಭೇಟಿ ನೀಡಿತ್ತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತರಾದ ದಿವ್ಯ ಪ್ರಭು ಅವರೊಂದಿಗೆ ಬೆಂಗಳೂರಿನಲ್ಲಿ ಸಭೆ ನಡೆಸಿ 'ವಿಕಸಿತ ಭಾರತ– ಗ್ಯಾರಂಟಿ ಫಾರ್ ರೋಜ್ಗಾರ್ ಯೋಜನೆ ಅನುಷ್ಠಾನದ ಪ್ರಗತಿ ಪರಿಶೀಲಿಸಿತು.

ಪ್ರಧಾನ ಮಂತ್ರಿ ಆವಾಸ್ ಯೋಜನೆ–ಗ್ರಾಮೀಣ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಹಾಗೂ ರಾಷ್ಟ್ರೀಯ ಸಾಮಾಜಿಕ ಸಹಾಯ ಕಾರ್ಯಕ್ರಮ ಸೇರಿದಂತೆ ವಿವಿಧ ಕೇಂದ್ರ ಪುರಸ್ಕೃತ ಯೋಜನೆಗಳ ಅನುಷ್ಠಾನ ಕುರಿತು ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಮಗ್ರ ಪರಿಶೀಲನಾ ಸಭೆ ನಡೆಯಿತು.

ಈ ಸಂದರ್ಭದಲ್ಲಿ ಕೇಂದ್ರ ಸಚಿವಾಲಯದ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯ ತಾಂತ್ರಿಕ ನೆರವು, ಮೇಲ್ವಿಚಾರಣೆ ಹಾಗೂ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಭರವಸೆ ನೀಡಿದರು.



ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಇಲಾಖೆಗಳ ನಡುವಿನ ಸಮನ್ವಯ, ನಿರಂತರ ಮೇಲ್ವಿಚಾರಣೆ ಮತ್ತು ದತ್ತಾಂಶ ಆಧಾರಿತ ಆಡಳಿತ ವ್ಯವಸ್ಥೆ ಅತ್ಯಂತ ಅಗತ್ಯವೆಂದು ಅಧಿಕಾರಿಗಳು ಅಭಿಪ್ರಾಯಪಟ್ಟರು.

ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅಧೀನ ಕಾರ್ಯದರ್ಶಿ ಅನಿಲ್ ಕುಮಾರ್ ಕೆ.ಸಿ ಹಾಗೂ ಗ್ರಾಮೀಣ ವಸತಿ ವಿಭಾಗದ ಸಹಾಯಕಕ ನಿರ್ದೇಶಕ ಬಲ್‌ದೇವ್ ಕುಮಾರ್ ವರ್ಮಾ ಉಪಸ್ಥಿತರಿದ್ದರು.

# ಭೀಮನಕಿಂಡಿ ಬೆಟ್ಟದಲ್ಲಿ ಚಾರಣ: ಪರಿಸರ ಪಾಠ

## ಹಚ್ಚ ಹಸಿರಿನ ಬನಸಿರಿಯಲ್ಲಿ ಮೈಮರೆತ ಚಿಣ್ಣರು

## ಪರಿಸರದ ಮಹತ್ವ ಅರಿತು ಭೂ ತಾಯಿಗೆ ಶರಣು

## ಬೆಟ್ಟದ ತುದಿಯಲ್ಲಿ ಪರಿಸರ ಹಾಡು–ಪಾಡು, ಸುಸ್ಥಿರ ಬದುಕಿನ ಚಿಂತನೆ

## ಹಲಗೂರಿನ ಅನಿಕೇತನ ಪ್ರತಿಷ್ಠಾನ ಪರಿಸರ ಕೈಂಕರ್ಯ

ಮಂಡ್ಯ: ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು ಎಂಬಂತೆ ಹಚ್ಚ ಹಸಿರಿನ ಪ್ರಕೃತಿಯ ಮಡಿಲಲ್ಲಿ ಹಿರಿಯ ಕಿರಿಯರೆಲ್ಲ ಸೇರಿ ಪರಿಸರ ಸಂರಕ್ಷಣೆ ಚಿಂತನೆ ನಡೆಸಿದ ವಿಶೇಷ ಸಂದರ್ಭ ಭಾನುವಾರ ಒದಗಿ ಬಂದಿತು.

ಮನೆಯಲ್ಲಿ ಕುಳಿತೋ ಮಲಗಿಯೋ ವಾರಾಂತ್ಯ ಕಳೆಯಬೇಕಾದವರೆಲ್ಲ ಹಸಿರು ಹೊದಿಕೆಯ ಗುಡ್ಡದಲ್ಲಿ ಮರಗಿಡಗಳ ನಡುವೆ ನಡೆದಾಡಿ ಓಡಾಡಿ ನಲಿದಾಡಿ ಮಕ್ಕಳಂತೆ ಸಂಭ್ರಮಿಸಿದ ಆ ಮಧುರ ಕ್ಷಣಗಳು ಕಚಗುಳಿ ಇಟ್ಟಿದ್ದು, ಕನಕಪುರ ತಾಲ್ಲೂಕು ಸಾತನೂರು ಹೋಬಳಿಯ ಕಂಚನಹಳ್ಳಿ ಸಮೀಪದ ಭೀಮನಕಿಂಡಿ ಬೆಟ್ಟದಲ್ಲಿ. ಪರಿಸರ ಗೀತೆಗಳ ಮೂಲಕ ಹಾಡಿ ನಲಿದು ಪರಿಸರ ಚಿಂತನೆಗಳಿಂದ ಅಂತರ್ಮುಖಿಯಾದರು.

ಹಲಗೂರಿನ ಅನಿಕೇತನ ಪ್ರತಿಷ್ಠಾನದ ಅಧ್ಯಕ್ಷರಾದ ಉಮೇಶ್ ದಡಮಹಳ್ಳಿ ಮತ್ತು ಸಮಾನ ಮನಸ್ಕ ಸ್ನೇಹಿತರು ಆಯೋಜಿಸಿದ್ದ ಭೀಮನಕಿಂಡಿ ಬೆಟ್ಟದ ಚಾರಣದಲ್ಲಿ ಪರಿಸರ ಮೇಲಿನ ಪ್ರೀತಿ, ಬೆಟ್ಟದ ಮೇಲಿನ ಶ್ರೀ ಬಸವೇಶ್ವರ (ಭೀಮೇಶ್ವರ ) ದೇವರ ಮೇಲಿನ ಭಕ್ತಿ ಸಂಗಮವಾಗಿ ಭಾಗವಹಿಸಿದ್ದವರ ತನು ಮನ ಹಗುರಾಗಿಸಿತು. ಚಿಂತನೆಗಳ ಮೂಲಕ ಪರಿಸರ ರಕ್ಷಣೆ ಬದ್ಧತೆ ಹೆಚ್ಚಾದರೆ, ಕಡಿದಾದ ಬೆಟ್ಟ ಹತ್ತಿ ಇಳಿದಿದ್ದರಿಂದ ದೇಹಕ್ಕೆ ಉತ್ತಮ ವ್ಯಾಯಾಮ ದೊರೆಯಿತು.

ಬೆಂಗಳೂರು, ಕಲಬುರ್ಗಿ, ಮೈಸೂರು, ಮಂಡ್ಯ, ರಾಮನಗರ ಜಿಲ್ಲೆಗಳಿಂದ ಕುಟುಂಬ ಸಮೇತ ಆಗಮಿಸಿದ್ದ ಚಾರಣಾಸಕ್ತರು ಬೆಟ್ಟ ಏರಿ ಇಳಿಯುವಾಗ ನಲಿದು ಉಲಿದು ಆನಂದಪಟ್ಟರು. ಬೆಟ್ಟವು ಅರಣ್ಯ ಇಲಾಖೆಯ ಕಣ್ಗಾವಲಿನಲ್ಲಿ ಸಂರಕ್ಷಿತ ಪ್ರದೇಶವಾಗಿದ್ದರೂ ಬೆಟ್ಟದ ಮೇಲಿನ ದೇವರ ದರ್ಶನ ಕೃಪೆಯಿಂದ ಹೋಗಿ ಬರಲು ಇಲಾಖೆ ಅವಕಾಶ ಮಾಡಿಕೊಟ್ಟಿದೆ. ಸಂತಸವೆಂದರೆ, ಪರಿಸರ ಸಂರಕ್ಷಣೆಯ ಅರಿವು ಹೆಚ್ಚಾಗಿರುವುದರಿಂದ ಚಾರಣಿಗರು ಎಲ್ಲೂ ತಾವು ಬಳಸಿದ ಪ್ಲಾಸ್ಟಿಕ್ ಬಾಟಲ್ , ಚೀಲ ಅಥವಾ ಪೇಪರ್ಗಳನ್ನು ಬಿಸಾಡಿಲ್ಲ. ಈ ನಿಟ್ಟಿನಲ್ಲಿ ಐಷಾರಾಮಿ ಹೋಟೆಲ್ನ ಲಾನ್ ನಂತೆ ಇಡೀ ಬೆಟ್ಟ ಯಾವುದೇ ಕಸದಿಂದ ಶೇ.100ರಷ್ಟು ಮುಕ್ತವಾಗಿದೆ.

ನವೋಲ್ಲಾಸ ಚಾರಣ ಪ್ರಿಯರ ಸಮ್ಮಿಲನ ಕಾರ್ಯಕ್ರಮವನ್ನು ಸುಸ್ಥಿರ ಬದುಕಿಗಾಗಿ ಪರಿಸರ ನಡಿಗೆ ಎಂಬ ಉದ್ದೇಶದೊಂದಿಗೆ ಆಯೋಜಿಸಲಾಗಿತ್ತು. ಭೂಮಿ, ಅರಣ್ಯ, ವನ್ಯಜೀವಿಗಳು, ಪರಿಸರದೊಂದಿಗೆ ಬೆಸೆದುಕೊಂಡಿರುವ ಸಾಮಾಜಿಕ ಬದುಕು, ಕಾಡು ಕಲಿಸುವ ಪಾಠ, ಪ್ರಕೃತಿಯ ಭಾಗವಾಗಿರುವ ಮನುಷ್ಯ ಅದರೊಂದಿಗೆ ಬೆರೆತು ಜೀವನ ಸಾರ್ಥಕ್ಯಗೊಳಿಸಿಕೊಳ್ಳುವ ಪರಿ, ನಾವು ಬಾಳಿ ಮುಂದಿನ ಪೀಳಿಗೆಗಾಗಿ ಸುಸ್ಥಿರ ಬದುಕು ನಡೆಸುವುದು ಹೇಗೆ ಎಂಬೆಲ್ಲ ವಿಚಾರಗಳನ್ನು ಮಾತು, ಹಾಡಿನ ಮೂಲಕ ಚಾರಣದಲ್ಲಿ ಭಾಗವಹಿಸಿದ್ದ ಕಲಾವಿದರು, ಸಂಘಟಕರು, ಅಧಿಕಾರಿಗಳು, ಪರಿಸರ ತಜ್ಞರು, ಶಿಕ್ಷಣ ಪ್ರೇಮಿಗಳು, ಚಿಂತಕರು ಕಟ್ಟಿಕೊಟ್ಟರು. ಈ ಚಾರಣದಿಂದ ಪ್ರೇರಣೆಗೊಂಡು ಮತ್ತೆ ಮತ್ತೆ ಬೆಟ್ಟ ಗುಡ್ಡಗಳನ್ನು ಹತ್ತುವ ಇಂಗಿತವನ್ನು ಭಾಗವಹಿಸಿದ್ದವರು ವ್ಯಕ್ತಪಡಿಸಿದರು.















### ಚಾರಣಿಗರಿಗೆ ಅಮೃತ ಆಹಾರ

ಪೂರ್ವ ನಿಗದಿಯಂತೆ ಮುಂಜಾನೆ 6.30ಕ್ಕೆ ತಾಳು ಬೆಟ್ಟಕ್ಕೆ ಆಗಮಿಸಿದ ಎಲ್ಲರಿಗೂ ಮೊಳಕೆ ಬರಿಸಿದ ಕಡಲೆಕಾಳು, ಹಸಿರುಕಾಳು, ಕಡಲೆಬೀಜ, ಕಾಯಿಚೂರು, ಸೌತೆಕಾಯಿ, ಸಾವಯವ ಬೆಲ್ಲವನ್ನೊಳಗೊಂಡ ಅಮೃತ ಆಹಾರವನ್ನು ವಿತರಿಸಲಾಯಿತು. ಪಾಸಿಟಿವ್ ತಮ್ಮಯ್ಯ ಗುರುಗಳು ಅಮೃತ ಆಹಾರದ ಮಹತ್ವವನ್ನು ವಿವರಿಸಿ ಮೊಳಕೆ ಬರಿಸಿದ ಆಹಾರ ಅತ್ಯಂತ ಶ್ರೇಷ್ಠ. ಪ್ರತಿದಿನ ಬಳಸಿದರೆ ದೇಹಕ್ಕೆ ಬೇಕಾದ ಅಗತ್ಯ ಪೋಷಕಾಂಶ ದೊರೆಯುವುದು. ಸಂಸ್ಕರಿತ ಆಹಾರ, ಜಂಕ್ ಫುಡ್ ಮೃತ ಆಹಾರ. ಆರೋಗ್ಯಕ್ಕೆ ಹಾನಿ. ಕ್ಯಾನ್ಸರ್ ಕಾರಕ ಎಂದು ತಿಳಿ ಹೇಳಿದರು. ನನ್ನ ಆರೋಗ್ಯ, ನನ್ನ ಆಹಾರ, ನನ್ನ ಜವಾಬ್ದಾರಿ ಆಂದೋಲನ ಮುನ್ನಡೆಸುತ್ತಿರುವ ಪಾಸಿಟಿವ್ ತಮ್ಮಯ್ಯ ಗುರುಗಳು ತಾವೇ ಬರೆದಿರುವ ಆಹಾರವೇ ಅಮೃತ ದಿನಚರಿಯೇ ಜೀವನ ಪುಸ್ತಕವನ್ನು ಪ್ರತಿಯೊಬ್ಬ ಚಾರಣಿಗರಿಗೂ ಉಚಿತವಾಗಿ ವಿತರಿಸಿದರು.

### ಗಿಡನೆಟ್ಟು ಚಾರಣಕ್ಕೆ ಚಾಲನೆ

ನೈಸರ್ಗಿಕ ಕೃಷಿಕರು, ಮಾರ್ಗದರ್ಶಕರು ಹಾಗೂ ಯೋಗ ಗುರುಗಳಾದ ಪಾಸಿಟಿವ್ ತಮ್ಮಯ್ಯ ಅವರು ಹಣ್ಣಿನ ಗಿಡಗಳನ್ನು ನೆಡುವ ಮೂಲಕ ಚಾರಣಕ್ಕೆ ಚಾಲನೆ ನೀಡಿದರು. 75 ವರ್ಷದ ಪಾಸಿಟಿವ್ ತಮ್ಮಯ್ಯ ಗುರುಗಳು ಯುವಕರು/ಯುವತಿಯರು ನಾಚುವಂತೆ ಊರಿಗೋಲಿನ ಸಹಾಯವಿಲ್ಲದೆ ಎಲ್ಲರಿಗಿಂತಲೂ ಮೊದಲೇ ಬೆಟ್ಟವನ್ನೇರಿದರು. ಬೆಟ್ಟದ ತುದಿಯಲ್ಲಿ ಚಾರಣಿಗರನ್ನು ಉದ್ದೇಶಿಸಿ ಮಾತನಾಡಿ, ಚಾರಣದಲ್ಲಿ ನಡೆಯುವುದರಿಂದ ದೇಹಕ್ಕೆ ಹೆಚ್ಚು ಆಮ್ಲಜನಕ ಸರಬರಾಜಾಗಿ ದೇಹದ ಟಾಕ್ಸಿನ್ ಹೊರಹೋಗಿ ದೇಹಾರೋಗ್ಯ ಸುಧಾರಿಸುವುದು. ಆ ಮೂಲಕ ಮಾನಸಿಕ ಸ್ವಾಸ್ಥ್ಯ ಕೂಡ ವೃದ್ಧಿಸುವುದು. ತಿಂಗಳಿಗೊಮ್ಮೆ ಇಂತಹದ್ದು ನಡೆಯಲಿ. ದೇವರ ದರ್ಶನಕ್ಕೆ, ಗುರುಗಳ ದರ್ಶನಕ್ಕೋ ಬೆಟ್ಟಗುಡ್ಡಗಳನ್ನು ಹತ್ತಿದಾಗಲೂ ಇಂತದ್ದೇ ಲಾಭವಾಗುವುದು ಎಂದು ತಿಳಿಸಿದರು. ದುಡಿಮೆಯಲ್ಲಿ ಶೇ.30 ರಷ್ಟು ಅನ್ನು ಸಮಾಜಕ್ಕೆ ವಾಪಸ್ ನೀಡಬೇಕು ಎಂಬುದು ನನ್ನ ಸಂಕಲ್ಪ. ಪ್ರತಿಯೊಬ್ಬರು ಅನಾಥರು, ವೃದ್ಧರ ಪೋಷಣೆಗೋ ಅಥವಾ ಊರಿನ ಸ್ಮಶಾನ, ನಾಲಾ ಬದಿ ಅಥವಾ ಶಾಲಾವರಣದಲ್ಲಿ ಗಿಡ ನೆಡುವ ಮೂಲಕ ಸಮಾಜ ಸೇವೆ ಸಲ್ಲಿಸಬಹುದು. ಚಾಮರಾಜನಗರದಲ್ಲಿ ಕೋವಿಡ್ ಸಮಯದಲ್ಲಿ ಸತ್ತವರು ಆಕ್ಸಿಜನ್ ಸಿಗದೇ ಸತ್ತರೇ ಹೊರತು ದೇವರ ಶಾಪದಿಂದಲ್ಲ. ಮರಗಿಡಗಳಿಂದ ಹೇರಳವಾಗಿ ಆಮ್ಲಜನಕ ದೊರೆಯುತ್ತದೆ ಎಂದು ಪರಿಸರ ಪಾಠ ಮಾಡಿದರು.

ಚಾರಣ ರವಿ ಎಂದೇ ಹೆಸರಾಗಿರುವ ಮದ್ದೂರು ಮಹಿಳಾ ಸರ್ಕಾರಿ ಕಾಲೇಜು ಪ್ರಾಂಶುಪಾಲರಾದ ಪ್ರೊ. ರವಿ ಸಿ. ಮೈಸೂರು ಜಿಲ್ಲೆ ಸಾಮಾಜಿಕ ಅರಣ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಂಕರೇಗೌಡ, ಕೆಎಂಇಆರ್ ಸಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಪ್ರಧಾನ ವ್ಯವಸ್ಥಾಪಕರು ಚಿಕ್ಕರಾಜೇಂದ್ರ ಡಿ.ಕೆ., ಮಂಡ್ಯ ಜಿಲ್ಲೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಮನುಜಶ್ರೀ ಚಾರಣದಲ್ಲಿ ಭಾಗವಹಿಸಿ ಅರಣ್ಯ ಸಂರಕ್ಷಣೆ, ಯುವಶಕ್ತಿ, ಚಾರಣದ ಮಹತ್ವ ಕುರಿತು ಮಾತನಾಡಿದರು.*

ಮಂಡ್ಯ ವಕೀಲರ ಸಂಘದ ಉಪಾಧ್ಯಕ್ಷ ದೇವರಾಜ ಎಸ್. ಪಂಡಿತ್, ಮಾಂಡವ್ಯ ಪದವಿಪೂರ್ವ ಕಾಲೇಜು ಪ್ರಾಂಶುಪಾಲರಾದ ಕೆ.ಕೆ. ಚಂದ್ರಶೇಖರ್, ಪತ್ರಕರ್ತ ಹಾಗೂ ಲೇಖಕ ಚಂದ್ರಶೇಖರ ದ.ಕೋ.ಹಳ್ಳಿ, ರೈತ ಸಂಘಟಕ ಕಾರಸವಾಡಿ ಮಹಾದೇವ, ನಿವೃತ್ತ ಬಿಇಒ ಚಿಕ್ಕಸ್ವಾಮಿ, ನಿವೃತ್ತ ಉಪನ್ಯಾಸಕ ರೇವಣ್ಣ, ಉಪನ್ಯಾಸಕರಾದ ಕೆ.ಸಿ.ಲೋಕೇಶ್, ಎಂ.ಸಿ. ಲೋಕೇಶ್, ಕಿರಣ್ ಸಬ್ಬನಹಳ್ಳಿ, ಅನಿಲ್ ಕುಮಾರ್, ಲೋಕೇಶ್ ಹುಲಿವಾನ, ಚಿಕ್ಕರಾಜು ಎಸ್. ಎನ್., ನಾ. ಲೋಕೇಶ ಸ್ಥಫತಿ, ಲೇಖಕಿ ಸರಿತಾ ಹೆಚ್. ಕಾಡುಮಲ್ಲಿಗೆ, ವಕೀಲ ತಿಮ್ಮೇಗೌಡ, ಸಂಘಟಕ ಪ್ರಕಾಶ್ ಟಿ.ಎಂ. ಮಳವಳ್ಳಿ, ಎಂ.ಕೆ. ವೆಂಕಟೇಶ್, ಅರುಣಕುಮಾರಿ ಕೆಂಪರಾಜು, ದೇವೇಗೌಡ ಬೇಲೂರು, ಕೆ.ಟಿ. ಜಗದೀಶ್ ಸೇರಿ 80ಕ್ಕೂ ಹೆಚ್ಚು ಮಂದಿ ಚಾರಣದಲ್ಲಿ ಭಾಗವಹಿಸಿದ್ದರು.

> ನಾನೊಬ್ಬ ಚಾರಣ ಪ್ರೇಮಿ. ಕಾಲೇಜಿನಲ್ಲಿ ಪಾಠ ಪ್ರವಚನ ಜೊತೆಗೆ ವಿದ್ಯಾರ್ಥಿಗಳು ಹಾಗೂ ಯುವ ಜನಾಂಗಕ್ಕೆ ಪರಿಸರ ಪಾಠ ಮಾಡುತ್ತಿರುತ್ತೇನೆ. ಅನಿಕೇತನ ಪ್ರತಿಷ್ಠಾನ ಇಂತದ್ದೊಂದು ಕೆಲಸ ಮಾಡಿ ಮಾದರಿಯಾಗಿದೆ.
>
> **ಪ್ರೊ. ರವಿ ಸಿ** ಪ್ರಾಂಶುಪಾಲರು, ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು.

### ಫೋಟೊ, ಹಾಡು, ಡ್ಯಾನ್ಸ್

ಚಾರಣದ ತಂಡದಲ್ಲಿ ಅರ್ಧದಷ್ಟಿದ್ದ ಮಕ್ಕಳು ಭೀಮನಕಿಂಡಿ ಬೆಟ್ಟದ ಹಸಿರಿನ ಸಿರಿಗೆ ಮನಸೋತರು. ಹುಚ್ಚೆದ್ದು ಕುಣಿದರು. ಅಲ್ಲಿನ ಹುಲ್ಲು, ಕಾಡು ಹಣ್ಣಿನ ಗಿಡಗಳು, ಮರಗಳು, ಬಳ್ಳಿಗಳನ್ನು ಪರಿಚಯ ಮಾಡಿಕೊಂಡು ಅಪ್ಪಿಕೊಂಡು ಮುದ್ದಾಡಿದರು. ಏರುವಾಗಿ ಕಾಲು ಜಾರಿ, ಕೈ ಜಾರಿ ಬೀಳುತ್ತಾ ಇನ್ನೊಬ್ಬರ ಆಸರೆ ಪಡೆದು ಬಚಾವ್ ಆದೆ ಎಂದು ನಿಟ್ಟುಸಿರು ಬಿಡುತ್ತಿದ್ದರು. ಶ್ರೀ ಬಸವೇಶ್ವರ ದೇವಸ್ಥಾನದ ಬೃಹತ್ ಬಂಡೆಯ ಕಮಾನಿನ ಕೆಳಗೆ ರಭಸವಾಗಿ ನುಗ್ಗುವ ಗಾಳಿಗೆ ಮೈಯೊಡ್ಡಿ ರೋಮಾಂಚನಗೊಂಡರು. ಬೆಟ್ಟದ ತುದಿಯ ಹೆಬ್ಬಂಡೆಯ ಮೇಲೆ ನಿಂತ ಚಿಣ್ಣಾರಾದಿಯಾಗಿ ಎಲ್ಲರೂ ಕೈಗಳನ್ನು ಅಗಲಿಸಿ ಎದುರಿಗೆ ಕಾಣುವ ಕಾವೇರಿ ಸಂರಕ್ಷಿತ ಅರಣ್ಯ ಪ್ರದೇಶದ ಮಲೈ ಮಹದೇಶ್ವರ ಬೆಟ್ಟ ಶ್ರೇಣಿಯ ಬೆಟ್ಟ ಗುಡ್ಡಗಳನ್ನು ಬಾಚಿ ತಬ್ಬಿಕೊಂಡು ಧನ್ಯತೆಯನ್ನು ಅನಿಭವಿಸಿದರು. ಕಚಗುಳಿ ಇಡುವ, ದೂಕುವ, ತಳ್ಳುವ, ಎಳೆಯುವ ಗಾಳಿಗೆ ಎಲ್ಲರೂ ಪುಳಕಗೊಂಡರು. ಇಡೀ ಬೆಟ್ಟವೇ ಒಂದು ಸುಂದರ ಕ್ಯಾನ್ವಾಸ್ ಆಗಿದ್ದುದ್ದರಿಂದ ಯಾವ ದಿಕ್ಕಿನಲ್ಲಿ ತೆಗೆದರೋ ಫೋಟೊಗಳಿಗೆ ಉತ್ತಮ ಫ್ರೇಮ್ ಸಿಗುತ್ತಿತ್ತು.

> ಅರಣ್ಯಗಳು ನಮ್ಮ ಶಕ್ತಿ ಕೇಂದ್ರಗಳು. ಜೀವ ವೈವಿಧ್ಯತೆಯೊಂದಿಗೆ ಪರಿಸರ ಸಮತೋಲನ ಕಾಪಾಡುವುವು. ಅಪಾರ ಔಷಧೀಯ ಗಿಡಗಳಿಗೆ ಆಸರೆ. ಮಳೆ ಬೆಳೆಗೆ ಮೂಲ ಕಾರಣ. ಅಂತಹ ಅಮೂಲ್ಯವಾದ ಅರಣ್ಯ ಸಂಪತ್ತನ್ನು ನಾವು ಕಾಪಾಡಿಕೊಂಡರೆ ನಮ್ಮ ಉಳಿಗಾಲ.
>
> **ಶಂಕರೇಗೌಡ** ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ, ಮೈಸೂರು ಜಿಲ್ಲೆ.

> ಇಂತಹ ಚಾರಣಗಳ ಮೂಲಕ ಮಕ್ಕಳಿಗೆ ಹಾಗೂ ಯುವ ಜನಾಂಗಕ್ಕೆ ಪರಿಸರದ ಮಹತ್ವವನ್ನು ತಿಳಿಸಿ ಕೊಡಬೇಕು. ಇದು ವ್ಯಕ್ತಿಗತ ಹಾಗೂ ಸಾಮಾಜಿಕ ಆರೋಗ್ಯದ ದೃಷ್ಟಿಯಿಂದಲೂ ಪ್ರಯೋಜನಕಾರಿ. ಇಂತಹ ಚಾರಣಗಳು ಹೆಚ್ಚು ಹೆಚ್ಚು ನಡೆಯಲಿ.
>
> **ಮನುಜಶ್ರೀ** ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.







# ದೇಶದ ಅಭಿವೃದ್ಧಿಗೆ ಸಹಕಾರ ಕ್ಷೇತ್ರದ ಪ್ರಮುಖ ಪಾತ್ರವಿದೆ: ಎಂ.ವಿ. ವೆಂಕಟೇಶ್

ರಾಮನಗರ: "ಸಹಕಾರದಿಂದ ಸಮೃದ್ಧಿ" ಎಂಬ ಧ್ಯೇಯದೊಂದಿಗೆ ಪ್ರಸಕ್ತ ಸಾಲಿನ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಆಯೋಜಿಸಲಾಗಿದೆ ಎಂದು ಸಹಕಾರ ಇಲಾಖೆಯ ಸಹಕಾರ ಸಂಘಗಳ ನಿಬಂಧಕರಾದ ಡಾ. ಎಂ.ವಿ. ವೆಂಕಟೇಶ್ ಅವರು ತಿಳಿಸಿದರು.

ಸಹಕಾರ ಇಲಾಖೆ, ಬೆಂಗಳೂರಿನ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ನಿ., ಬೆಂಗಳೂರು ದಕ್ಷಿಣ ಜಿಲ್ಲಾ ಸಹಾರ ಒಕ್ಕೂಟ ನಿ. ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಸಹಕಾರ ಸಪ್ತಾಹ ಆಚರಣೆ–2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಹಕಾರ ಕ್ಷೇತ್ರದ ಮಹತ್ವವನ್ನು ತಿಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರವು ಪ್ರತೀ ವರ್ಷ ಸಹಕಾರಿ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ ಎಂದರು.

ಮನುಷ್ಯ ಹುಟ್ಟಿನಿಂದ ಸಾವಿನವರೆಗೂ ಸಹಕಾರದಿಂದಲೇ ಜೀವನ ನಡೆಸುತ್ತಾನೆ. ಮನುಷ್ಯನಿಗೂ ಹಾಗೂ ಸಹಕಾರಕ್ಕೂ ಅವಿನಾಭಾವ ಸಂಬಂಧವಿದೆ. ಮಾನವನ ಪ್ರತೀ ಚಟುವಟಿಕೆಯಲ್ಲೂ ಸಹಕಾರ ಇಲಾಖೆಯ ಅವಲಂಭನೆ ಇರುತ್ತದೆ. ಸಹಕಾರದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

### ದೇಶದ ಅಭಿವೃದ್ಧಿಗೆ ಸಹಕಾರ ಕ್ಷೇತ್ರದ ಪ್ರಮುಖ ಪಾತ್ರ

ರೈತರ ತಲಾ ಆದಾಯ, ರಾಷ್ಟ್ರೀಯ ಉತ್ಪನ್ನ (ಜಿಡಿಪಿ), ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಲು ಹಾಗೂ ದೇಶದ ಅಭಿವೃದ್ಧಿಗೆ ಸಹಕಾರ ಸಂಘಗಳು ಪ್ರಮುಖ ಪಾತ್ರವಹಿಸುತ್ತವೆ. ಆದ್ದರಿಂದ ದೇಶಾದ್ಯಂತ ಸಹಕಾರ ಸಂಸ್ಥೆಗಳನ್ನು ಇನ್ನಷ್ಟು ಸದೃಢಗೊಳಿಸುವ ಅಗತ್ಯವಿದೆ ಎಂದು ತಿಳಿಸಿದರು.

ಸಹಕಾರ ಸಂಸ್ಥೆಗಳು ಶಕ್ತಿ ಕೇಂದ್ರಗಳಾಗಬೇಕು

ರಾಜ್ಯದ ಪ್ರತಿಯೊಂದು ಗ್ರಾಮಗಳಲ್ಲಿಯೂ ಸಹಕಾರ ಸಂಸ್ಥೆಗಳನ್ನು ಶಕ್ತಿ ಕೇಂದ್ರಗಳಾಗಿ ರೂಪಿಸುವ ನಿಟ್ಟಿನಲ್ಲಿ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಸಾಲ ನೀಡುವ ಸಂಸ್ಥೆಗಳಷ್ಟೇ ಅಲ್ಲದೆ 25ಕ್ಕೂ ಹೆಚ್ಚು ವಿವಿಧ ಸೇವೆಗಳನ್ನು ಒದಗಿಸುವ ಬಹುದ್ದೇಶದ ವಾಣಿಜ್ಯ ಕೇಂದ್ರಗಳಾಗಿ ಸಹಕಾರ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದು ತಿಳಿಸಿದರು.

### ದಕ್ಷತೆ, ಪ್ರಾಮಾಣಿಕತೆ ಮೆರೆಯಿರಿ



ರೈತರ ಮೂಲಭೂತ ಅಗತ್ಯಗಳನ್ನು ಪೂರೈಸುವಲ್ಲಿ ಸಹಕಾರ ಇಲಾಖೆಯ ಪಾತ್ರ ಮಹತ್ವದ್ದಾಗಿದ್ದು, ಈ ದಿಸೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ವೈವಿದ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ದೇಶದಲ್ಲಿಯೇ ರಾಜ್ಯ ಸಹಕಾರ ಕ್ಷೇತ್ರವನ್ನು ಸದೃಢವನ್ನಾಗಿಸಲು ಸಹಕಾರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವವರು ದಕ್ಷತೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದರು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಎಚ್.ಎನ್. ಅಶೋಕ್ ಅವರು ಮಾತನಾಡಿ, ಸರ್ಕಾರಿ ನೌಕರರ ವೇತನ, ಸರ್ಕಾರಿ ವಹಿವಾಟುಗಳೆಲ್ಲವೂ ಜಿಲ್ಲಾ ಮಟ್ಟದ ಡಿಸಿಸಿ ಬ್ಯಾಂಕ್‌ಗಳ ಮೂಲಕ ನಡೆಯುವಂತಾದರೆ ಸಹಕಾರಿ ಬ್ಯಾಂಕುಗಳ ಬೆಳವಣಿಗೆಯಾಗಲಿವೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದರು. ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರಕ್ಕೆ ವಿಫುಲ ಅವಕಾಶವಿದೆ. ಬಮುಲ್ ವ್ಯಾಪ್ತಿಯಲ್ಲಿ ಹಾಲು ಉತ್ಪಾದನೆಯಲ್ಲಿ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯು ಮುಂಚೂಣಿಯಲ್ಲಿದೆ ಎಂದು ಹೇಳಿದರು. ಬೆಂಗಳೂರು ದಕ್ಷಿಣ ಜಿಲ್ಲೆಯ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಧನಂಜಯ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮಂಜು, ಲಿಂಗೇಶ್ ಕುಮಾರ್, ಜೆಆರ್‌ಸಿಎಸ್ ಡಾ. ಉಮೇಶ್, ಜಂಟಿ ನಿಬಂಧಕರಾದ ಪುಂಡಲೀಕ ಎಲ್. ಸಾಧುರೆ, ಬೆಂಗಳೂರು ದಕ್ಷಿಣ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಚಂದ್ರೇಗೌಡ, ರಾಜಣ್ಣ, ಕ್ಯಾಸಾಪುರ ಶ್ರೀಧರ್, ಕೆ.ಪಿ. ಅಪರ ನಿವೃತ್ತ ನಿಬಂಧಕರಾದ ಗುರುಸ್ವಾಮಿ, ಸಹಕಾರ ಉಪನಿಬಂಧಕರಾದ ಕವಿತಾ, ಸಹಾಯಕ ನಿಬಂಧಕರಾದ ಪ್ರದೀಪ್ ಕುಮಾರ್, ಸಹಕಾರ ಅಭಿವೃದ್ಧಿ ಅಧಿಕಾರಿ ಮಂಜುನಾಥ್, ವಿವಿದ್ದೋದ್ದೇಶ ಪ್ರಾಥಮಿಕ ಕೃಷಿ ಗ್ರಾಮೀಣ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇತರರು ಉಪಸ್ಥಿತರಿದ್ದರು.

## ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಹೇಳಿಕೆ

# ಕಾಮಗಾರಿ ಗುಣಮಟ್ಟದಲ್ಲಿ ರಾಜೀ ಪ್ರಶ್ನೆ ಇಲ್ಲ

ರಾಮನಗರ: ರಸ್ತೆ ನಿರ್ಮಾಣ ಕಾಮಗಾರಿಯ ಗುಣಮಟ್ಟದಲ್ಲಿ ರಾಜಿ ಪ್ರಶ್ನೆಯೇ ಇಲ್ಲ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಹೇಳಿದರು.

ನಗರದ 2ನೇ ವಾರ್ಡ್ ವ್ಯಾಪ್ತಿಯ ವಿನಾಯಕ ನಗರ ಬಡಾವಣೆಯಲ್ಲಿ ಗಣಪತಿ ದೇವಾಲಯದ ಬಳಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ನಂತರ ಅವರು ಮಾಧ್ಯಮ ಪ್ರತಿನಿಧಿಗಳ ಬಳಿ ಮಾತನಾಡಿದರು. ಗುತ್ತಿಗೆದಾರರು ಸ್ಥಳೀಯರೇ ಆಗಿರುವುದರಿಂದ ಕಾಮಗಾರಿಯಲ್ಲಿ ಗುಣಮಟ್ಟ ಕಾಪಾಡುವ ನಂಬಿಕೆ ಇದೆ. ಇಲ್ಲಿವರೆಗೆ ಅವರು ನಿರ್ವಹಿಸಿರುವ ಕಾಮಗಾರಿಯಲ್ಲಿ ಎಲ್ಲೂ ಅಪಸ್ವರ ಕೇಳಿ ಬಂದಿಲ್ಲ. ಎಂಜಿನಿಯರ್‌ಗಳು ಗುಣಮಟ್ಟದ ವಿಚಾರದಲ್ಲಿ ಎಚ್ಚರಿಕೆ ವಹಿಸಬೇಕು ಎಂದು ಅವರು ಸೂಚನೆ ನೀಡಿದರು.

### ನಗರೋತ್ಥಾನ ಯೋಜನೆಯಡಿಯಲ್ಲಿ ರಸ್ತೆ

ಕಳೆದ 10 ರಿಂದ 12 ವರ್ಷಗಳಿಂದ ಈ ಭಾಗದ ನಾಗರೀಕರು ರಸ್ತೆ ನಿರ್ಮಾಣಕ್ಕಾಗಿ ಒತ್ತಾಯಿಸುತ್ತಲೇ ಬಂದಿದ್ದರು. ಆದರೆ, ಅನೇಕ ಕಾರಣಗಳಿಂದ ಅದು ಸಾಧ್ಯವಾಗಿರಲಿಲ್ಲ. ಇದೀಗ ಸಿಸಿ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಲಾಗುತ್ತಿದೆ ಎಂದರು. ನಗರೋತ್ಥಾನ ಯೋಜನೆ ಅಡಿಯಲ್ಲಿ 1 ಕೋಟಿ 36 ಲಕ್ಷ ರೂ ವೆಚ್ಚದಲ್ಲಿ ವಾಟರ್ ಟ್ಯಾಂಕ್ ವೃತ್ತದಿಂದ ಕಾಮನಗುಡಿ, ರಾಮದೇವರ ದೇವಸ್ಥಾನದಿಂದ – ರಾಘವೇಂದ್ರ ದೇವಸ್ಥಾನದವರೆಗೆ ರಸ್ತೆ ಅಭಿವೃದ್ಧಿ ಪಡಿಸಲಾಗುತ್ತಿದೆ. ಆ ಅನುದಾನದಲ್ಲಿಯೇ ವಿನಾಯಕ ನಗರದ ಆರು ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಹೇಳಿದರು.



### ಸರ್ವಾಂಗೀಣ ಅಭಿವೃದ್ಧಿಗೆ ಬದ್ಧ

ನಗರದ ಸರ್ವಾಂಗೀಣ ಅಭಿವೃದ್ಧಿಗೆ ನಗರಸಭೆ ಬದ್ಧವಾಗಿದ್ದು, ಯುಐಡಿಎಫ್ ಹಾಗೂ ನಗರೋತ್ಥಾನ ಯೋಜನೆ ಅಡಿಯಲ್ಲಿ ಆದ್ಯತೆ ಮೇರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ನಗರದ ಎಲ್ಲ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಗೋವಿಂದರಾಜು, ಎಇಇ ವಿಶ್ವನಾಥ್ , ಜೆಇ ನಿರ್ಮಲಾ, ರಾಮನಗರ ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಿ ಸುರೇಶ್ , ಮುಖಂಡರಾದ ರಾಜು, ಶಿವರಾಜು, ಲೋಕೇಶ್ , ಮಲ್ಲಿಕಾರ್ಜುನ್ ಮತ್ತಿತರರು ಹಾಜರಿದ್ದರು.

## ಮೊದಲ ಪುಟದಿಂದ

### ಅನುಮತಿ ಕಡ್ಡಾಯ

100 ವರ್ಷದ ಹಳೆಯ ಸಂಘಟನೆ ಅಂತಾರಲ್ಲ, ನಿಮ್ಮ ಸಂಘಟನೆ ದಾಖಲೆಗಳು ಎಲ್ಲಿವೆ? ಪಥಸಂ ಚಲನ ನಡೆಸಲು ನೀವು ಕಡ್ಡಾಯವಾಗಿ ಅನುಮತಿ ಪಡೆಯಲೇಬೇಕು. ದಾಖಲೆಗಳು ಎಲ್ಲೋ ಇರಬಹುದು, ಹುಡುಕಿಕೊಂಡು ಬರಲಿ. ಅಲ್ಲಿಯವರೆಗೆ ಸುಮ್ಮನೆ ಬಿಡಲ್ಲ ಎಂದು ಎಚ್ಚರಿಕೆ ನೀಡಿದರು.

ಘಟನೆಯ ಬಗ್ಗೆ ಪ್ರಶ್ನಿಸಿದ್ದಕ್ಕೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಬೆಂಬಲಿಗರು ನನ್ನ ವೈಯಕ್ತಿಕ ವಿಚಾರಗಳನ್ನು ಕೆದಕುತ್ತಿದ್ದಾರೆ ಎಂದು ಪ್ರಿಯಾಂಕ್ ಆಕ್ರೋಶ ವ್ಯಕ್ತಪಡಿಸಿದರು. ಪ್ರಿಯಾಂಕ್ ಯಾರನ್ನ ಮದುವೆಯಾಗಿದ್ದಾನೆ? ಆತನ ಮಕ್ಕಳು ಯಾರು? ಪ್ರಿಯಾಂಕ್ ಕಪ್ಪಗಿದ್ದಾನಾ ಅಥವಾ ಬೆಳ್ಳಗಿದ್ದಾನಾ? ಎಂದು ಕೆದಕುತ್ತಿದ್ದಾರೆ ಎಂದು ಟೀಕಿಸಿದರು.ಅವರು ಎಷ್ಟೇ ಕೆದಕಿದರೂ ನಾನು ಹೆದರುವ ವ್ಯಕ್ತಿಯಲ್ಲ. ನನ್ನ ಬಣ್ಣದ ಬಗ್ಗೆ ಮಾತನಾಡುವವರಿಗೆ ನನ್ನ ಕೆಲಸಗಳೇ ಉತ್ತರ ನೀಡುತ್ತವೆ ಎಂದು ಸವಾಲು ಹಾಕಿದರು.

### ಗೋಪಾಲ್‌ಗೆ ನಿಷೇಧ

ಸಭೆಯಲ್ಲಿ ಭಾಗವಹಿಸಲು ಅವಕಾಶ ನೀಡಿಲ್ಲ. ಇವರಿಬ್ಬರೂ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದರೂ ಸಹ ಇವರನ್ನು ಸಭೆಯೊಳಗೆ ಭಾಗಿಯಾಗಲು ಅನುಮತಿ ನೀಡಲಿಲ್ಲ. ಚಂಪತ್ ರಾಯ್ ಮತ್ತು ಗೋಪಾಲ್ ರಾವ್ ಅವರನ್ನು ಪ್ರತ್ಯೇಕ ಕೊಠಡಿಯೊಂದರಲ್ಲಿ ಕೂರಿಸಿ ಸಭೆ ಮಾಡಲಾಗಿದೆ. ಕಳವು ಹಗರಣದಲ್ಲಿ ಸಿಲುಕಿ ರಾಜೀನಾಮೆ ನೀಡಿರುವ ಮತ್ತೊಬ್ಬ ಟ್ರಸ್ಟಿ ಅನಿಲ್ ಮಿಶ್ರಾ ಸಭೆಗೆ ಗೈರಾಗಿದ್ದರು.

#### 'ಗೇಟ್ ಪಾಸ್'

ಬಜರಂಗ್ ಬಾಗ್ರಾ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮತ್ತು ರಾಮ ಮಂದಿರ ಸಂಬಂಧಿತ ಸಾಂಸ್ಥಿಕ ಕೆಲಸಗಳೊಂದಿಗೆ ಬಹಳ ಹಿಂದಿನಿಂದಲೂ ಸಂಬಂಧ ಹೊಂದಿದ್ದಾರೆ. ರಾಮ ಮಂದಿರ ನಿರ್ಮಾಣ ಮತ್ತು ಟ್ರಸ್ಟ್ನ ಆಡಳಿತಾತ್ಮಕ ಕೆಲಸಗಳಲ್ಲಿ ಅನುಭವ ಹೊಂದಿರುವ ಅವರನ್ನು ಸಂಸ್ಥೆಯೊಳಗಿನ ಹಿರಿಯ ಅಧಿಕಾರಿ ಎಂದು ಪರಿಗಣಿಸಲಾಗಿದೆ.

### ಎಸ್‌ಐಆರ್ ಮರು ಪರಿಷ್ಕರಣೆ ಇಲ್ಲ

ಬಿಎಲ್‌ಓಗಳು ಮನೆ ಭೇಟಿ ನೀಡಿದ್ದಾರೆಯೇ ಎಂದು ರಾಜ್ಯ ಚುನಾವಣಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಖಚಿತಪಡಿಸಿಕೊಳ್ಳಬೇಕು. ಕಮಿಷನರ್, ಎಆರ್‌ಒ ಮತ್ತು ಬಿಎಲ್‌ಓಗಳಿಗೆ ನಿಗದಿಪಡಿಸಿದ ಮತದಾರರ ನೋಂದಣಿ ಮತ್ತು ಪರಿಷ್ಕರಣೆ ಟಾರ್ಗೆಟ್ ಮುಟ್ಟುವಂತೆ ಒತ್ತಡ ಹೇರಲಾಗಿದೆ. ಈ ಬಗ್ಗೆ ಜಿಲ್ಲಾ ಮತ್ತು ರಾಜ್ಯ ಚುನಾವಣಾಧಿಕಾರಿಗಳು ಪರಿಶೀಲಿಸಿ ವರದಿ ಸಲ್ಲಿಸಬೇಕು. ರಾಜ್ಯದಲ್ಲಿ ಪಾರದರ್ಶಕ ಮತ್ತು ನಿಖರ ಮತಪಟ್ಟಿ ತಯಾರಿಕೆಗಾಗಿ ಅಧಿಕಾರಿಗಳು ಶ್ರಮಿಸಬೇಕು ಮತ್ತು ಯಾವುದೇ ಅಕ್ರಮ ಅಥವಾ ಗೊಂದಲಕ್ಕೆ ಅವಕಾಶ ನೀಡದಂತೆ ಕಟ್ಟುನಿಟ್ಟಾಗಿ ನಡೆದುಕೊಳ್ಳಬೇಕು ಎಂದು ಆಯೋಗ ನಿರ್ದೇಶಿಸಿದೆ.

### ಕುಸಿದುಬಿದ್ದು ಬಿಎಲ್‌ಓ ಸಾವು

ಗ್ರಾಮ ಆಡಳಿತ ಸಿಬ್ಬಂದಿ ಹಾಗೂ ಸಹಾಯಕರು ಕೂಡಲೇ ಅವರನ್ನು ಅರಬಿಳಚಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಬಳಿಕ ಭದ್ರಾವತಿ ತಾಲೂಕು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆಯೇ ಅವರು ಮೃತಪಟ್ಟಿದ್ದಾರೆ. ತಹಸೀಲ್ದಾರ್ ಪ್ರದೀಪ್ ದೇವಗಿರಿ ಆಸ್ಪತ್ರೆಗೆ ಭೇಟಿ ನೀಡಿದ್ದರು.

### ವೇಳಾಪಟ್ಟಿ ವಿರುದ್ಧ ಕೋರ್ಟ್ ಮೊರೆ

ನಮ್ಮ ಸರ್ಕಾರ ಚುನಾವಣಾ ಆಯೋಗದ ಜೊತೆ ಕೈಜೋಡಿಸಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ನಮ್ಮಂತೆ ಬೇರೆ ಯಾವುದೇ ರಾಜ್ಯದಲ್ಲಿ ಈ ರೀತಿ ಸಹಕಾರ ನೀಡಿಲ್ಲ. ನಿಮ್ಮ ಮತದಾನದ ಹಕ್ಕು, ಬದುಕಿನ ಹಕ್ಕು ಎಂದು ಹೇಳುವ ಮೂಲಕ ಜನರಿಗೆ ಮತದಾನದ ಹಕ್ಕು ಉಳಿಸಿಕೊಳ್ಳಲು ಸರ್ಕಾರ ಜಾಗೃತಿ ಮೂಡಿಸುತ್ತಿದ್ದೇವೆ ಎಂದು ವಿವರಿಸಿದರು.

# ರೈತರ ಜಮೀನುಗಳಿಗೆ ರಸ್ತೆ ಬಿಡದಿದ್ದರೆ ಹೋರಾಟ



ಚಾಮರಾಜನಗರ: ಜಮೀನಿಗೆ ಹೋಗುವ ರಸ್ತೆಯಲ್ಲಿ ಕಂದಕ ನಿರ್ಮಿಸಿದ ತಾಲೂಕು ಆಡಳಿತ ವಿರುದ್ಧ ರೈತರ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಆಡಳಿತ ಯಡಪುರ ಸಿಮ್ಸ್ ಆಸ್ಪತ್ರೆಯ ರಸ್ತೆಯ ಮಾರ್ಗವಾಗಿ ಅಮಚವಾಡಿ ಗ್ರಾಮಕ್ಕೆ ಸೇರುವ ರಸ್ತೆಯ ಪಕ್ಕದ ಸರ್ಕಾರಿ ಜಮೀನಿನಲ್ಲಿ ಗೋಮಳ ದಲ್ಲಿ ರೈತರು 50 ವರ್ಷದಿಂದ ತಮ್ಮ ಜಮೀನಿಗೆ ಹೋಗಿ, ಬರುತ್ತಿದ್ದ ರಸ್ತೆಯಲ್ಲಿ ಕಂದಕ ನಿರ್ಮಿಸಿರುವ ಸ್ಥಳಕ್ಕೆ ರಾಜ್ಯ ಕಬ್ಬು ಬೆಳೆಗಾರರ ಸಂಘ ಪದಾಧಿಕಾರಿಗಳು ಭೇಟಿ ನೀಡಿ ವೀಕ್ಷಿಸಿ ತಾಲೂಕು ಆಡಳಿತ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ರಾಜ್ಯಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಸುಂದ್ರಪ್ಪ ಮಾತನಾಡಿ, ಯಡಪುರ ಸಿಮ್ಸ್ ಆಸ್ಪತ್ರೆಯ ರಸ್ತೆಯ ಮಾರ್ಗವಾಗಿ ಅಮಚವಾಡಿ ಗ್ರಾಮಕ್ಕೆ ಸೇರುವ ರಸ್ತೆಯ ಪಕ್ಕದ ಸರ್ಕಾರಿ ಜಮೀನಿನಲ್ಲಿ 600 ರಿಂದ 700 ಎಕರೆ ಜಮೀನು ಇದ್ದು, ಈಗ ಅದು 300ರಿಂದ 400 ಎಕರೆಯಷ್ಟು ಇದ್ದು, ಇಲ್ಲಿಯೇ ಜಾನುವಾರುಗಳನ್ನು ಮೇಯಿಸಲು, ತಮ್ಮ ಜಮೀನುಗಳಿಗೆ ಈ ಸರ್ಕಾರಿ ಜಮೀನುಗಳ ಮೂಲಕ ರೈತರು ವ್ಯವಸಾಯಕ್ಕೆ ಬೇಕಾದ ಸಾಮಾನುಗಳನ್ನು ಸಾಗಾಣಿಕೆ ಮಾಡುತ್ತ ಹೋಗಿ, ಬರುತ್ತಿದ್ದರು. ಈ ಭಾಗದ ರೈತರಿಗೆ ಯಾವುದೇ ತಿಳುವಳಿಕೆ ನೋಟೀಸ್ ನೀಡದೆ' ರೈತರು ತಮ್ಮ ಜಮೀನುಗಳಿಗೆ ಹೋಗುತ್ತಿದ್ದ ರಸ್ತೆಯಲ್ಲಿ ತಾಲೂಕು ಆಡಳಿತ ಕಂದಕ ನಿರ್ಮಿಸಿ ತೊಂದರೆ ಕೊಟ್ಟಿದೆ. ಇಲ್ಲಿಯ ಜಮೀನುಗಳಿಗೆ ರಸ್ತೆ ನಿರ್ಮಿಸಿಕೊಡುವಂತೆ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗಿದ್ದು, ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ತಾಲೂಕು ಆಡಳಿತ ಸರ್ಕಾರಿ ಗೋಮಾಳದಲ್ಲಿ ತೆಗೆದಿರುವ ಕಂದಕ ಮುಚ್ಚಿಸಿ ತಮ್ಮ ಜಮೀನಿಗೆ ಹೋಗಿ ಬರಲು ಅವಕಾಶ ಕಲ್ಪಿಸಿಕೊಡಬೇಕು ಇಲ್ಲದಿದ್ದರೆ ಆ ಭಾಗದ ರೈತರೊಂದಿಗೆ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದರು.

ರೈತ ಕೃಷ್ಣೇಗೌಡ ಮಾತನಾಡಿ, ನಾನು 13 ನೇ ವಯಸ್ಸಿನಿಂದಲ್ಲೂ ಈ ರಸ್ತೆಯಲ್ಲಿ ತಮ್ಮ ಜಮೀನಿಗೆ ಹೋಗಿ ಬರುತ್ತಿದ್ದು, ಏಕಾಏಕಿ ತಹ ಸೀಲ್ದಾರ್ ಅವರು ಜಮೀನಿಗೆ ಬರುತ್ತಿದ್ದ ರಸ್ತೆಯಲ್ಲಿ ದೊಡ್ಡ ಕಂದಕ ನಿರ್ಮಿಸಿ ತೊಂದರೆ ಉಂಟು ಮಾಡಿದ್ದಾರೆ. ಏನು ಆದ್ರು ರೈತ ಸಂಘಕ್ಕೆ ಹೋಗಿ ಹೇಳಿದ್ದಾರೆ ನಿನ್ನ ಈ ಹಳ್ಳಕ್ಕೆ ತಳ್ಳುಬಿಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಅಮ್ಮಣಮ್ಮ ಕೃಷ್ಣೇಗೌಡ ದಂಪತಿ ಆಳಲು ತೋಡಿಕೊಂಡರು. ರಾಜ್ಯ ಕಬ್ಬು ಬೆಳಗಾರ ಸಂಘದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಪದಾಧಿಕಾರಿಗಳಾದ ಉಡಿಗಾಲ ರೇವಣ್ಣ, ಪಟೇಲ್ ಶಿವಮೂರ್ತಿ, ಉಡಿಗಾಲ ಸುಂದ್ರಪ್ಪ ನಂಜಪುರ ಸತೀಶ್, ಮಹದೇವಸ್ವಾಮಿ, ಹೆಗೋತಾರ ಶಿವಸ್ವಾಮಿ ಕುರುಬೂರು ಪ್ರದೀಪ್, ಸಿದ್ದೇಶ, ಗುರುಸ್ವಾಮಿ, ಶಿವ ಸ್ವಾಮಿ, ಸಿದ್ದರಾಜ ಇತರರು ಹಾಜರಿದ್ದರು.

# ಥೋರಿಯಂ ನಿಕ್ಷೇಪ ಪತ್ತೆ

ಗುಂಡ್ಲುಪೇಟೆ: ಪಟ್ಟಣ ಮತ್ತು ಮಲ್ಲಯ್ಯನಪುರ ನಡುವಿನ ಅನ್ಗಲ್ ಗುಡ್ಡದ ತಪ್ಪಲಿನ ಪ್ರದೇಶದಲ್ಲಿ ಅಪರೂಪದ ಥೋರಿಯಂ ನಿಕ್ಷೇಪ ಪತ್ತೆಯಾಗಿರುವ ವಿಷಯವೀಗ ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ.

ಹಿಂದಿನ ವರ್ಷ ದೇಶದ್ಯಂತ ಭಾರತೀಯ ಭೂ ವೈಜ್ಞಾನಿಕ ಇಲಾಖೆ ಏರಿಯಲ್ ಸರ್ವೆ ನಡೆಸಿ ದಾಗ ಖಚ್ಚಾ ತೈಲ, ಚಿನ್ನ, ಅಪರೂಪದ ಖನಿಜ ಸಂಪತ್ತುಗಳು ಪತ್ತೆಯಾಗಿವೆ. ಇದೇ ಸರ್ವೆಯಲ್ಲಿ ಪಟ್ಟಣ ಮತ್ತು ಮಲ್ಲಯ್ಯನಪುರ ನಡುವಿನ ಅನ್ಗಲ್ ಗುಡ್ಡದ ತಪ್ಪಲಿನ ಪ್ರದೇಶವಾದ ಮಣಗಹಳ್ಳಿ, ವಿಜಯಪುರ ಮತ್ತು ಕೂತನೂರು ಗ್ರಾಮದ ಸರ್ವೆ ನಂಬರ್‌ಗಳಲ್ಲಿ ಬರುವ 720 ಎಕರೆಯಲ್ಲಿ ಅಪರೂಪದ ಖನಿಜ(ರೇರ್ ಅರ್ಥ್ ಮಿನರಲ್) ನಿಕ್ಷೇಪ ಪತ್ತೆಯಾಗಿದೆ. ಈ ರೀತಿ ನಿಕ್ಷೇಪ ಇರುವ ಪ್ರದೇಶದಲ್ಲಿ 20 ಎಕರೆಯನ್ನು ಥೋರಿಯಂ ಹಾಗೂ ಕೋರ್ ಮಿನರಲ್ಸ್ ಜೋನ್ ಎಂದು ಗುರುತಿಸಿರುವ ಕೇಂದ್ರ ಸರಕಾರ ಗಣಿಗಾರಿಕೆ ನಡೆಸಲು ಮುಂದಾಗಿದೆ ಎಂದು ಮೂಲಗಳಿಂದ ತಿಳಿದು ಬಂದಿದೆ.



ಅಣ್ಣೂರುಕೇರಿ ಗ್ರಾಮದ ಪೂರ್ವ ಪಾರ್ಶ್ವದ ಚಿಕ್ಕಮ್ಮತಾಯಿ ಬೆಟ್ಟದ ಪಶ್ಚಿಮ ಪಾರ್ಶ್ವದಲ್ಲೂ ಈ ಹಿಂದೆ ನಿಕ್ಷೇಪ ಇರುವ ಬಗ್ಗೆ ಸುದ್ದಿಗಳು ಹರಡಿದ್ದವು. ಇದನ್ನು ಧೃಡಪಡಿಸುವ ರೀತಿಯಲ್ಲಿ ಒಂದು ಪ್ರದೇಶದಲ್ಲಿ ಪತ್ತೆ ಕಾರ್ಯ ಕೈಗೊಳ್ಳಲಾಗಿತ್ತು. ಈಗಲೂ ಈ ಪ್ರದೇಶದ ಒಂದು ಚಿಕ್ಕ ಪ್ರದೇಶಕ್ಕೆ ಬೀಗ ಮುದ್ರೆ ಮಾಡಲಾಗಿದೆ.

ಈಗ ಥೋರಿಯಂ ನಿಕ್ಷೇಪ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ನಿಕ್ಷೇಪಗಳ ವಿಷಯಗಳಿಗೆ ಚರ್ಚೆಗೆ ಮತ್ತಷ್ಟು ಬಲ ಬಂದಂತಾಗಿದೆ. ಈ ಕುರಿತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಚಾಮರಾಜನಗರ ಹಿರಿಯ ಭೂ ವಿಜ್ಞಾನಿ ರಾಜೇಶ್. ಮಾಹಿತಿ ನೀಡಿದ್ದು, ಜಿಯಾಲಜಿಕಲ್ ಸರ್ವೇ ನಡೆದು ಅದರಲ್ಲಿ ಗುಂಡ್ಲುಪೇಟೆ ತಾಲೂಕಿನ ಕೂತನೂರು ಮತ್ತು ಗುಂಡ್ಲುಪೇಟೆ ಪಟ್ಟಣದ ಹೊರವಲಯದಲ್ಲಿ ಅಪರೂಪದ ಖನಿಜ ನಿಕ್ಷೇಪವಾಗಿರುವ ಮೋನೋಜೈಟ್ ಪತ್ತೆಯಾಗಿದೆ. 700 ಎಕರೆ ಪ್ರದೇಶದಲ್ಲಿ ಸರ್ವೇ ನಡೆಸಲಾಗಿದ್ದು, 20 ಎಕರೆ ಪ್ರದೇಶವನ್ನು ಕೋರ್ ಏರಿಯಾ ಆಗಿ ಗುರುತಿಸಲಾಗಿದೆ

## ಶುದ್ಧ ಗಾಳಿ, ಪರಿಸರಕ್ಕೆ ಗಿಡಗಳನ್ನು ಪೋಷಿಸಿ: ಶಾಸಕ ಜಿಟಿಡಿ



ಮೈಸೂರು: ಪ್ರಸ್ತುತ ದಿನದಲ್ಲಿ ಶುದ್ಧ ಗಾಳಿ ಇಲ್ಲದೆ ಪರಿಸರದ ವಾತಾವರಣ ಕೆಡುತ್ತಿದೆ. ಪರಿಸರ,ಆಹಾರ ಕಾಳಜಿಯ ಪ್ರಜ್ಞೆ ಇಲ್ಲದೆ ಅನಾರೋಗ್ಯಕ್ಕೀಡಾಗುತ್ತಿದ್ದಾರೆ. ತಮ್ಮ ಮನೆಯ ಎದುರು, ಮಹಡಿಯ ಮೇಲೆ ಗಿಡಗಳನ್ನು ನೆಟ್ಟು ಪೋಷಿಸಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಸಲಹೆ ನಿಡಿದರು.

ಜಟ್ಟಿಹುಂಡಿಯ ಯಡಹಳ್ಳಿ ಮುಖ್ಯರಸ್ತೆಯ ಕಬಿಎಲ್ ಸೆಂಚುರಿ ಫೇಸ್-1ಲಿಂಗಾಬುದಿಯಲ್ಲಿ ಕೆಬಿಎಲ್ ಸೆಂಚುರಿ ಫೇಸ್-1 ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ಹಸಿರು ಹಬ್ಬ ಗಿಡನೆಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು. ದಿನದಿಂದ ದಿನಕ್ಕೆ ಪರಿಸರ ಮಲೀನವಾಗುತ್ತಿರುವುದನ್ನು ನಾವು ತಡೆದು ಶುದ್ಧ ಗಾಳಿ ಹಾಗೂ ಪರಿಸರ ಕಾಪಾಡಿಕೊಳ್ಳಲು ನಾವು ಹಸಿರೀಕರಣ ಮಾಡಬೇಕು. ಉದ್ಯಾನವನಗಳಲ್ಲಿ ಗಿಡ ನೆಟ್ಟು ಸುಂದರ ವನವನ್ನಾಗಿ ಮಾಡಬೇಕೆಂಬ ಬಯಕೆ ಈಡೇರಿಸಬೇಕು ಎಂದರು.ಇಂದು ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಒತ್ತಡ ಇದ್ದರೂ ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದಕ್ಕೆ ತುಂಬಾ ಸಂತಸವಾಗಿದೆ. ಎಚ್.ವಿ.ರಾಜೀವ್ ಪರಿಸರ ಪ್ರೇಮಿ. ಸ್ವಚ್ಛತೆಗಾಗಿ ಪೊರಕೆ ಹಿಡಿದುಕೊಂಡು ಪ್ರಯತ್ನ ಮಾಡಿದರು. ನಗರದ ಎಲ್ಲಾ ಭಾಗಗಳಲ್ಲಿ ಗಿಡಗಳನ್ನು ನೆಡಲು ನರ್ಸರಿ ಮಾಡಿ ಸಸಿಗಳನ್ನು ನೆಟ್ಟು ಬೆಳೆಸಿದರು. ಅದಕ್ಕಾಗಿಯೇ ಇಂದು ಅನೇಕ ವಾರ್ಡುಗಳಲ್ಲಿ ಗಿಡಗಳನ್ನು ನೆಡಲು ಕೊಟ್ಟಿದ್ದಾರೆ ಎಂದು ನುಡಿದರು.

ಒಂದು ಸಾವಿರ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಲಾಗಿದೆ. ಎಡಿಬಿ ಲೈನ್‌ಗೆ ಯುಜಿಡಿ ಲೈನ್ ಲಿಂಕ್ ಮಾಡಿಲ್ಲ. ನಿಧಿ-1, ನಿಧಿ-2 ಎನ್ನುವಂತೆ ಮಾಡಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಇಲ್ಲದಂತೆ ಮಾಡಲಾಯಿತು. ನಗರದ ಸುತ್ತಮುತ್ತಲಿನ ಬಡಾವಣೆಗಳನ್ನು ಮೈಸೂರು ಮಹಾನಗರಪಾಲಿಕೆಗೆ ಸೇರಿಸಬೇಕೆಂಬ ಪ್ರಸ್ತಾವನೆ ಸಲ್ಲಿಸಿದಾಗ ಐದು ಸಾವಿರ ಕೋಟಿ ರೂ. ಅನುದಾನ ಕೊಟ್ಟರೆ ನಗರಪಾಲಿಕೆಗೆ ಸೇರಿಸುತ್ತೇವೆಂದು ಹೇಳಿ ತಿರಸ್ಕಾರ ಮಾಡಿದರು. ಇದರಿಂದಾಗಿ ರಾಜ್ಯಸರ್ಕಾರಕ್ಕೆ ಒಂದು ನಗರಸಭೆ, ನಾಲ್ಕು ಪಟ್ಟಣ ಪಂಚಾಯಿತಿಗಳನ್ನಾಗಿ ಮಾಡಿ ಈಗ ಅಭಿವೃದ್ಧಿ ಕೆಲಸ ಮಾಡಲಾಗುತ್ತಿದೆ. ಗ್ರೇಟರ್ ಮೈಸೂರು ರಚನೆ ಮಾಡಬಾರದೆಂದು ಹೇಳಿ ಕೆಲವು ನಗರಪಾಲಿಕೆ ಸದಸ್ಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿಗೆ ಹೋಗಿ ವಿರೋಧ ಮಾಡಿದರು. ಅಮೇಲೆ ಸಿದ್ದರಾಮಯ್ಯ, ಭೈರತಿ ಸುರೇಶ್ ಮೇಲೆ ಒತ್ತಡ ಹೇರಿದ್ದರಿಂದಾಗಿ ಘೋಷಿಸಲಾಯಿತು ಎಂದರು. ಹಳೆ ಉಂಡುವಾಡಿ ಯೋಜನೆ ಕಾಮಗಾರಿ ಪೂರ್ಣಗೊಂಡರೆ ಕುಡಿಯುವ ನೀರಿನ ಸಮಸ್ಯೆ ನೀಗಲಿದೆ. ಪೈಪ್‌ಲೈನ್ ಮಾಡುವ ಕೆಲಸ ಮಾಡಲಾಗುತ್ತಿದೆ. ಈ ಕಾಮಗಾರಿ ಮುಗಿದ ತಕ್ಷಣವೇ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ಪ್ಲಾನ್ ಮಾಡುವಂತೆ ಹೇಳಲಾಗಿದೆ. ಪ್ರತಿನಿತ್ಯ ಅನೇಕ ಬಡಾವಣೆಗಳ ನಾಗರಿಕರು ನೀರಿನ ಸಮಸ್ಯೆ ಪರಿಹರಿಸುವಂತೆ ಹೇಳುತ್ತಿದ್ದಾರೆ. ಬೋರ್‌ವೆಲ್‌ಗಳು ಬತ್ತಿ ಹೋಗಿ ಟ್ಯಾಂಕರ್‌ನಲ್ಲಿ ನೀರು ಪೂರೈಸಲಾಗುತ್ತಿದೆ. ಆರು ತಿಂಗಳಲ್ಲಿ ಉಂಡುವಾಡಿ ಯೋಜನೆ ಮುಗಿದರೆ ಸಮಸ್ಯೆ ದೂರವಾಗಲಿದೆ ಎಂದು ನುಡಿದರು. ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಪತ್ರಕರ್ತ ಚೀ.ಜ.ರಾಜೀವ್, ಹಸಿರು ಮೈಸೂರು ಸಂಘಟನೆಯ ಸುಬ್ರಹ್ಮಣ್ಯಸ್ವಾಮಿ, ಶ್ರೀರಾಂಪುರ ಮುಖ್ಯಾಧಿಕಾರಿ ಶ್ರೀಧರ್,ಮಂಜುನಾಥ್, ಗೋವಿಂದಯ್ಯ,ಸಿದ್ದಯ್ಯ,ರಜನಿ,ಶ್ರೀನಿವಾಸ್, ಕುಮಾರ್ ಮತ್ತಿತರರು ಹಾಜರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಸಣ್ಣ ಸಮುದಾಯಗಳಿಗೂ ಮಾನ್ಯತೆ

## ವಿಧಾನ ಪರಿಷತ್ ಸದಸ್ಯ ರಘುಕೌಟಿಲ್ಯ ಹೇಳಿಕೆ | ಬಿಜೆಪಿ ಕಾಯಕ ಮುಖಂಡರ ಭೇಟಿ

ಎಚ್.ಡಿ.ಕೋಟೆ: ಬಿಜೆಪಿಯಲ್ಲಿ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗುತ್ತದೆ. ಸಣ್ಣ ಸಮುದಾಯಗಳಿಗೂ ಸಾಮಾಜಿಕ ನ್ಯಾಯ ನೀಡುತ್ತಾರೆ ಎಂಬುದಕ್ಕೆ ಮಡಿವಾಳ ಸಮುದಾಯದ ನನ್ನನ್ನು ವಿಧಾನ ಪರಿಷತ್ ಸದಸ್ಯನಾಗಿ ಆಯ್ಕೆ ಮಾಡಿರುವುದೇ ನಿದರ್ಶನ ಎಂದು ವಿಧಾನ ಪರಿಷತ್ ಸದಸ್ಯ ರಘು ಕೌಟಿಲ್ಯ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ ಬಿಜೆಪಿ ಪಕ್ಷದ ಮುಖಂಡರು ಹಾಗೂ ಕಾಯಕ ಸಮುದಾಯದ ಮುಖಂಡರನ್ನು ಭೇಟಿ ಮಾಡಿ ಮಾತನಾಡಿ, ನಾನು ಎರಡು ಬಾರಿ ಚುನಾವಣೆಯಲ್ಲಿ ಕಡಿಮೆ ಅಂತರದಲ್ಲಿ ಸೋತಿದ್ದೇನೆ. ಬಹಳ ದೊಡ್ಡ ಪ್ರಮಾಣದಲ್ಲಿ ಎಚ್.ಡಿ ಕೋಟೆಯಲ್ಲಿ ನನಗೆ ಬೆಂಬಲ ಸಿಗುತ್ತಿತ್ತು. ನನಗೆ ಪ್ರೀತಿ ವಿಶ್ವಾಸ ನೀಡಿದ್ದೀರಿ ಅದನ್ನು ನಾನು ಎಂದಿಗೂ ಮರೆಯುವುದಿಲ್ಲ. ನಾನು ನಿಮ್ಮೆಲ್ಲರಿಗೂ ಆಭಾರೊಯಾಗಿದ್ದೇನೆ ಎಂದರು.

ನರೇಂದ್ರ ಮೋದಿ ಅವರ ನೇತೃತ್ವದ ವರಿಷ್ಠ ಮಂಡಳಿ ರಾಜ್ಯದಲ್ಲಿ ವಿಜಯೇಂದ್ರ ಅವರ ಅಧ್ಯಕ್ಷತೆಯ ಕೋರ್ ಕಮಿಟಿ ಹಾಗೂ ಯಡಿಯೂರಪ್ಪ ಅವರ ಆಶೀರ್ವಾದದಿಂದ ನನಗೊಂದು ಅವಕಾಶ ಲಭಿಸಿದೆ. ನನ್ನ ಈ ಸ್ಥಾನವನ್ನು ಕಾರ್ಯಕರ್ತರಿಗೆ ಸಮರ್ಪಣೆ ಮಾಡುತ್ತೇನೆ. ಸಾಮಾಜಿಕ ವ್ಯವಸ್ಥೆಯಲ್ಲಿ ಎಷ್ಟೋ ಸಮುದಾಯಗಳು ಗ್ರಾಮ ಪಂಚಾಯಿತಿ ಮೆಟ್ಟಿಲನ್ನು ಹತ್ತುವುದಕ್ಕೆ ಆಗುವುದಿಲ್ಲ ಅಂತ ವ್ಯವಸ್ಥೆ ಈ ರಾಜ್ಯದಲ್ಲಿ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂದು ನಾನು ವಿಧಾನಪರಿಷತ್ ಗೆ ಪ್ರವೇಶ ಮಾಡಿದ್ದೇನೆ ಎಂದರೆ ನೀವೆಲ್ಲರೂ ಹೋದ ಹಾಗೆ. ಎಚ್.ಡಿ.ಕೋಟೆಯಲ್ಲಿ ಬಿಜೆಪಿ ಪಕ್ಷದ ಶಾಸಕರಿಲ್ಲ. ನನ್ನನ್ನು ನೀವು ಶಾಸಕರ ರೀತಿಯಲ್ಲಿ ಯಾವಾಗ ಬೇಕಾದರೂ ನಮ್ಮನ್ನು ಬಳಸಿಕೊಳ್ಳಬಹುದು. ಶೀಘ್ರದಲ್ಲಿಯೇ ಮೈಸೂರಿನಲ್ಲಿ ಕಚೇರಿಯನ್ನು ತೆರೆಯುತ್ತೇನೆ. ಕ್ಷೇತ್ರದ ಸಮಸ್ಯೆ ಆಗಿರಬಹುದು ಅಥವಾ ವೈಯಕ್ತಿಕ ಸಮಸ್ಯೆಗಳಿದ್ದರೂ ನನ್ನನ್ನು ಸಂಪರ್ಕ ಮಾಡಬಹುದು ಎಂದು ಮಾಹಿತಿ ನೀಡಿದರು.



ಜು.11ನೇ ತಾರೀಕು ಮೈಸೂರಿನಲ್ಲಿ ಕಾಯಕ ಸಮುದಾಯಗಳ ಕೃತಜ್ಞತೆ ಸಮರ್ಪಣೆ ಕಾರ್ಯಕ್ರಮವನ್ನು ಪಕ್ಷತೀತವಾಗಿ ಆಯೋಜನೆ ಮಾಡುತ್ತಿದ್ದೇನೆ. ಆದ್ದರಿಂದ, ನಿಮ್ಮನ್ನ ಆಹ್ವಾನ ಮಾಡಲು ನಾನೇ ತಾಲೂಕುಗಳಿಗೆ ಬಂದಿದ್ದೇನೆ ಎಲ್ಲ ಕಾಯಕ ಸಮುದಾಯದವರು ಬರಬೇಕು ಎಂದು ಆಹ್ವಾನ ನೀಡಿದರು.

ಜಿಲ್ಲಾ ಒಬಿಸಿ ಅಧ್ಯಕ್ಷ ರಾಜುಗೌಡ, ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷ ಟಿ ವೆಂಕಟೇಶ್, ಮಡಿವಾಳ ಸಮಾಜದ ತಾಲೂಕು ಅಧ್ಯಕ್ಷರಾದ ಚಂದ್ರ ಶೆಟ್ಟಿ, ಸರಗೂರು ಧರಣೇಶ್, ಪತ್ರಕರ್ತ ಜಶೀಲಾ, ರಮೇಶ್, ಕಾರ್ಯದರ್ಶಿ ಹೇಮಂತ್, ವೆಂಕಟೇಶ್, ಮೊತ್ತ ಬಸವರಾಜು, ಕಾರ್ಯದರ್ಶಿ ಗುರುಸ್ವಾಮಿ, ರಾಜು ಬಿಡುಗಲು, ರಾಮಾಚಾರಿ, ಒಬಿಸಿ ತಾಲೂಕು ಅಧ್ಯಕ್ಷ ಬಸವರಾಜಚಾರಿ, ಚಂದ್ರಮೌಳೇಶ್ವರ, ವಿವೇಕಾನಂದ, ಕೆ ಲೋಕೇಶ್, ಕೆಂಪು ಶೆಟ್ಟಿ, ವಸಂತ್ ಕುಮಾರ್, ರವಿ, ಮಂಜುನಾಥ್, ಕೃಷ್ಣ, ರವಿಕುಮಾರ್, ಸುರೇಶ್, ಮಹದೇವ ಶೆಟ್ಟಿ, ಬಸವರಾಜ್ ಕೋಟೆ, ಹಾಗೂ ಕಾಯಕ ಸಮುದಾಯದ ಮುಖಂಡರು ಇದ್ದರು.

> ಪರಿಶಿಷ್ಟ ಜಾತಿಗೆ ಮಡಿವಾಳ ಸಮಾಜ ಸೇರಿಸಲೇಬೇಕು ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಮಡಿವಾಳ ಸಮುದಾಯ ಪರಿಶಿಷ್ಟ ಜಾತಿಗೆ ಸೇರಬೇಕಿತ್ತು ಸಮುದಾಯದ ವೃತ್ತಿ ಕುಲಶಾಸ್ತ್ರ ಅಧ್ಯಯನ ಆದ ಪ್ರಕಾರ ಮಡಿವಾಳ ಸಮಾಜ ಕವಿತಾ ಸಮಾಜ ಇವತ್ತು ಕೂಡ ಸಾಮಾಜಿಕ ಅಸ್ಪೃಶ್ಯತೆ ವ್ಯವಸ್ಥೆಯಲ್ಲಿ ಸಿಲುಕಿದೆ ಈ ಎರಡು ಸಮಾಜಕ್ಕೂ ಪರಿಶಿಷ್ಟ ಜಾತಿಯ ಸ್ಥಾನಮಾನ ಸಿಗಬೇಕು ಸಮುದಾಯದ ಧ್ವನಿಯಾಗಿದೆ.ನಾನು ಕೂಡ ಎಲ್ಲಾ ಕಾಯಕ ಸಮುದಾಯದ ಪರವಾಗಿ ನನ್ನ ಹೋರಾಟ ನಿರಂತರವಾಗಿರುತ್ತದೆ.
>
> ▸▸ ರಘು ಕೌಟಿಲ್ಯ ವಿಧಾನಪರಿಷತ್ ಸದಸ್ಯ

### ಸಮಾಜಿಕ ನ್ಯಾಯ ಪ್ರಜಾಪ್ರಭುತ್ವದ ಆಶಯ

ಎಲ್ಲ ಸಮಾಜಗಳಿಗೂ ಕೂಡ ಸಮಾಜಿಕ ನ್ಯಾಯ ಸಿಗಬೇಕು ಅನ್ನುವುದು ಪ್ರಜಾಪ್ರಭುತ್ವದ ಆಶಯ. ಯಾವ ಸಮುದಾಯದವರು ವಿಧಾನಸೌಧ ಮೆಟ್ಟಿಲು ಹತ್ತಿಲ್ಲವೋ ಆ ಸಮಾಜ ವಿಧಾನ ಸೌಧ ಪ್ರವೇಶಿಸಿದರೆ ಮಾತ್ರ ಡಾ.ಬಿ.ಆರ್ ಅಂಬೇಡ್ಕರ್ ಅವರ ಸಂವಿಧಾನದ ಆಶಯ ಮತ್ತು ಪ್ರಜಾಪ್ರಭುತ್ವದ ಉದ್ದೇಶ ಈಡೇರುತ್ತದೆ ಎಂದು ಅಭಿಪ್ರಾಯಪಟ್ಟರು. ಸಿದ್ದಿ ಜನಾಂಗದ 2000 ಜನಸಂಖ್ಯೆ ಇರುವ ಆದಿವಾಸಿ ಜನಾಂಗಕ್ಕೂ ಬಿಜೆಪಿಯಿಂದ ವಿಧಾನಪರಿಷತ್ ಗೆ ಅವಕಾಶ ಕೊಟ್ಟಿದ್ದಾರೆ. ಸಣ್ಣ ಸಮುದಾಯಗಳಿಗೂ ಪಕ್ಷದಲ್ಲಿ ಮಾನ್ಯತೆ ನೀಡುತ್ತಾರೆ. ನಮ್ಮಂತಹ ಕಾಯಕ ಸಮುದಾಯದಿಂದ ಬಂದಂತ ನನಗೆ ಎರಡು ಬಾರಿ ವ್ಯತ್ಯಾಸ ಆದರೂ ಕೂಡ ಈ ಬಾರಿ ಶಾಸಕರಿಂದಲೇ ವಿಧಾನಪರಿಷತ್ತಿಗೆ ಹೋಗಲು ಪಕ್ಷ ಅವಕಾಶಗಳನ್ನು ಮಾಡಿಕೊಟ್ಟಿದೆ ಎಂದು ಪಕ್ಷದ ನಾಯಕ ವಿಜಯೇದ್ರ ಅವರಿಗೆ ಧನ್ಯವಾದ ತಿಳಿಸಿದರು.

# ಚಾ.ನಗರ ರೈಲು ರದ್ದು, ಪ್ರಯಾಣಿಕರ ಪರದಾಟ

**ಚಾಮರಾಜನಗರ:** ಮೈಸೂರಿನಿಂದ ಚಾಮರಾಜನಗರಕ್ಕೆ ನಿತ್ಯವೂ ತೆರಳುತ್ತಿದ್ದ ಪ್ಯಾಸೆಂಜರ್ ರೈಲು ಸೋಮವಾರ ದಿಡೀರ್ ರದ್ದುಪಡಿಸಲಾಗಿದ್ದು, ಪ್ರಯಾಣಿಕರು ಪರದಾಡು ವಂತಾಯಿತು.

ಮೈಸೂರು ರೈಲು ನಿಲ್ದಾಣದಿಂದ ನಿತ್ಯವೂ ಬೆಳಿಗ್ಗೆ 8 ಗಂಟೆಗೆ ಹೊರಡುತ್ತಿದ್ದ ಮೈಸೂರು-ಚಾಮರಾಜನಗರ ಪ್ಯಾಸೆಂಜರ್ ರೈಲು (ಸಂಖ್ಯೆ-56210) ಗಾಡಿಯನ್ನು ದಿಡೀರ್ ರದ್ದುಗೊಳಿಸಿದ ಪರಿಣಾಮ, ನಂಜನಗೂಡು ಮತ್ತು ಮೈಸೂರು ಕಡೆಗೆ ತೆರಳುವ ನೂರಾರು ಪ್ರಯಾಣಿಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಯಿತು.

ಮೈಸೂರಿನಿಂದ ನಿತ್ಯವೂ ನೂರಾರು ನೌಕರರು ಹಾಗೂ ಸಾರ್ವಜನಿಕರು ನಂಜನಗೂಡು ಮತ್ತು ಚಾಮರಾಜನಗರಕ್ಕೆ ಬರಲು ಈ ಪ್ಯಾಸೆಂಜರ್ ರೈಲನ್ನು ಅವಲಂಬಿಸಿದ್ದಾರೆ. ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ನೌಕರರು ಈ ಟ್ರೈನ್ ನಲ್ಲಿ ಬರುತ್ತಾರೆ. ದಿಡೀರ್ ಪ್ಯಾಸೆಂಜರ್ ರೈಲು ರದ್ದುಗೊಂಡ ಪರಿಣಾಮ ನೌಕರರು ನಂಜನಗೂಡು ಮತ್ತು ಚಾಮರಾ ಜನಗರ ಕಡೆಗೆ ಬರಲು ಸಮಸ್ಯೆ ಅನುಭವಿಸುವಂತಾಯಿತು.



### ತಿರುಪತಿ ಗಾಡಿಯೂ ಲೇಟ್

ಮೈಸೂರಿನಿಂದ ಬೆಳಿಗ್ಗೆ 7.45 ಗಂಟೆಗೆ ಹೊರಟು ಚಾಮರಾಜನಗರವನ್ನು 9 ಗಂಟೆಗೆ ತಲುಪಬೇಕಾದ ತಿರುಪತಿ ಎಕ್ಸ್ ಪ್ರೆಸ್ ರೈಲು ಕೂಡ ತಡವಾದ ಪರಿಣಾಮವಾಗಿ ಪ್ರಯಾಣಿಕರು ಗಂಟೆಗಟ್ಟಲೇ ಕಾಯಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಮೈಸೂರು ಸೆಂಟ್ರಲ್ ರೈಲು ನಿಲ್ದಾಣ, ಚಾಮರಾಜಪುರಂ ರೈಲು ನಿಲ್ದಾಣ ಹಾಗೂ ಅಶೋಕ ಪುರಂ ರೈಲು ನಿಲ್ದಾಣಗಳಲ್ಲಿ ನೂರಾರು ಸಂಖ್ಯೆಯಲ್ಲಿ ಪ್ರಯಾಣಿಕರು ಕಾಯಬೇಕಾದ ಸನ್ನಿವೇಶ ನಿರ್ಮಾಣವಾಯಿತು.

# ಕಬ್ಬು ಬೆಳೆಗಾರರ ಸಭೆ ಕರೆಯಿರಿ

ಚಾಮರಾಜನಗರ, ಪ್ರಸಕ್ತ ವರ್ಷ 2026- 27 ಸಾಲಿನಲ್ಲಿ ಸಕ್ಕರೆ ಕಾರ್ಖಾನೆ ಆರಂಭಕ್ಕೂ ಮುನ್ನ ಜಿಲ್ಲಾಡಳಿತ ಕಬ್ಬು ಬೆಳೆಗಾರರ ಸಭೆ ಕರೆಯುವಂತೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ನಗರದ ಜಿಲ್ಲಾಡಳಿತ ಭವನದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಮನವಿ ಸಲ್ಲಿಸಿದರು.



ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿರುವ ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯವರು ಕಾರ್ಖಾನೆ ಆರಂಭಕ್ಕೂ ಮುನ್ನ ಪ್ರಸಕ್ತ ಸಾಲಿನಲ್ಲಿ ಜಿಲ್ಲಾಡಳಿತ ಕಬ್ಬು ಬೆಳೆಗಾರರು ಹಾಗೂ ಆಡಳಿತ ಮಂಡಳಿ ಜೊತೆಯಲ್ಲಿ ಸಭೆ ನಡೆಸಿ ಈ ವರ್ಷದ ಕಬ್ಬಿನ ದರ ಉಪ ಉತ್ಪನ್ನಲಾಭ ಕಬ್ಬಿನ ಕಟಿಂಗ್ ಟ್ರಾಸ್ಪೋರ್ಟ ರೇಟ್ ಕಬ್ಬಿನ ತೂಕದಲ್ಲಿ ಆಗುತ್ತಿರುವ ಕಿರುಕುಳ ಇನ್ನು ಅನೇಕ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ನಂತರ ಕಾರ್ಖಾನೆ ಆರಂಭಮಾಡುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಮೂಕಹಳ್ಳಿ ಮಹಾದೇವಸ್ವಾಮಿ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಕಬ್ಬು ಬೆಳಗಾರ ಸಂಘದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಪದಾಧಿಕಾರಿಗಳಾದ ಉಡಿಗಾಲ ರೇವಣ್ಣ, ಪಟೇಲ್ ಶಿವಮೂರ್ತಿ, ಮಹಾದೇವಸ್ವಾಮಿ, ಉಡಿಗಾಲ ಸುಂದ್ರಪ್ಪ ,ನಂಜಪುರ ಸತೀಶ್, ಹೆಗ್ಗೋತಾರ ಶಿವ ಸ್ವಾಮಿ, ಕುರುಬೂರು ಪ್ರದೀಪ್ , ಸಿದ್ದೇಶ, ಗುರುಸ್ವಾಮಿ, ಶಿವಸ್ವಾಮಿ, ವಿಜಯ್ ಕುಮಾರ್,ಸಿದ್ದರಾಜ ಇತರರು ಹಾಜರಿದ್ದರು.

ಪತ್ರಕರ್ತರ ಕ್ರಿಕೆಟ್ ಪಂದ್ಯಾವಳಿ

# ಚಾಮರಾಜನಗರ ತಂಡಕ್ಕೆ ಜಯ: ಗುಂಡ್ಲುಪೇಟೆ ರನ್ನರ್ ಅಪ್

ಚಾಮರಾಜನಗರ, ಪತ್ರಿಕಾ ದಿನಾಚರಣೆಯ ಅಂಗವಾಗಿ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘವು ಸಂಘದ ಸದಸ್ಯರಿಗಾಗಿ ಭಾನುವಾರ ಹಮ್ಮಿಕೊಂಡಿದ್ದ ಕ್ರಿಕೆಟ್ ಪಂದ್ಯಾವಳಿ ನಡೆಯಿತು. ಫೈನಲ್ ಪಂದ್ಯದಲ್ಲಿ ಚಾಮರಾಜನಗರ ತಂಡ ಜಯಗಳಿಸಿದರೆ, ಗುಂಡ್ಲುಪೇಟೆ ತಂಡ ಎರಡನೇ ಸ್ಥಾನ ಗಳಿಸಿತು,

ನಗರದ ದೀನಬಂಧು ಶಾಲೆಯ ಪಕ್ಕದ ಮೈದಾನದಲ್ಲಿ ಆಯೋಜಿಸಲಾಗಿದ್ದ ಕ್ರಿಕೆಟ್ ಪಂದ್ಯಾವಳಿಯನ್ನು ಹಿರಿಯ ಪತ್ರಕರ್ತರು ಹಾಗೂ ಸಂಘದ ಮಾಜಿ ಅಧ್ಯಕ್ಷರಾದ ಅಬ್ರಾಹಂ ಡಿ ಸಿಲ್ವ ಹಾಗೂ ಮತ್ತೋರ್ವ ಹಿರಿಯ ಪತ್ರಕರ್ತರು ಹಾಗೂ ಸಂಘದ ನಿರ್ದೇಶಕರಾದ ಪ್ರಕಾಶ್ ಬೆಲ್ಲದ್ ಬ್ಯಾಟ್ ಬೀಸುವ ಮೂಲಕ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ,ಪತ್ರಿಕಾ ದಿನಾಚರಣೆಯ ಹಿನ್ನೆಲೆಯಲ್ಲಿ ಕ್ರೀಡಾಕೂಟವನ್ನು ಆಯೋಜಿಸ ಲಾಗಿದೆ, ಜಿಲ್ಲೆಯ ಎಲ್ಲಾ ತಾಲ್ಲೂಕಿನಿಂದ ಎಲ್ಲಾ ಪತ್ರಕರ್ತರು ಭಾಗವಹಿಸಿರುವುದು ಸಂತೋಷ ತರಿಸಿದೆ, ಎಂದರು ಈ ಬಾರಿ ವಿಶೇಷವಾಗಿ ಕೊಳ್ಳೇಗಾಲ ತಂಡವೂ ಕೂಡ ಭಾಗವಹಿಸುವ ಮೂಲಕ ಐದು ತಂಡಗಳು ಭಾಗವಹಿಸಲಿದ್ದು ಎಲ್ಲಾ ತಂಡದ ಸದಸ್ಯರಿಗೂ ಒಳ್ಳೆಯದಾಗಲಿ ಎಂದು ಶುಭ ಕೋರಿದರು.



ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಆರ್ ಎನ್ ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ರಾಜ್ಯ ಸಮಿತಿ ಸದಸ್ಯ ಮಹೇಂದ್ರ, ಖಜಾಂಚಿ ಆರ್ ಸಿ ಪುಟ್ಟರಾಜು, ಕೊಳ್ಳೇಗಾಲ ತಾಲ್ಲೂಕು ಸಂಘದ ಅಧ್ಯಕ್ಷ ಚಿಕ್ಕ ಮಾಳಿಗೆ, ಹನೂರು ತಾಲ್ಲೂಕು ಸಂಘದ ಅಧ್ಯಕ್ಷ ದೇವರಾಜು ನಾಯ್ಡು, ಗುಂಡ್ಲುಪೇಟೆ ತಾಲ್ಲೂಕು ಸಂಘದ ಅಧ್ಯಕ್ಷ ಬಸವರಾಜು, ಜಿಲ್ಲಾ ಸಂಘ ಹಾಗೂ ತಾಲ್ಲೂಕು ಸಂಘದ ಪದಾಧಿಕಾರಿಗಳು ಹಾಗೂ ಸಂಘದ ಎಲ್ಲಾ ಪತ್ರಕರ್ತ ಸದಸ್ಯರು ಉಪಸ್ಥಿತರಿದ್ದರು.

### ಚಾ.ನಗರ ತಂಡ ಚಾಂಪಿಯನ್

ಈ ಬಾರಿ ನಡೆದ ಪಂದ್ಯಾವಳಿಯಲ್ಲಿ ಚಾ.ನಗರ ಜಿಲ್ಲಾ ಕೇಂದ್ರದಿಂದ ಎರಡು ತಂಡ, ಹನೂರು, ಕೊಳ್ಳೇಗಾಲ, ಯಳಂದೂರು ಹಾಗೂ ಗುಂಡ್ಲುಪೇಟೆ ತಾಲ್ಲೂಕು ತಲಾ ಒಂದೊಂದು ತಂಡಗಳು ಭಾಗವಹಿಸಿದ್ದವು. ಚಾ.ನಗರ ಎ ತಂಡ ಜಿಲ್ಲಾ ಕೇಂದ್ರದ ಮತ್ತೊಂದು ತಂಡದೊಂದಿಗೆ ಜಯ ಗಳಿಸುವ ಮೂಲಕ ಕೊಳ್ಳೇಗಾಲ ತಂಡದೊಂದಿಗೆ ಸೆಮಿಫೈನಲ್ ತಲುಪಿದರೆ, ಹನೂರು ತಂಡವು ಯಳಂದೂರು ತಂಡವನ್ನು ಮಣಿಸಿ ಗುಂಡ್ಲುಪೇಟೆ ಜೊತೆ ಕಾದ್ಯಾಟಕ್ಕೆ ಸೆಮಿಫೈನಲ್ ತಲುಪಿತು. ಅಂತಿಮವಾಗಿ ಗುಂಡ್ಲುಪೇಟೆ ಹಾಗೂ ಚಾ.ನಗರ ಜಿಲ್ಲಾ ತಂಡಗಳ ನಡುವೆ ನಡೆದ ಫೈನಲ್ ಪಂದ್ಯದಲ್ಲಿ ಚಾ.ನಗರ ಜಿಲ್ಲಾ ತಂಡವು ಜಯ ಗಳಿಸುವ ಮೂಲಕ ಈ ಬಾರಿಯೂ ಚಾಂಪಿಯನ್ನಾಗಿ ಹೊರ ಹೊಮ್ಮಿತು. ಗುಂಡ್ಲುಪೇಟೆ ತಂಡವು ರನ್ನರ್ ಅಪ್ ಗೆ ತೃಪ್ತಿ ಪಟ್ಟಿಕೊಂಡಿತು.

# ಸಫಾರಿ ವಲಯದಲ್ಲಿ ಕಾಣಿಸಿಕೊಂಡ ಕರಡಿ

ಗುಂಡ್ಲುಪೇಟೆ: ತಾಲೂಕಿನ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ವಲಯದಲ್ಲಿ ಕರಡಿಯೊಂದು ತನ್ನ ಮರಿಗಳೊಂದಿಗೆ ಕಾಣಿಸಿಕೊಂಡ ಅಪರೂಪದ ದೃಶ್ಯ ಸಫಾರಿಗೆ ತೆರಳಿದ್ದ ಪ್ರವಾಸಿಗರ ಗಮನ ಸೆಳೆದಿದೆ.



ಸಫಾರಿ ವೇಳೆ ರಸ್ತೆ ದಾಟುತ್ತಿದ್ದ ಕರಡಿ ತನ್ನ ಮರಿಗಳನ್ನು ಎಚ್ಚರಿಕೆಯಿಂದ ಕರೆದುಕೊಂಡು ಸಾಗುತ್ತಿರುವ ಮನಮೋಹಕ ದೃಶ್ಯವನ್ನು ಪ್ರವಾಸಿಗರು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ. ತಾಯಿ ಕರಡಿ ಮರಿಗಳ ಸುರಕ್ಷತೆಗೆ ಆದ್ಯತೆ ನೀಡಿ ಅವುಗಳನ್ನು ಕಾಪಾಡುತ್ತಾ ಸಾಗಿದ ದೃಶ್ಯ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ವನ್ಯಜೀವಿ ಪ್ರಿಯರು ಹಾಗೂ ನೆಟ್ಟಿಗರು ತಾಯಿ-ಮರಿಗಳ ಬಾಂಧವ್ಯವನ್ನು ಕೊಂಡಾಡುತ್ತಿದ್ದಾರೆ. ಬಂಡಿಪುರ ದಲ್ಲಿ ಇಂತಹ ಅಪರೂಪದ ವನ್ಯಜೀವಿ ದರ್ಶನಗಳು ಪ್ರವಾಸಿಗರಿಗೆ ವಿಶೇಷ ಅನುಭವವನ್ನು ನೀಡುತ್ತಿದ್ದು, ಸಫಾರಿಗೆ ಮತ್ತಷ್ಟು ಆಕರ್ಷಣೆ ಹೆಚ್ಚಿಸಿವೆ.

# ಉದ್ಯೋಗಾವಕಾಶಗಳನ್ನು ಅರಸಿದರೆ ಭವಿಷ್ಯ ಉಜ್ವಲ




ಗುಂಡ್ಲುಪೇಟೆ: ದೂರದ ಪ್ರದೇಶಗಳಲ್ಲಿಯೂ ಉದ್ಯೋಗಾವಕಾಶಗಳನ್ನು ಅರಸಿ ತೆರಳುವ ಮನೋಭಾವ ಬೆಳೆಸಿಕೊಂಡರೆ ಯುವಕರ ಭವಿಷ್ಯ ಉಜ್ವಲವಾಗಲಿದೆ ಎಂದು ಶಾಸಕ ಎಚ್.ಎಂ. ಗಣೇಶಪ್ರಸಾದ್ ಹೇಳಿದರು.

ಪಟ್ಟಣದ ಗುರುಭವನದಲ್ಲಿ ಸಂಗಮ ಪ್ರತಿಷ್ಠಾನ ಹಾಲಹಳ್ಳಿ (ರಿ), ಸಂಕಲ್ಪ ಶಿಕ್ಷಕರ ವೇದಿಕೆ ಗುಂಡ್ಲುಪೇಟೆ ಹಾಗೂ ಮಹಾಮನೆ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಪೊಲೀಸ್ ನೇರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಒಂದು ದಿನದ ಉಚಿತ ವಿಶೇಷ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಪರಿಸ್ಥಿತಿಯಲ್ಲಿ ವಿದ್ಯಾವಂತರಿಗೆ ಉದ್ಯೋಗದ ಸಮಸ್ಯೆ ಹೆಚ್ಚಾಗಿದ್ದು, ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆ ಹಾಗೂ ಸರ್ಕಾರಿ ನಿಯಮಗಳಿಂದ ಉದ್ಯೋಗ ಪಡೆಯುವುದು ಸವಾಲಾಗಿದೆ. ತಮ್ಮ ಊರಿನಲ್ಲಿಯೇ ಉದ್ಯೋಗ ಸಿಗಬೇಕು ಎನ್ನುವ ಮನೋಭಾವವನ್ನು ಬಿಟ್ಟು ಹೊರಪ್ರದೇಶಗಳಲ್ಲಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಗಮ ಪ್ರತಿಷ್ಠಾನ ಹಾಗೂ ಸಂಕಲ್ಪ ಶಿಕ್ಷಕರ ವೇದಿಕೆಯ ತರಬೇತಿಯ ಮೂಲಕ ಸುಮಾರು 500ಕ್ಕೂ ಹೆಚ್ಚು ಯುವಕರು ವಿವಿಧ ಹುದ್ದೆಗಳಲ್ಲಿ ಉದ್ಯೋಗ ಪಡೆದಿರುವುದು ಶ್ಲಾಘನೀಯ ಸಾಧನೆಯಾಗಿದೆ. ಉದ್ಯೋಗಕ್ಕಾಗಿ ಕಾಯುವುದಕ್ಕಿಂತ ಸ್ವಯಂ ಉದ್ಯೋಗ ಸೃಷ್ಟಿಸಿಕೊಳ್ಳುವ ಮನೋಭಾವವೂ ಅಗತ್ಯ ಎಂದು ಹೇಳಿದರು. ಪ್ರಸ್ತುತ ಪೊಲೀಸ್ ಇಲಾಖೆಯಲ್ಲಿ ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಮರ್ಪಕವಾಗಿ ಸಿದ್ಧತೆ ನಡೆಸಿ ಇಂತಹ ಕಾರ್ಯಾಗಾರಗಳ ಪ್ರಯೋಜನ ಪಡೆಯುವಂತೆ ಯುವಕರಿಗೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಎನ್. ಮಹದೇವಸ್ವಾಮಿ, ಸಾಧನ ಅಕಾಡೆಮಿಯ ತರಬೇತುದಾರ ಮಂಜುನಾಥ್ ಶಿಕ್ಷಕರು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯ ಅಭ್ಯರ್ಥಿಗಳು ಉಪಸ್ಥಿತರಿದ್ದರು.

# ಸಂಘಟನೆಗಳು ಸದಾ ಸಕ್ರಿಯವಾಗಿರಲಿ



**ಮೈಸೂರು:** ಸಂಘಟನೆಗಳು ಸದಾ ಸಕ್ರಿಯವಾಗಿ ಕಾರ್ಯ ನಿರ್ವಹಿಸಬೇಕು ಎಂದು ಹೊಸದುರ್ಗ ಭಗೀರಥ ಪೀಠದ ಶ್ರೀ ಡಾ.ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಹೇಳಿದರು.

ನಗರದ ಸರಸ್ವತಿ ಪುರಂನಲ್ಲಿರುವ ಉಪ್ಪಾರ ವಿದ್ಯಾರ್ಥಿ ನಿಲಯದ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಉಪ್ಪಾರ ಸಂಘದ ವತಿಯಿಂದ ಕೆ. ಆರ್.ನಗರ ತಾಲೂಕು ತಿಪ್ಪೂರು ಗ್ರಾಮದ ಉಪ್ಪಾರ ಸಮಾಜದ ಶ್ರೀ ಅಂತರಗಟ್ಟೆಯಮ್ಮ ದೇವಸ್ಥಾನಕ್ಕೆ ಕೊಡುಗೆಯಾಗಿ ನೀಡಲಾದ ಧ್ವನಿ ವರ್ಧಕವನ್ನು ವಿತರಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶಗಳಲ್ಲಿ ಧಾರ್ಮಿಕ ಕಾರ್ಯಗಳನ್ನು ಮಾಡುವ ಸಂದರ್ಭದಲ್ಲಿ ಎಲ್ಲರೂ ಒಮ್ಮತದಿಂದ ಕೈಜೋಡಿಸಬೇಕು. ಆ ಮೂಲಕ ಸಂಘಟಿತರಾಗಿ ಸಮಾಜದ ಸಂಘಟನೆಗಳನ್ನು ಗಟ್ಟಿಯಾಗಿ ಕಟ್ಟಬೇಕು ಜೊತೆಗೆ ಸರ್ವರೂ ಜಾಗೃತಿಯಾಗಬೇಕು ಎಂದು ಕರೆ ನೀಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಉಪ್ಪಾರ ಸಮುದಾಯದವರು ಎಲ್ಲಾ ಸಮುದಾಯಗಳೊಂದಿಗೆ ಪ್ರೀತಿ, ವಿಶ್ವಾಸದಿಂದ ಬೆರೆತು ಸಹಬಾಳ್ವೆಯಿಂದ ಬದುಕನ್ನು ನಡೆಸುವ ಮೂಲಕ ಇತರರಿಗೆ ಮಾದರಿಯಾಗಬೇಕು. ಉಪ್ಪಾರ ಸಮಾಜದವರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣವನ್ನು ಕೊಡಿಸುವ ಮೂಲಕ ಉನ್ನತ ವ್ಯಾಸಂಗವನ್ನು ಮಾಡಿ ವಿದ್ಯಾರ್ಥಿಗಳು ಉನ್ನತ ಸ್ಥಾನಮಾನಗಳನ್ನು ಅಲಂಕರಿಸುವಂತೆ ಮಾಡಲು ಪೋಷಕರು ಶ್ರಮಿಸಬೇಕು. ಸಮಾಜದಲ್ಲಿ ನೊಂದವರಿಗೆ, ಕಷ್ಟದಲ್ಲಿ ಇರುವವರಿಗೆ, ಅತ್ಯಂತ ಹಿಂದುಳಿದವರಿಗೆ ಆರ್ಥಿಕವಾಗಿ ಸಬಲರಾಗಿರುವವರು ತಮ್ಮ ಸಹಾಯ ಹಸ್ತ ಚಾಚುವ ಮೂಲಕ ಅವರಿಗೆ ನೆರವಾಗಬೇಕೆಂದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಕರಳಾಪುರ ನಾಗರಾಜು, ಗೌರವಾಧ್ಯಕ್ಷ ಕನಕನಗರ ಮಹದೇವ್, ಸಂಘಟನಾ ಕಾರ್ಯದರ್ಶಿ ಆರ್.ವಿನೋದ್ ಉಪ್ಪಾರ್, ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ, ಕೆ.ಆರ್.ನಗರ ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಕಾಟ್ನಾಳ್ ಮಹದೇವ್, ಖಜಾಂಚಿ ತಿಪ್ಪೂರುರವಿ, ಮುಖಂಡರಾದ ಮಂಜುನಾಥ್, ಪ್ರದೀಪ್, ಸಿದ್ದಪ್ಪಸ್ವಾಮಿ, ಮಹೇಶ್ ಸೇರಿ ಹಲವರು ಇದ್ದರು.

# ಐದು ದಶಕಗಳು ಉತ್ತಮ ಸೇವೆ ಸಲ್ಲಿಸಿದ್ದ ಬಾಬು ಜಗಜೀವನ್ ರಾಮ್



ಎಚ್.ಡಿ.ಕೋಟೆ: ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ, ದಲಿತರ ಧ್ವನಿ ಡಾ.ಬಾಬು ಜಗಜೀವನ್ ಜೀವನ್ ರಾಮ್ ಅವರ 40ನೇ ಪುಣ್ಯ ಸ್ಮರಣೆಯನ್ನು ಪಟ್ಟಣದ ಬಾಬು ಜಗಜೀವನ್ ರಾಮ್ ಭವನದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಚರಿಸಲಾಯಿತು.

ತಾಲೂಕು ಕಾರ್ಯ ನಿರ್ವಹಣಾಧಿಕಾರಿ ರವಿಚಂದ್ರ ಮಾತನಾಡಿ, ಬಾಬು ಜಗಜೀವನ್ ರಾಮ್ ಅವರು ಭಾರತದ ರಾಜಕೀಯ ಇತಿಹಾಸದಲ್ಲಿ ಐದು ದಶಕಗಳ ಕಾಲ ಅತ್ಯುನ್ನತ ಸೇವೆ ಸಲ್ಲಿಸಿ, ಯುವ ಪೀಳಿಗೆಗೆ ಮಾದರಿಯಾಗಿ ಕನಿಷ್ಠ ವೇತನ ಇನ್ನಿತರ ಕೊಡುಗೆಗಳನ್ನು ನೀಡಿದವರು ಕೃಷಿ ಸಚಿವರಾಗಿ ಹಲವಾರು ಸುಧಾರಣೆ ತಂದು ದೇಶದ ಜನರ ಹಸಿವನ್ನು ನೀಗಿಸಿದವರು ಎಂದರು.

ಪುರಸಭೆ ಮುಖ್ಯಾಧಿಕಾರಿ ಸುರೇಶ್ ಮಾತನಾಡಿ, ನಮ್ಮ ದೇಶವು ಇತರ ದೇಶಗಳ ಸಾಲಿನಲ್ಲಿ ನಿಲ್ಲಲು ಮಹನೀಯರ ಕೊಡುಗೆ ಅಪಾರ. ದೇಶವು ಸ್ವಾವಲಂಬಿಯಾಗಿ ಆಹಾರ ಪದಾರ್ಥಗಳನ್ನು ಹೆಚ್ಚಿಸಿಕೊಳ್ಳಲು ಇವರ ಪಾತ್ರ ಅನನ್ಯ. ತಾಲೂಕಿನ ಕೇಂದ್ರ ಸ್ಥಾನದಲ್ಲಿ ನಿರ್ಮಾಣಗೊಂಡಿರುವ ಸಮುದಾಯ ಭವನದ ಪಕ್ಕದಲ್ಲಿ ಅಡುಗೆ ಮನೆ ನಿರ್ಮಿಸಲು ಹೆಚ್ಚುವರಿಯಾಗಿ ಜಾಗವನ್ನು ಅಳತೆ ಮಾಡಿ ಸಮುದಾಯಕ್ಕೆ ನೀಡಲಾಗುವುದು ಎಂದು ತಿಳಿಸಿದರು.

ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆ ಅಧ್ಯಕ್ಷ ಸಿ.ತಿಮ್ಮಯ್ಯ ಮಾತನಾಡಿ, ಡಾ. ಅಂಬೇಡ್ಕರ್ ಅವರು ಬರೆದ ಸಂವಿಧಾನದಲ್ಲಿ ಯಾವ ಯಾವ ಸಮುದಾಯಕ್ಕೆ ಯಾವ ಯಾವ ಸೌಲಭ್ಯಗಳು ದೊರೆಯಬೇಕು ಅವುಗಳನ್ನು ತಲುಪಿಸುವಲ್ಲಿ ಪ್ರಾಮಾಣಿಕ ಕೆಲಸ ಮಾಡಿದ ವ್ಯಕ್ತಿ ಬಾಬುಜೀ. ಕೃಷಿ ಸಚಿವರಾಗಿ, ರೈಲ್ವೆ, ಕಾರ್ಮಿಕ ಸಚಿವರಾಗಿ ಈ ದೇಶಕ್ಕೆ ಕೊಟ್ಟ ಕೊಡುಗೆ ಅಪಾರ ಎಂದು ತಿಳಿಸಿದರು.

ಮಾದರ ಮಹಾಸಭಾ ಅಧ್ಯಕ್ಷರಾದ ಪರಶಿವ ಮೂರ್ತಿ ಮಾತನಾಡಿ, ನಾವುಗಳು ಜೀವನದಲ್ಲಿ ಬಾಬುಜೀರವರ ತತ್ವ ಸಿದ್ಧಾಂತ, ಆದರ್ಶಗಳನ್ನು ಮೈಗೂಡಿಸಿಕೊಂಡು ಜೀವನ ನಡೆಸೋಣ. ಬಾಲ್ಯದಲ್ಲಿ ಅತೀ ಚುರುಕಿನ ವ್ಯಕ್ತಿ, ಅತೀ ಚಿಕ್ಕ ವಯಸ್ಸಿನಲ್ಲಿ ಶಾಸಕರು, ಕಾರ್ಮಿಕ ಸಚಿವರಾಗಿ ದೇಶದಲ್ಲಿ ಎದುರಾಗುತ್ತಿದ್ದ ಬರ ಪರಿಸ್ಥಿತಿಯನ್ನು ನೀಗಿಸಲು ಹಸಿರು ಕ್ರಾಂತಿ ತಂದು ಶೋಷಿತ ಸಮುದಾಯಗಳಿಗೆ ಹೆಚ್ಚಿನ ಕೊಡುಗೆ ನೀಡಿದರು ಎಂದರು. ಕಾರ್ಯಕ್ರಮ ಕುರಿತು ವಿಚಾರ ವೇದಿಕೆ ಮಾಜಿ ಅಧ್ಯಕ್ಷ ಪಿ.ನಾಗರಾಜು, ಬೆಟ್ಟಸ್ವಾಮಿ, ಶಿವಯ್ಯ, ವೆಂಕಟೇಶ್, ಮುದ್ದು ಮಲ್ಲಯ್ಯ, ಆನಗಟ್ಟಿ ದೇವರಾಜ್ ಮಾತನಾಡಿದರು. ಸಬ್ ಇನ್ಸ್ಪೆಕ್ಟರ್ ಚಿಕ್ಕನಾಯಕ, ಸಮಾಜ ಕಲ್ಯಾಣ ಅಧಿಕಾರಿ ರಮೇಶ್, ಪರಿಶಿಷ್ಟ ಪಂಗಡ ಅಧಿಕಾರಿ ಮಹೇಶ್, ನಾಗರಾಜ್, ಎಇಇ ಚಂದು ಕುಮಾರ್, ಸರಗೂರು ಮಾದರ ಮಹಾಸಭಾ ಅಧ್ಯಕ್ಷ ಬೆಟ್ಟಸ್ವಾಮಿ, ಮಾತಂಗ ಜನ ಜಾಗೃತಿ ವೇದಿಕೆ ಅಧ್ಯಕ್ಷ ರವೀಶ್, ಚಾ. ನಂಜುಂಡಮೂರ್ತಿ, ಜೀವಿಕ ಬಸವರಾಜು, ಪುಟ್ಟಮಾದು, ಉಡ ನಾಗರಾಜ್, ವೆಂಕಟೇಶ್, ಶಿವಯ್ಯ, ಡಿ. ನಾಗರಾಜ್, ಚೆಲುವರಾಜ್, ಮುದ್ದು ಮಲ್ಲಯ್ಯ, ಮಹಾಲಿಂಗಯ್ಯ, ಸೋಮು ಪಟೇಲ್, ಭೋಗೇಶ್ವರ ಕಾಲೋನಿ ತಿಮ್ಮರಾಜು, ಆನಗಟ್ಟಿ ದೇವರಾಜ್, ವೆಂಕಟಪ್ಪ, ಜಶೀಲಾ, ಸಿ.ಕಾಳಪ್ಪಾಜಿ, ಗಿರಿ ಪ್ರಸಾದ್ ಸಿಂಗಯ್ಯ, ಚಿಕ್ಕಸ್ವಾಮಿ, ಶಿವರಾಜ್, ಪೇಂಟ್ ನಾಗರಾಜ್, ಮಹೇಶ್, ಚನ್ನಪ್ಪ, ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು, ಸಮುದಾಯದ ಮುಖಂಡರು ಭಾಗವಹಿಸಿದ್ದರು.

# ಬಾಬೂಜಿ ಪುಣ್ಯಸ್ಮರಣೆ

## ಎಲ್ಲೆಡೆಯೂ 'ಹಸಿರು ಕ್ರಾಂತಿ ಹರಿಕಾರನ ಸ್ಮರಣೆ

ಮಡಿಕೇರಿ:-ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಸಿರು ಕ್ರಾಂತೀಯ ಹರಿಕಾರ ಡಾ.ಬಾಬು ಜಗಜೀವನ್‌ರಾಂ ಅವರ 40 ನೇ ಪುಣ್ಯಸ್ಮರಣಾ ಕಾರ್ಯಕ್ರಮವು ಸೋಮವಾರ ಸರಳವಾಗಿ ಆಚರಿಸಲಾಯಿತು.





ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಡಾ.ಬಾಬು ಜಗಜೀವನ್ ರಾಂ ಅವರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶೇಖರ್, ಪಶುಪಾಲನಾ ಇಲಾಖೆ ಉಪ ನಿರ್ದೇಶಕರಾದ ಲಿಂಗರಾಜ ದೊಡ್ಡಮನಿ, ನಗರಸಭೆ ಸದಸ್ಯರಾದ ಸತೀಶ್, ಡಿಎಸ್‌ಎಸ್ ಜಿಲ್ಲಾ ಸಂಚಾಲಕರಾದ ದಿವಾಕರ, ದೀಪಕ್ ಪೊನ್ನಪ್ಪ, ಮೋಹನ್ ಮೌರ್ಯ, ಪ್ರೇಮ ಕೃಷ್ಣಪ್ಪ, ಜನಾರ್ಧನ, ಇತರರು ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.

ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶೇಖರ್ ಅವರು ಮಾತನಾಡಿ ಬಾಬು ಜಗಜೀವನ್ ರಾಂ ಅವರು ಕೇಂದ್ರದಲ್ಲಿ ಆಹಾರ ಸಚಿವರಾಗಿ 'ಹಸಿರು ಕ್ರಾಂತಿ' ಜಾರಿಗೊಳಿಸಿದರು ಎಂದು ಹೇಳಿದರು. ಬಡವರ ಏಳಿಗೆಗೆ ಶ್ರಮಿಸಿದ ಬಾಬು ಜಗಜೀವನ್ ರಾಂ ಅವರು ಸಮಾಜದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಅವರು ತಿಳಿಸಿದರು.

ಆಹಾರ, ಕಾರ್ಮಿಕ, ರಕ್ಷಣಾ ಸಚಿವರಾಗಿ ಹಲವು ಮಹತ್ತರ ಕಾರ್ಯಗಳನ್ನು ಕೈಗೊಂಡು ರಾಷ್ಟ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ನುಡಿದರು. ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕರಾದ ಎಚ್. ಎಲ್.ದಿವಾಕರ ಅವರು ಮಾತನಾಡಿ ದೇಶದ ಪ್ರಗತಿಯಲ್ಲಿ ಎಲ್ಲರ ಪ್ರಗತಿ ಇದೆ, ಪ್ರತಿಯೊಬ್ಬರ ಉದ್ದಾರದಲ್ಲಿಯೇ ಎಲ್ಲರ ಅಭಿವೃದ್ಧಿ ಇದೆ ಎಂದು ಬಾಬು ಜಗಜೀವನ್ ರಾಂ ಅವರು ಸಾರಿದ್ದಾರೆ ಎಂದು ತಿಳಿಸಿದರು. ವಿವಿಧ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇದ್ದರು.

## ಬಾಬೂಜಿ ಕೊಡುಗೆ ಅಪಾರ



ಗುಂಡ್ಲುಪೇಟೆ: ಸ್ವಾತಂತ್ರ್ಯ ಹೋರಾಟಗಾರ, ಮಾಜಿ ಉಪ ಪ್ರಧಾನಿ ಹಾಗೂ ಹಸಿರು ಕ್ರಾಂತಿಯ ಹರಿಕಾರರಾದ ಡಾ. ಬಾಬು ಜಗಜೀವನ್ ರಾಮ್ ಅವರ ಕೊಡುಗೆ ದೇಶಕ್ಕೆ ಅಪಾರವಾಗಿದ್ದು, ಅವರ ಆದರ್ಶಗಳು ಇಂದಿಗೂ ಸಮಾಜಕ್ಕೆ ಮಾರ್ಗದರ್ಶಿಯಾಗಿವೆ ಎಂದು ತಹಸೀಲ್ದಾರ್ ತನ್ಮಯ್ ಹೇಳಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಡಾ. ಬಾಬು ಜಗಜೀವನ್ ರಾಮ್ ಅವರ 40ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ್ದ ನಮನ ಕಾರ್ಯಕ್ರಮಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ತಳಮಟ್ಟದ ಸಮುದಾಯದಿಂದ ಬೆಳೆದು ರಾಷ್ಟ್ರ ನಾಯಕನಾಗಿ ಹೊರಹೊಮ್ಮಿದ ಡಾ. ಬಾಬು ಜಗಜೀವನ್ ರಾಮ್ ಅವರು ಸಮಾಜಮುಖಿ ಕಾರ್ಯಗಳ ಮೂಲಕ ಶೋಷಿತ ವರ್ಗಗಳ ಏಳಿಗೆಗಾಗಿ ಶ್ರಮಿಸಿದರು. ಹಸಿರು ಕ್ರಾಂತಿಯ ಮೂಲಕ ಕೃಷಿ ಕ್ಷೇತ್ರಕ್ಕೆ ನೀಡಿದ ಅವರ ಕೊಡುಗೆಯಿಂದ ದೇಶ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಸಾಧ್ಯವಾಯಿತು ಎಂದು ತಿಳಿಸಿದರು. ಮುಖ್ಯ ಭಾಷಣಕಾರ ಲೇಖಕ ಕೆ.ಆರ್. ರಾಚಯ್ಯ ಮಾತನಾಡಿ, ಡಾ. ಬಾಬು ಜಗಜೀವನ್ ರಾಮ್ ಅವರು ಸ್ವಾತಂತ್ರ್ಯ ಹೋರಾಟಗಾರ, ರಾಷ್ಟ್ರ ನಾಯಕ ಹಾಗೂ ಸಮಾಜ ಸುಧಾರಕರಾಗಿ ದೇಶಕ್ಕೆ ಸಲ್ಲಿಸಿದ ಸೇವೆಗಳನ್ನು ಸದಾ ಸ್ಮರಿಸಬೇಕು. ಅವರ ಜೀವನ ಮತ್ತು ಆದರ್ಶಗಳು ಯುವ ಪೀಳಿಗೆಗೆ ಪ್ರೇರಣೆಯಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕ ಮೋಹನ್ ಕುಮಾರ್, ಪುರಸಭೆಯ ಮುಖ್ಯಾಧಿಕಾರಿ ಶರವಣ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಷಣ್ಮುಗಂ, ಮುಖಂಡರಾದ ಸಿದ್ದಯ್ಯ, ಮುತ್ತಣ್ಣ, ದಸಂಸ ರಂಗಸ್ವಾಮಿ (ಮಾಡ್ರಹಳ್ಳಿ), ಶಂಕರ್ ಗುಂಡ್ಲುಪೇಟೆ. ಮಹದೇವ. ನಿಟ್ರೆ. ಈಶ್ವರ್, ಉಪನ್ಯಾಸಕ ರಮೇಶ್, ಪಾಪಣ್ಣ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

## ರಾಷ್ಟ್ರದ ಏಳಿಗೆಗೆ ಶ್ರಮಿಸಿದ ಬಾಬೂಜಿ



ಮೈಸೂರು: ಡಾ.ಬಾಬು ಜಗಜೀವನ ರಾಮ್ ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗದೆ ಇಡೀ ರಾಷ್ಟ್ರದ ಏಳಿಗೆಗಾಗಿ ಶ್ರಮಿಸಿದ ನಾಯಕ. ಅವರ ಆದರ್ಶ, ದೇಶಭಕ್ತಿ ಮತ್ತು ಧೀಮಂತ ವ್ಯಕ್ತಿತ್ವ ಇಂದಿನ ಯುವ ಪೀಳಿಗೆಗೆ ಸದಾ ಪ್ರೇರಣಾದಾಯಕ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ಜಿಲ್ಲಾಡಳಿತದವತಿಯಿಂದ ನಗರದ ರೈಲ್ವೆ ನಿಲ್ದಾಣದಲ್ಲಿರುವ ಡಾ.ಬಾಬು ಜಗಜೀವನರಾವ್ ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತ ನಾಡಿದರು. ಡಾ.ಬಾಬು ಜಗಜೀವನ ರಾಮ್ ಭಾರತದ ರಾಜಕೀಯ ಇತಿಹಾಸದ ಧ್ರುವತಾರೆ, ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಾಮಾಜಿಕ ಸಮಾನತೆಯ ಹರಿಕಾರ. ಮಹಾತ್ಮಾ ಗಾಂಧೀಜಿ ವಿಚಾರಧಾರೆಗಳಿಂದ ಪ್ರೇರಿತರಾದ ಬಾಬೂಜಿ 1930ರ ದಶಕದಲ್ಲೇ ರಾಷ್ಟ್ರೀಯ ಚಳವಳಿಗಳಲ್ಲಿ ಭಾಗ ವಹಿಸಿದರು. ಗಾಂಧೀಜಿಯವರ ನೇತೃತ್ವದ ವೈಯಕ್ತಿಕ ಸತ್ಯಾಗ್ರಹಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು ಎಂದು ಹೇಳಿದರು. ಡಾ.ಬಾಬು ಜಗಜೀವನ ರಾಮ್ ಕೊಡುಗೆಗಳು ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯುವಂತದ್ದಾಗಿದೆ. ವಿಶ್ವ ದಾಖಲೆ ಯೆಂಬಂತೆ ಅವರು 1936 ರಿಂದ 1986 ರವರೆಗೆ ಸತತ 50 ವರ್ಷಗಳ ಕಾಲ ಸಂಸತ್ತಿನಲ್ಲಿ ಜನಪ್ರಿಯ ನಾಯಕರಾಗಿ ಸೇವೆ ಸಲ್ಲಿಸಿದರು. ದೇಶದ ಆಹಾರ ಮತ್ತು ಕೃಷಿ ಸಚಿವರಾಗಿದ್ದ ಅವಧಿಯಲ್ಲಿ ಭಾರತವು ತೀವ್ರ ಆಹಾರದ ಕೊರತೆಯನ್ನು ಎದುರಿಸುತ್ತಿತ್ತು. ಅವರ ದೂರದೃಷ್ಟಿ ಮತ್ತು ಕಠಿಣ ನಿರ್ಧಾರಗಳಿಂದಾಗಿ ದೇಶದಲ್ಲಿ "ಹಸಿರು ಕ್ರಾಂತಿ" ಯಶಸ್ವಿಯಾಗಿ, ಭಾರತವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿತು ಎಂದು ತಿಳಿಸಿದರು.

ಭಾರತದ ಉಪ ಪ್ರಧಾನಮಂತ್ರಿ ಮತ್ತು ಕಾರ್ಮಿಕ ಸಚಿವರಾಗಿ ಕೆಲಸ ಮಾಡುವಾಗ ಶೋಷಿತರ, ದೀನದಲಿತರ ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ ಅನೇಕ ಪ್ರಮುಖ ಕಾಯ್ದೆಗಳನ್ನು ಜಾರಿಗೆ ತಂದರು ಹಾಗೂ ಅಂದು ಅವರು ಕೃಷಿ ಕ್ಷೇತ್ರದಲ್ಲಿ ರೂಪಿಸಿದ ಯೋಜನೆಗಳ ಮೇಲೆ ಇಂದು ನಮ್ಮ ಕೃಷಿ ಇಲಾಖೆ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಾಸಕರಾದ ತನ್ವೀರ್ ಸೇಠ್, ಟಿ.ಎಸ್ ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಸಿ.ಎನ್ ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ ಇನ್ನಿತರರು ಉಪಸ್ಥಿತರಿದ್ದರು.

# ಅಕ್ರಮ ಕೇರಳ ಲಾಟರಿ ಮಾರಾಟ: ವ್ಯಕ್ತಿ ಬಂಧನ, 96 ಟಿಕೆಟ್ ವಶ

ಹನೂರು: ಅಕ್ರಮವಾಗಿ ಕೇರಳ ರಾಜ್ಯ ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹನೂರು ಪೊಲೀಸರು ಬಂಧಿಸಿದ್ದಾರೆ.



ಬಂಧಿತ ಆರೋಪಿಯನ್ನು ಹನೂರು ತಾಲೂಕಿನ ಬಂಡಳ್ಳಿ ಗ್ರಾಮದ ಮುತ್ತಪ್ಪ, 65 ವರ್ಷ ಎಂದು ಗುರುತಿಸಲಾಗಿದೆ.

**ಘಟನೆಯ ವಿವರ:**

ಬಂಡಳ್ಳಿ ಗ್ರಾಮದ ಪೆಟ್ರೋಲ್ ಬಂಕ್ ಸಮೀಪ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಕೇರಳ ಲಾಟರಿ ಟಿಕೆಟ್ ಮಾರಾಟ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ಮತ್ತು ಇನ್ಸ್ಪೆಕ್ಟರ್ ಆನಂದಮೂರ್ತಿ ಅವರ ಮಾರ್ಗದರ್ಶನದಲ್ಲಿ ಅರಕ್ಷಕ ಉಪ ನಿರೀಕ್ಷಕರಾದ ಸಾಹೇಬಗೌಡ ಹಾಗೂ ಸಿಬ್ಬಂದಿಗಳು ದಾಳಿ ನಡೆಸಿದ್ದಾರೆ. ದಾಳಿಯ ವೇಳೆ ಆರೋಪಿಯ ಬಳಿ ಇದ್ದ 4,800/- ರೂ ಮೌಲ್ಯದ ಒಟ್ಟು 96 ಲಾಟರಿ ಟಿಕೆಟ್‌ಗಳು ಮತ್ತು ಮಾರಾಟ ಮಾಡಿ ಆತನ ಬಳಿ ಇದ್ದ 4,120/- ರೂ ನಗದು ಹಣವನ್ನು ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ ಹನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಮುಂದುವರೆಸಲಾಗಿದೆ.

# ಮಳೆಗಾಗಿ ಮಲೆಮಹದೇಶ್ವರನ ಮೊರೆ



**ಚಾಮರಾಜನಗರ:** ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಬರದ ಛಾಯೆ ಆವರಿಸಿದ್ದು, ಮಳೆಗಾಗಿ ರೈತರು ಮಲೆಮಹದೇಶ್ವರನ ಮೊರೆ ಹೋಗಿದ್ದಾರೆ. ನೂರಾರು ಮಂದಿ ಮೈಸೂರು, ಚಾಮರಾಜನಗರ ಭಾಗದ ರೈತರು ಮಾದಪ್ಪನ ಬೆಟ್ಟಕ್ಕೆ ಯಾತ್ರೆ ಹೊರಟು ಮಳೆಗಾಗಿ ಪ್ರಾರ್ಥನೆ ಸಲ್ಲಿಸಿದ್ದಾರೆ.

ಕೆರೆಗಳು ಬತ್ತಿಹೋಗುತ್ತಿದ್ದು, ಜಲಾಶಯಗಳಲ್ಲಿ ಡೆಡ್ ಸ್ಟೋರೇಜ್ ಹಂತದಲ್ಲಿ ನೀರಿದೆ. ನೀರು ಹರಿಸಲಾಗದ ಸ್ಥಿತಿಯಲ್ಲಿ ಅಧಿಕಾರಿಗಳಿದ್ದಾರೆ. ಸರ್ಕಾರ, ಅಧಿಕಾರಿಗಳು, ಜನಪ್ರತಿನಿಧಿಗಳು ಕೈ ಬಿಟ್ಟರೂ ಆರಾಧ್ಯ ದೈವ ಮಲೆ ಮಹದೇಶ್ವರ ಕೈ ಬಿಡಲ್ಲ ಎಂಬ ಭರವಸೆಯಲ್ಲಿ ನೂರಾರು ಮಂದಿ ರೈತರು ಈಗ ಮಾದಪ್ಪನ ಮೊರೆ ಹೋಗಿದ್ದಾರೆ.

**ಮಳೆಗಾಗಿ ಮಲೆಮಹದೇಶ್ವರನ ಮೊರೆ ಹೋದ ರೈತರು**

ಈ ಹಿಂದೆ ಎಸ್.ಎಂ.ಕೃಷ್ಣ ಸಿಎಂ ಆಗಿದ್ದಾಗ ಭೀಕರ ಬರಗಾಲ ಬಂದೆರಗಿತ್ತು. ಆ ವೇಳೆ, ರೈತರು ಮಳೆಗಾಗಿ ಮಾದಪ್ಪನಿಗೆ ಹರಕೆ ಕಟ್ಟಿಕೊಂಡು ಪ್ರಾರ್ಥನೆ ಸಲ್ಲಿಸಿದಾಗ ಮಳೆ ಬಂದಿತ್ತು. ಸರ್ಕಾರಗಳು ಕೈ ಬಿಟ್ಟರೂ ಮಾಯಕಾರ ಮಹದೇಶ್ವರ ರೈತರ ಕೈ ಬಿಡುವುದಿಲ್ಲ ಎಂದು ಘೋಷಣೆಗಳನ್ನು ಕೂಗುತ್ತಾ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು, ರೈತರು ಖಾಸಗಿ ಬಸ್‌ಗಳ ಮೂಲಕ ತೆರಳಿ ಮಹದೇಶ್ವರನಿಗೆ ಮೊರೆ ಇಟ್ಟಿದ್ದಾರೆ. ದಾರಿಯಲ್ಲಿ ಉರುಳುಸೇವೆ ಮಾಡುತ್ತಾ, ಮಹದೇಶ್ವರನ ಘೋಷಣೆ ಕೂಗುತ್ತಾ ವರುಣ ಬಂದೇ ಬರುತ್ತಾನೆ ಎಂಬ ಭರವಸೆಯಿಟ್ಟು ಮಾದಪ್ಪನಿಗೆ ನಮಿಸಿದ್ದಾರೆ. ಈ ಕುರಿತು ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಸಿಎಂ ಡಿ.ಕೆ.ಶಿವಕುಮಾರ್ ಬರ ಬರಲಿದೆ, ಬಿತ್ತನೆ ಮಾಡಬೇಡಿ ಎಂದು ಹೇಳುತ್ತಿದ್ದಾರೆ. ಎಸ್‌ಐಆರ್ ಆರೋಪ-ಪ್ರತ್ಯಾರೋಪದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ತೊಡಗಿವೆ, ಬೆಳೆ ಬೆಳೆಯಬೇಡಿ ಎನ್ನುವ ಸಿಎಂ ಮೊದಲು ಸಚಿವರನ್ನು ಪ್ರತಿ ಜಿಲ್ಲೆಗೆ ಕಳುಹಿಸಿ ಬರ ಅಧ್ಯಯನ ನಡೆಸಿ, ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದರು. ರಾಜಕೀಯ ಕಾರಣಕ್ಕಾಗಿ ಸರ್ಕಾರಗಳು, ಜನಪ್ರತಿನಿಧಿಗಳು ರೈತರ ಕೈ ಬಿಟ್ಟರೂ ಮಲೆಮಹದೇಶ್ವರ ಕೈ ಬಿಡುವುದಿಲ್ಲ ಎಂಬ ನಂಬಿಕೆ ಮೇಲೆ ಪ್ರಾರ್ಥನೆ ಸಲ್ಲಿಸಿದ್ದೇವೆ, ನಮಗೆ ಮಹದೇಶ್ವರ ಅನುಕೂಲ ಮಾಡುತ್ತಾನೆ ಎಂದು ಹೇಳುತ್ತಾರೆ.

**ರೋಟರಿ ಸಂಸ್ಥೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ**

# ಶೀಘ್ರವೇ ರೋಟರಿ ಕಣ್ಣಿನ ಆಸ್ಪತ್ರೆ ನಿರ್ಮಾಣವಾಗಲಿ

ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.



ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 267 ಮಂದಿ ತಪಾಸಣೆ ಮಾಡಿಸಿಕೊಂಡರು. 155 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾ ಯಿತು. ನಾಮಿನಿ ಗೌರ್ನರ್ ಸೂರ್ಯನಾರಾಯಣ ಕುಕ್ಕುಡಿ ಶಿಬಿರಕ್ಕೆ ಭೇಟಿ ನೀಡಿ ಶಿಬಿರ ವೀಕ್ಷಿಸಿ ಮಾತನಾಡಿ, ರೋಟರಿ ಸಂಸ್ಥೆಯು ಆರೋಗ್ಯ, ಶಿಕ್ಷಣ, ಪರಿಸರ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸುತ್ತಿದ್ದು, ಅದರಲ್ಲಿ ಆರೋಗ್ಯ ಸೇವೆ ಬಹುಮುಖ್ಯ ಸೇವೆಯಾಗಿದ್ದು ಅಂತಹ ಸೇವೆಯನ್ನು ರೋಟರಿ ಸಂಸ್ಥೆಯು ನಿರಂತರವಾಗಿ ಮಾಡುತ್ತಿದೆ ಎಂದರು.

ಚಾಮರಾಜನಗರ ರೋಟರಿ ಸಂಸ್ಥೆಯು ಕಳೆದ 50 ವರ್ಷಗಳಿಂದ ಉಚಿತ ಕಣ್ಣಿನ ತಪಾಸಣೆ ನಡೆಸುತ್ತಿದ್ದು, ಇದರ ಸದುಪಯೋಗವನ್ನು ಹೆಚ್ಚಿನ ಜನರ ಪಡೆಯುತ್ತಿದ್ದಾರೆ. ಚಾಮರಾಜನಗರದಲ್ಲಿ ಕಣ್ಣಿನ ಆಸ್ಪತ್ರೆಯು ಶೀಘ್ರದಲ್ಲೇ ಚಾಮರಾಜನಗರದಲ್ಲಿ ನಿರ್ಮಾಣ ವಾಗಲಿ , ಸ್ಥಳೀಯರಿಗೆ ಹೆಚ್ಚಿನ ಸೇವೆ ಮಾಡುವಂತಾಗಲಿ ಎಂದು ಆಶಿಸಿದರು.

ರೋಟರಿ ಸಂಸ್ಥಾಪಕ ಸದಸ್ಯಸಿ.ವಿ.ಶ್ರೀನಿವಾಸ ಶೆಟ್ಟಿ ಮಾತನಾಡಿ, ರೋಟರಿ ಸಂಸ್ಥೆಯು ಪ್ರತಿ ತಿಂಗಳು ಮೊದಲನೆಯ ಭಾನುವಾರ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಅಯೋಜಿಸುತ್ತಿದ್ದು, ಸಾರ್ವಜನಿಕರು ಹೆಚ್ವಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆಯುತ್ತಿರುವುದು ತುಂಬಾ ಸಂತಸವಾಗಿದ್ದು,ಮುಂದಿನ ಶಿಬಿರದ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ರೋಟರಿ ಸಂಸ್ಥೆ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ ಮಾತನಾಡಿ, ಕಣ್ಣಿನ ಆರೋಗ್ಯದ ಕಡೆ ಗಮನಹರಿಸುವುದು ಇಂದಿನ ಡಿಜಿಟಲ್ ಯುಗದಲ್ಲಿ ಅತ್ಯಗತ್ಯವಾಗಿದೆ. ಈ ಶಿಬಿರಕ್ಕೆ ಹೊರ ಜಿಲ್ಲೆಗಳಿಂದ ಜನತೆ ಬರುತ್ತಿದ್ದು, ಶಿಬಿರದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದರು. ಈ ಸಂದರ್ಭದಲ್ಲಿ ರೋಟರಿ ಸಂಸ್ಥಾಪಕ ಸದಸ್ಯರಾದ ಜಿ.ಆರ್.ಅಶ್ವಥ್ ನಾರಾಯಣ್, ಸಹಾಯಕ ಗೌರ್ನರ್ ಸುರೇಶ್, ರೋಟರಿ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ, ನಿಕಟಪೂರ್ವ ಅಧ್ಯಕ್ಷ ಕಾಗಲವಾಡಿ ಚಂದ್ರು, ಮಾಜಿ ಅಧ್ಯಕ್ಷ ರಾಮಸಮುದ್ರ ನಾಗರಾಜು, ರಾಜುವರ್ಗೀಸ್, ನೇಮಿರಾಜ್, ಮಹಾದೇವಸ್ವಾಮಿ, ಶ್ರೀನಿವಾಸ ಎಸ್ ಆರ್ ಎಸ್, ಪಿಆರ್ ಓ ವಿಜಯಕುಮಾರ್ , ಮನೋಜ್, ಸವಿತಾ ಇತರರು ಹಾಜರಿದ್ದರು.

### ದಿ.ಮಾಜಿ ಉಪ ಪ್ರಧಾನಿ ಜಗಜೀವನ ರಾಂ ರವರ 40ನೇ ಪುಣ್ಯಸ್ಮರಣೆ

# ಜಿಲ್ಲಾಡಳಿತದಿಂದ ಗೌರವ ಸಮರ್ಪಣೆ

**ಮಂಡ್ಯ:** ಹಸಿರು ಕ್ರಾಂತಿಯ ಹರಿಕಾರ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಂ ರವರ 40ನೇ ಪುಣ್ಯಸ್ಮರಣೆ ಅಂಗವಾಗಿ ಮಂಡ್ಯ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗದ ಉದ್ಯಾನವನದಲ್ಲಿರುವ ಬಾಬು ಜಗಜೀವನ ರಾಂ ರವರ ಪ್ರತಿಮೆಗೆ ಜಿಲ್ಲಾಡಳಿತ ಹಾಗೂ ವಿವಿಧ ಸಂಘಟನೆ ಮುಖಂಡರು ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಮರ್ಪಣೆ ಮಾಡಿದರು.

ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ. ಆರ್. ನಂದಿನಿ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ವಿ. ಜೆ ಶೋಭರಾಣಿ ಸೇರಿದಂತೆ ವಿವಿಧ ಸಂಘಟನೆ ಮುಖಂಡರು ಹಸಿರು ಹರಿಕಾರರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.



ಬಳಿಕ ಜಿಲ್ಲಾಧಿಕಾರಿ ಡಾ. ಕುಮಾರ ಮಾತನಾಡಿ ಡಾ. ಬಾಬು ಜಗಜೀವನ್ ರಾಮ್ ಅವರು ದೇಶ ಕಂಡ ಅಪರೂಪದ ಮತ್ತು ಧೀಮಂತ ನಾಯಕರಾಗಿದ್ದರು. ಸುಮಾರು 45 ವರ್ಷಗಳಿಗೂ ಹೆಚ್ಚು ಕಾಲ ಸರ್ಕಾರದ ವಿವಿಧ ಉನ್ನತ ಹುದ್ದೆಗಳಲ್ಲಿ ಹಾಗೂ ಸಚಿವರಾಗಿ ಸೇವೆ ಸಲ್ಲಿಸಿದರೂ, ಸದಾ ಸಾಮಾಜಿಕ ಕಳಕಳಿಯೊಂದಿಗೆ ದೀನದಲಿತರ ಮತ್ತು ಶೋಷಿತ ವರ್ಗಗಳ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಡಿದವರು. ಅವರಿಗೆ ಕೇವಲ ಅಧಿಕಾರ ಮುಖ್ಯವಾಗಿರಲಿಲ್ಲ, ಬದಲಿಗೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗಬೇಕೆಂಬ ಹಂಬಲವಿತ್ತು.

ಇಂದಿನ ಯುವ ಪೀಳಿಗೆಯು ಅವರ ದೇಶಪ್ರೇಮ, ಸಾಮಾಜಿಕ ಕಳಕಳಿ ಹಾಗೂ ಉನ್ನತ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅವರ ಚಿಂತನೆಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ ಎಂದು ಕರೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ. ಆರ್. ನಂದಿನಿ ಅವರು ಮಾತನಾಡಿ ಬಾಬು ಜಗಜೀವನ್ ರಾಮ್ ಅವರ ದೇಶಸೇವೆ ಹಾಗೂ ರಾಜಕೀಯ ಮುತ್ಸದ್ದಿತನವನ್ನು ಶ್ಲಾಘಿಸಿ ಇಡೀ ದೇಶದಲ್ಲೇ ಅತ್ಯಂತ ದೀರ್ಘಕಾಲ ಶಾಸಕರು ಮತ್ತು ಸಂಸದರಾಗಿ ಸೇವೆ ಸಲ್ಲಿಸಿದ ಅದ್ಭುತ ವ್ಯಕ್ತಿತ್ವ ಅವರದಾಗಿತ್ತು

ಸಾಮಾಜಿಕ ನ್ಯಾಯದ ಹೋರಾಟ: ಕೇವಲ ನಾಯಕರಾಗಿ ಮಾತ್ರವಲ್ಲದೆ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ಸಿಗಬೇಕು ಮತ್ತು ಸಂವಿಧಾನದ ಆಶಯಗಳು ತಲುಪಬೇಕು ಎಂಬ ಧ್ಯೇಯದೊಂದಿಗೆ ಅವರು ಹೋರಾಟ ನಡೆಸಿದ್ದರು.1971ರ ಭಾರತ–ಪಾಕಿಸ್ತಾನ ಯುದ್ಧದ ಸಮಯದಲ್ಲಿ ಅವರ ಸಕ್ರಿಯ ಪಾತ್ರ ಹಾಗೂ ದೇಶದಲ್ಲಿ ಆರ್ಥಿಕ ಮತ್ತು ಆಹಾರ ಭದ್ರತೆಯನ್ನು ತರಲು ಕಾರಣವಾದ 'ಹಸಿರು ಕ್ರಾಂತಿ'ಯಲ್ಲಿ ಅವರು ನೀಡಿದ ಕೊಡುಗೆ ಅನನ್ಯವಾದುದು ಅವರು ಕೇವಲ ರಾಜಕಾರಣಿಯಾಗಿರದೆ ಸಮಾಜದ ತಳಮಟ್ಟದ ಜನರ ಏಳಿಗೆಗಾಗಿ ಹತ್ತಾರು ಜನಪರ ಕಾರ್ಯಕ್ರಮಗಳನ್ನು ರೂಪಿಸಿದ ಮೇಧಾವಿ ಚಿಂತಕರಾಗಿದ್ದರು

ಬಾಬು ಜಗಜೀವನ್ ರಾಮ್ ಅವರ ಉದಾತ್ತ ಆಶಯಗಳು ಮತ್ತು ತತ್ವಗಳ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಾಗಿದೆ"ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ವಿ. ಜೆ. ಶೋಭಾರಾಣಿ. ಕಾರ್ಯಕ್ರಮದಲ್ಲಿ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಮನುಜಶ್ರೀ, ವಿವಿಧ ಸಮುದಾಯದ ಮುಖಂಡರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಜುಲೈ 12 ರಂದು ಮಾತೃಗೊಂದು ಮರ –ಸಹಸ್ರ ಸಹಸ್ರ ಗಿಡನೆಡುವ ಅಭಿಯಾನ: ಡಾ. ಕುಮಾರ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಪಡುವಲಪಟ್ಟಣ ಗ್ರಾಮದ ಕಾನನ ಬ್ರಹ್ಮ ದಲ್ಲಿ ಜುಲೈ 12 ರಂದು ಬೆಳಿಗ್ಗೆ 9.30 ಗಂಟೆಗೆ ವಿಶ್ವ ಪರಿಸರ ದಿನಾಚರಣೆ –2026 ರ ಅಂಗವಾಗಿ ಮಾತೃಗೊಂದು ಮರ –ಸಹಸ್ರ ಸಹಸ್ರ ಗಿಡನೆಡುವ ಅಭಿಯಾನ –4 ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ರವರು ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆದ ಮಾತೃಗೊಂದು ಮರ –ಸಹಸ್ರ ಸಹಸ್ರ ಗಿಡನೆಡುವ ಅಭಿಯಾನ –4 ಕಾರ್ಯಕ್ರಮ ಕುರಿತು ಪೂರ್ವ ಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳು ಆಗಮಿಸಲಿದ್ದು ನಾಗಮಂಗಲ ಪ್ರವಾಸಿ ಮಂದಿರದಲ್ಲಿ ನ್ಯಾಯಮೂರ್ತಿಗಳು ಉಳಿದುಕೊಳ್ಳಲು ವ್ಯವಸ್ಥೆ ಮಾಡಬೇಕು ಹಾಗೂ ಸ್ವಚ್ಛತೆ ಹಾಗೂ ನೈರ್ಮಲ್ಯವನ್ನು ಕಾಪಾಡಬೇಕು ಯಾವುದೇ ಲೋಪದೋಷವಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಈ ದಿನದಂದು ವೇದಿಕೆಯ ಸ್ವಚ್ಛತೆಯನ್ನು ಕಾಪಾಡುವುದು ಹಾಗೂ ಕಾರ್ಯಕ್ರಮ ಕುರಿತು ಬ್ಯಾನರ್ ವ್ಯವಸ್ಥೆಯನ್ನು ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿ ಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸುವ ಸಾರ್ವಜನಿರಿಗೆ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದರು.

ಸಭೆಯಲ್ಲಿ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಆನಂದ. ಎಂ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಕೆ. ಆರ್. ನಂದಿನಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



# ಸಂಘಟನೆಗಳು ಸದಾ ಸಕ್ರಿಯವಾಗಿರಬೇಕು

## ಶ್ರೀ ಡಾ. ಪುರುಷೋತ್ತಮಾನಂದ ಪುರಿ ಮಹಾಸ್ವಾಮೀಜಿ



**ಮೈಸೂರು:** ಸಂಘಟನೆಗಳು ಸದಾ ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು ಎಂದು ಹೊಸದುರ್ಗ ಭಗೀರಥ ಪೀಠದ ಶ್ರೀ ಡಾ.ಪುರುಷೋತ್ತಮಾನಂದ ಪುರಿ ಮಹಾ ಸ್ವಾಮೀಜಿ ಹೇಳಿದರು.

ಅವರು ನಗರದ ಸರಸ್ವತಿ ಪುರಂನಲ್ಲಿರುವ ಉಪ್ಪಾರ ವಿದ್ಯಾರ್ಥಿ ನಿಲಯದ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಉಪ್ಪಾರ ಸಂಘದ ವತಿಯಿಂದ ಕೆ.ಆರ್.ನಗರ ತಾಲೂಕು ತಿಪ್ಪೂರು ಗ್ರಾಮದ ಉಪ್ಪಾರ ಸಮಾಜದ ಶ್ರೀ ಅಂತರಗಟ್ಟೆಯಮ್ಮ ದೇವಸ್ಥಾನಕ್ಕೆ ಕೊಡುಗೆಯಾಗಿ ನೀಡಲಾದ ಧ್ವನಿ ವರ್ಧಕವನ್ನು ವಿತರಿಸಿ ಮಾತನಾಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಧಾರ್ಮಿಕ ಕಾರ್ಯಗಳನ್ನು ಮಾಡುವ ಸಂದರ್ಭದಲ್ಲಿ ಎಲ್ಲರೂ ಒಮ್ಮತದಿಂದ ಕೈಜೋಡಿಸಬೇಕು. ಆ ಮೂಲಕ ಸಂಘಟಿತರಾಗಿ ಸಮಾಜದ ಸಂಘಟನೆಗಳನ್ನು ಗಟ್ಟಿಯಾಗಿ ಕಟ್ಟಬೇಕು ಜೊತೆಗೆ ಸರ್ವರೂ ಜಾಗೃತಿಯಾಗಬೇಕು ಎಂದು ಕರೆ ನೀಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಉಪ್ಪಾರ ಸಮುದಾಯದವರು ಎಲ್ಲಾ ಸಮುದಾಯಗಳೊಂದಿಗೆ ಪ್ರೀತಿ, ವಿಶ್ವಾಸದಿಂದ ಬೆರೆತು ಸಹಬಾಳ್ವೆಯಿಂದ ಬದುಕನ್ನು ನಡೆಸುವ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದರು.

ಉಪ್ಪಾರ ಸಮಾಜದವರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣವನ್ನು ಕೊಡಿಸುವ ಮೂಲಕ ಉನ್ನತ ವ್ಯಾಸಂಗವನ್ನು ಮಾಡಿ ವಿದ್ಯಾರ್ಥಿಗಳು ಉನ್ನತ ಸ್ಥಾನಮಾನಗಳನ್ನು ಅಲಂಕರಿಸುವಂತೆ ಮಾಡಲು ಪೋಷಕರು ಶ್ರಮಿಸಬೇಕು ಎಂದರು.

ಸಮಾಜದಲ್ಲಿ ನೊಂದವರಿಗೆ, ಕಷ್ಟದಲ್ಲಿ ಇರುವವರಿಗೆ, ಅತ್ಯಂತ ಹಿಂದುಳಿದವರಿಗೆ ಆರ್ಥಿಕವಾಗಿ ಸಬಲರಾಗಿರುವವರು ತಮ್ಮ ಸಹಾಯ ಹಸ್ತ ಚಾಚುವ ಮೂಲಕ ಅವರಿಗೆ ನೆರವಾಗಬೇಕೆಂದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಕರಳಾಪುರ ನಾಗರಾಜು, ಗೌರವಾಧ್ಯಕ್ಷ ಕನಕನಗರ ಮಹದೇವ್, ಸಂಘಟನಾ ಕಾರ್ಯದರ್ಶಿ ಆರ್.ವಿನೋದ್ ಉಪ್ಪಾರ್, ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ, ಕೆ.ಆರ್.ನಗರ ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಕಾಟ್ನಾಳ್ ಮಹದೇವ್, ಖಜಾಂಚಿ ತಿಪ್ಪೂರುರವಿ, ಮುಖಂಡರಾದ ಮಂಜುನಾಥ್, ಪ್ರದೀಪ್,

ಸಿದ್ದಪ್ಪಸ್ವಾಮಿ, ಮಹೇಶ್ ಸೇರಿದಂತೆ ಹಲವರು ಇದ್ದರು.

# ಸಮಾಜಮುಖಿ ಸೇವೆಯೇ ರೋಟರಿಯ ಧ್ಯೇಯ: ಯಶಸ್ವಿ ಸೋಮಶೇಖರ್ ನುಡಿ

**ಪಿರಿಯಾಪಟ್ಟಣ :** ರೋಟರಿ ಎಂದರೆ ಕೇವಲ ಸಭೆ ಸಮಾರಂಭ,ಮೋಜು ಮಸ್ತಿ ಮಾಡುವ ಕಾರ್ಯಕ್ರಮವಾಗದೆ ಒಬ್ಬ ನಿರ್ಗತಿಕನ ಬದುಕಿನಲ್ಲಿ ಶಾಶ್ವತ ಪರಿಣಾಮ ಬೀರುವಂತಹ ಯೋಜನೆಗಳಾಗಬೇಕು ಎಂದು ಎಂಪಿಎಚ್ಎಫ್ ಯಶಸ್ವಿ ಎಸ್ ಸೋಮಶೇಖರ್ ಅಭಿಪ್ರಾಯಪಟ್ಟರು.

ಪಟ್ಟಣದ ಕನಕ ಭವನದಲ್ಲಿ ರೋಟರಿ ಕ್ಲಬ್ ಪಿರಿಯಾಪಟ್ಟಣ ವಲಯ 6ರ ನೂತನ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರೋಟರಿಯಿಂದ ಒಬ್ಬ ವಿದ್ಯಾರ್ಥಿ ಜೀವನ ಪುಸ್ತಕದ ಪುಟವಾಗಬೇಕು,ಒಬ್ಬ ರೈತನ ಬದುಕು ಹಸನವಾಗಬೇಕು,ಒಬ್ಬ ರೋಗಿಯ ಜೀವಕ್ಕೆ ಜೀವಾಳವಾಗಬೇಕು,ಒಬ್ಬ ಯುವಕನಿಗೆ ನಾಯಕನನ್ನಾಗಿಸುವ ಪ್ರೇರಣೆಯಾಗಬೇಕು ಎಂದರು. ಅಲ್ಲದೆ ಒಬ್ಬ ಮನುಷ್ಯನ ಆರೋಗ್ಯಕರ ಬದುಕಿಗೆಶುದ್ಧ ನೀರು ಎಷ್ಟುಮುಖ್ಯವೋ,ಅಂತೆಯೇ ರೋಟರಿ ಸಂಸ್ಥೆಯಿಂದ ಜನರ ಬದುಕನ್ನು ರೂಪಿಸುವ ಶುದ್ಧ ಕಾರ್ಯತಂತ್ರವಾಗಬೇಕು ಎಂದರು.

ನೂತನ ರೋಟರಿ ಅಧ್ಯಕ್ಷರಾಗಿ ಆಯ್ಕೆಗೊಂಡ ಬಲರಾಮ ಮಾತನಾಡಿ ನನ್ನ ಮೇಲೆ ವಿಶ್ವಾಸವಿಟ್ಟು ಈ ಬಾರಿ ಜವಾಬ್ದಾರಿ ನೀಡಿದ ಎಲ್ಲರಿಗೂ ಧನ್ಯವಾದ ತಿಳಿಸಿದರು. ಅಲ್ಲದೆ ಮುಂದಿನ ದಿನಗಳಲ್ಲಿ ತಮ್ಮೆಲ್ಲರ ನಿರಂತರ ಸಹಕಾರ ಮತ್ತು ಬೆಂಬಲದ ಜತೆಗೆ ಇನ್ನಷ್ಟು ಸಮಾಜ ಸೇವೆಯೊಂದಿಗೆ ನಮ್ಮ ಈ ರೋಟರಿ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯೋಣ ಎಂದರು.ಸೇವೆಯ ಮೂಲಕವೇ ಜಗತ್ತನ್ನು ಬದಲಾಯಿಸುವುದು" ಎಂಬುದಕ್ಕೆ ಈ ಬಾರಿ ನಮ್ಮ ರೋಟರಿ ಮಿಡ್ ಟೌನ್ ಗೆ "ಡೈಮಂಡ್ ಪ್ಲಸ್" ಪ್ರಶಸ್ತಿ ಗರಿ ದೊರಕಿರುವುದು ಸಾಕ್ಷಿಯಾಗಿದೆ.

ಕಳೆದ ವರ್ಷ ಜಿ ಕೆ ಜಗನ್ ನೇತೃತ್ವದಲ್ಲಿ ಪಟ್ಟಣ ಹಾಗೂ ಗ್ರಾಮಾಂತರ ಅಂಗನವಾಡಿ ಕೇಂದ್ರಗಳು,ಸರ್ಕಾರಿ ಶಾಲೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಶುದ್ಧ ಕುಡಿಯುವ ನೀರು,ಸೇರಿದಂತೆ ವಿದ್ಯಾರ್ಥಿ ವೇತನ ,ಆರೋಗ್ಯ ಶಿಬಿರ, ಪರಿಸರ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾರ್ಯಶ್ಲಾಘನೆಗೆ ಮೆಚ್ಚಿ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾಗಿದ್ದೇವೆ ಅದು ನಮ್ಮ ರೋಟರಿ ಸಂಸ್ಥೆಯ ದೊಡ್ಡ ಶಕ್ತಿ ಎಂದರು.

ಕಾರ್ಯಕ್ರಮದಲ್ಲಿ ಕ್ಲಬ್ ಗೆ ಹೊಸದಾಗಿ ಸೇರ್ಪಡೆಗೊಂಡ 6 ಸದಸ್ಯರನ್ನು ಸ್ವಾಗತಿಸಲಾಯಿತು.

ರೋಟರಿ ಸಂಸ್ಥೆಯಲ್ಲಿ ಉತ್ತಮ ಸೇವೆ ಸಲ್ಲಿಸಿದ ಜತೆಗೆ ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ರೋಟರಿ ವೈದ್ಯ ಸದಸ್ಯರಾದ ಡಾ.ಪ್ರಕಾಶ್ ಬಾಬು ರಾವ್, ಡಾ.ಕೃಷ್ಣ ಪ್ರಸಾದ್,ಡಾ.ಸುನಿಲ್ ಕುಮಾರ್, ಡಾ.ವಿರೂಪಾಕ್ಷ, ಡಾ.ರೂಪಶ್ರೀ,ಡಾ. ಅನುರಾಗ್, ಡಾ.ಗೌರವ್ ರವರನ್ನು ಗೌರವ ಸನ್ಮಾನಿಸಲಾಯಿತು.

ನೆರೆದ ಗಣ್ಯರಿಗೆ ಚೈತನ್ಯ ಪಾನೀಯ ಸ್ನಾಕ್ಸ್, ಭೋಜನ ಉಣ ಬಡಿಸಲಾಯಿತು.

ರೋಟರಿ ಸಹಾಯಕ ಗವರ್ನರ್ ರಾಘವೇಂದ್ರ, ಪ್ರಧಾನ ಕಾರ್ಯದರ್ಶಿ ಹರೀಶ ಬಿ ಎಸ್, ನಿರ್ಗಮಿತ ಅಧ್ಯಕ್ಷ ಜಗನ್ ಜಿ ಕೆ, ಕಾರ್ಯದರ್ಶಿ ಚೇತನ್ ಟಿ ಕೆ, ವಲಯ 6ರ ನಿರ್ಗಮಿತ ಸಹಾಯಕ ಗವರ್ನರ್ ರಾಜೇಗೌಡ ತಿರುಮಲಾಪುರ, ವಲಯ 6ರ ವಲಯ ಸೇನಾನಿ ಎಂಎಂ ರಾಜೇಗೌಡ ,ಹಾಗೂ ಪಿರಿಯಾಪಟ್ಟಣ ಮಿಡ್ ಟೌನ್, ಲಯನ್ಸ್‌ಕ್ಲಬ್ ಪಿರಿಯಾಪಟ್ಟಣ, ರೋಟರಿ ಐಕಾನ್ ಸದಸ್ಯರು ಸೇರಿದಂತೆ ಇತರರು ಹಾಜರಿದ್ದರು.




# ಹಾಸನ, ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಅಕ್ರಮ ಬೀಜ ದಾಸ್ತಾನು ಜಪ್ತಿ

**ಬೆಂಗಳೂರು:** ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ನೇತೃತ್ವದ ಪ್ರತ್ಯೇಕ ತಂಡಗಳು ರಾಜ್ಯದ ಹಾಸನ, ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ವಿವಿಧ ರಸಗೊಬ್ಬರ ಮಾರಾಟ ಕೇಂದ್ರಗಳಿಗೆ ಭೇಟಿ ನೀಡಿ ಅನಧಿಕೃತವಾಗಿ ಸಂಗ್ರಹಿಸಲಾಗಿದ್ದ ಬೀಜ ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ವಶಪಡಿಸಿಕೊಂಡಿದ್ದಾರೆ. ಅನಧಿಕೃತವಾಗಿ ಬೀಜ, ರಸಗೊಬ್ಬರ ದಾಸ್ತಾನು, ಮಾರಾಟ ನಿಯಂತ್ರಿಸಲು ಕೃಷಿ ಇಲಾಖೆ ಆಯುಕ್ತ ಡಾ: ಬಿ.ಸಿ.ಸತೀಶ್ ಅವರ ಸೂಚನೆ ಮೇರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೃಷಿ ಅಧಿಕಾರಿಗಳು ಮಿಂಚಿನ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಹಾಸನ ಜಿಲ್ಲೆ ಸಾಲಗಾಮೆ ಹೋಬಳಿ ಕೊಂಡಜ್ಜಿಕೊಪ್ಪಲಿನ ಕಾರ್ತಿಕ ಟ್ರೇಡರ್ಸ್‌ನಲ್ಲಿ ಬೀಜ ಕಾಯ್ದೆ 1966ನ್ನು ಉಲ್ಲಂಘಿಸಿ ಅನುಮತಿ ಇಲ್ಲದೇ ದಾಸ್ತಾನು ಮಾಡಲಾಗಿದ್ದ ಸುಮಾರು 85ಸಾವಿರ ರೂ. ಮೌಲ್ಯದ 180 ಕೆ.ಜಿ. ಹೈಬ್ರಿಡ್ ಮೆಕ್ಕೆಜೋಳ ಬೀಜ, ಅರಸೀಕೆರೆ ತಾಲ್ಲೂಕು ಜಾವಗಲ್ ಹೋಬಳಿ ಪುಷ್ಪಗಿರಿ ಅಗ್ರೋ ಕೇಂದ್ರದಲ್ಲಿ ಅನಧಿಕೃತವಾಗಿ ಸಂಗ್ರಹಿಸಿದ್ದ ಸುಮಾರು 12ಸಾವಿರ ರೂ. ಮೌಲ್ಯದ 30 ಕೆ.ಜಿ. ಹೈಬ್ರಿಡ್ ಮೆಕ್ಕೆಜೋಳ ಹಾಗೂ ಬೇಲೂರು ತಾಲೂಕು ಅರೇಹಳ್ಳಿ ಹೋಬಳಿ ಮದಿಹಳ್ಳಿಯ ಶ್ರೀ ವೆಂಕಟೇಶ್ವರ ಟ್ರೇಡರ್ಸ್‌ನಲ್ಲಿ ಕಾನೂನು ಉಲ್ಲಂಘಿಸಿ ದಾಸ್ತಾನು ಮಾಡಲಾಗಿದ್ದ ಸುಮಾರು 1.77ಲಕ್ಷ ರೂ. ಮೌಲ್ಯದ 88 ಚೀಲ ಯೂರಿಯಾ, ಪಾಸ್ಫೋ ಜಿಪ್ಸಮ್ ಗ್ರ್ಯಾನ್ಯುಲ್ಸ್ ಅನ್ನು ವಶಪಡಿಸಿಕೊಳ್ಳಲಾಗಿದೆ. ತುಮಕೂರು ಜಿಲ್ಲೆ ಮಧುಗಿರಿ ತಾಲೂಕು ಮಿಡಗೇಶಿ ಹೋಬಳಿಯ ಹಸಿರು ಹೈಟೆಕ್ ಸೀಡ್ಸ್ ಕೇಂದ್ರದಲ್ಲಿ ಅನಧಿಕೃತವಾಗಿ ದಾಸ್ತಾನು ಮಾಡಲಾಗಿದ್ದ ಸುಮಾರು 86ಸಾವಿರ ರೂ. ಮೌಲ್ಯದ 22 ಲೀಟರ್ ಸೂಕ್ಷ್ಮ ಪೋಷಕಾಂಶ ಮಿಶ್ರಣವನ್ನು ವಶಪಡಿಸಿಕೊಳ್ಳಲಾಗಿದೆ.

ಮಂಡ್ಯ ತಾಲ್ಲೂಕು ಇಂದುವಾಳದಲ್ಲಿ ಅನಧಿಕೃತವಾಗಿ ಸಾಗಾಟ ಮಾಡುತ್ತಿದ್ದ ಸುಮಾರು 300 ಚೀಲ ಎನ್.ಎಫ್.ಎಲ್. ಯೂರಿಯಾವನ್ನು ಮಂಡ್ಯದ ಕೃಷಿ ಅಧಿಕಾರಿಗಳು ಶನಿವಾರ ಜುಲೈ 4ರ ರಾತ್ರಿ ವಶಪಡಿಸಿಕೊಂಡಿದ್ದಾರೆ.

# ಮಂಡ್ಯ: ಖಾಯಂ ಬೋಧಕರನ್ನು ಮರುನಿಯೋಜನೆ ಮಾಡದಂತೆ ಎಚ್ಚರಿಕೆ ರಾಷ್ಟ್ರೀಯ ಹೋರಾಟ ಸಮಿತಿ ಅಧ್ಯಕ್ಷ ಎಂ. ನಿಂಗಯ್ಯ

**ಮಂಡ್ಯ:** ಕಾಲೇಜು ಶಿಕ್ಷಣ ಇಲಾಖೆ ವತಿಯಿಂದ ಖಾಯಂ ಅಧ್ಯಾಪಕರಾಗಿ ನೇಮಕಗೊಂಡು ಬೋಧಕೇತರ ಹುದ್ದೆಗಳನ್ನು ನಿರ್ವಹಿಸುತ್ತಿರುವವರನ್ನು ತಕ್ಷಣವೇ ಮೂಲ ಕಾಲೇಜುಗಳಿಗೆ ವಾಪಸ್ ಕಳುಹಿಸಿ ಬೋಧಕ ವೃತ್ತಿಯಲ್ಲಿ ಸೇವಾನಿರತರಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ರಾಷ್ಟ್ರೀಯ ಹೋರಾಟ ಸಮಿತಿಯ ಅಧ್ಯಕ್ಷ ಎಂ. ನಿಂಗಯ್ಯ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಖಾಯಂ ಬೋಧಕರಾಗಿ ನೇಮಕವಾಗಿರುವವರನ್ನು ಯಾವುದೇ ಕಾರಣಕ್ಕೂ ಬೋಧನಾ ಕೆಲಸ ಬಿಟ್ಟು ಇತರ ಬೋಧಕೇತರ ಕೆಲಸಗಳಿಗೆ ನಿಯೋಜಿಸಬಾರದು ಎಂದು ಸರ್ಕಾರ ಈಗಾಗಲೇ ಆದೇಶ ನೀಡಿದೆ ಎಂದು ಹೇಳಿದರು.




ಈ ಆದೇಶವನ್ನು ಜಾರಿಗೆ ತರಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಖಾಯಂ ಬೋಧಕರು ಬೋಧಕೇತರ ಕೆಲಸಗಳಲ್ಲಿ ನಿರತರಾಗಿರುವುದು ಕಂಡುಬರುತ್ತಿದೆ ಎಂದು ಆರೋಪಿಸಿದರು.

ಈ ಕುರಿತು ಇಲಾಖೆ ಆಯುಕ್ತರು ಕ್ರಮ ವಹಿಸದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಂ. ಆರ್. ಉಮೇಶ್, ಎಸ್. ಕಾರ್ಯದರ್ಶಿ ಹರ್ಷಿತಾ, ನಾಗರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮುಂಗಾರು ಮಳೆಯಿಂದ ರೈತರು ಸಂಕಷ್ಟದಲ್ಲಿದ್ದಾರೆ: ಸರ್ಕಾರದಿಂದ ತುರ್ತು ಕ್ರಮಕ್ಕೆ ರೈತ ಸಂಘ ಆಗ್ರಹ

**ಮಂಡ್ಯ:** ರಾಜ್ಯಾದ್ಯಂತ ಮುಂಗಾರು ಮಳೆ ಕ್ಷೀಣವಾಗಿದ್ದು ರೈತರು ಕಂಗಾಲಾಗಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಿತ ಕಾಯಲು ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ (ಮೂಲ ಸಂಘಟನೆ)ಯ ಮುಖಂಡ ಸೋ.ಸಿ.ಪ್ರಕಾಶ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೀಣಗೊಂಡ ಮಳೆಯಿಂದ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡುವುದು ಸವಾಲಿನ ಕೆಲಸವಾಗಿದೆ. ಜಿಲ್ಲೆಯಲ್ಲಿ ಬಿತ್ತನೆ ಮಾಡಿದ ರೈತ ಮೊಳಕೆ, ಪೈರುಗಳು ಅಲ್ಪ ಮಳೆಯಿಂದ ಕೆಲವೆಡೆ ಒಣಗುತ್ತಿವೆ. ಅವುಗಳ ಉಳಿವಿಗೆ ಕೆಆರ್‌ಎಸ್‌ನಿಂದ ಒಂದು ಕಟ್ಟು ನೀರು ಹರಿಸುವಂತೆ ಮನವಿ ಮಾಡಿದರು.




ರೈತರ ಬೆಳೆಗೆ ನೀರು ಕೊಡಲಾಗದಿದ್ದರೂ ಬೆಂಗಳೂರಿಗೆ ಕುಡಿಯುವ ನೀರೊದಗಿಸಲು 6ನೇ ಹಂತದ ಯೋಜನೆ ಪ್ರಗತಿಯಲ್ಲಿರುವುದು ರೈತರಿಗೆ ಮಾಕರವಾಗಿದೆ. ಇದನ್ನು ಕೈಬಿಡಬೇಕು. ರೈತರ ಕಬ್ಬಿಗೆ ಕಾರ್ಖಾನೆಗಳ 50 ರೂ. ಪ್ರೋತ್ಸಾಹ ಧನ ಕೊಡಿಸಲು ಕ್ರಮವಹಿಸಿ, ಕಾರ್ಖಾನೆಗಳನ್ನು ಪ್ರಾರಂಭಿಸಲು ಸೂಚನೆ ನೀಡಲು ಒತ್ತಾಯಿಸಿದರು.

ಕಬ್ಬಿನ ಇಳುವರಿ, ದುಬಾರಿ ಬೇಸಾಯ ಖರ್ಚು, ರೈತರು ಕಬ್ಬು ಬೆಳೆಯಲ್ಲಿ ನಷ್ಟ ಅನುಭವಿಸುವಂತಾಗಿದೆ. ಕೇಂದ್ರ ಸರಕಾರದ ಎಫ್‌ಆರ್‌ಪಿ ಜತೆಗೆ ರಾಜ್ಯ ಸರಕಾರ 500 ರೂ.ಗಳ ಎಫ್‌ಎಪಿ ನೀಡಬೇಕು. ಕಬ್ಬ ಕಟಾವು ವೆಚ್ಚ ಕಾರ್ಖಾನೆಯವರೇ ಭರಿಸುವಂತೆ ಕ್ರಮ ವಹಿಸಬೇಕು. ರೈತರ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ನೀಡಬೇಕು. ವಿದ್ಯುತ್ ಪ್ರಸರಣ ಯೋಜನೆ ಖಾಸಗಿಯವರಿಗೆ ಒಪ್ಪಿಸುವ ನಿರ್ಧಾರ ಕೈಬಿಡಬೇಕೆಂದು. ಸರಕಾರಗಳಗೇ ಬರಗಾಲ ಘೋಷಣೆ ಮಾಡಿದ್ದು, ರೈತರ ಸಾಲಮನ್ನಾ ಮಾಡಿ 50 ಸಾವಿರ ರೂ.ಗಳ ಪರಿಹಾರ ಕೊಡಬೇಕು. ಬೆಳೆಗಳ ವಿಮೆಯ ವಂತಿಗೆಯನ್ನು ಸರಕಾರವೇ ಭರಿಸಿ, ಕಬ್ಬು, ತೋಟಗಾರಿಕೆ ಬೆಳೆಗಳನ್ನು ವಿಮೆ ವ್ಯಾಪ್ತಿಗೆ ಸೇರಿಸಬೇಕು. ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಿದ ಬೆಳೆಗಳಿಗೆ ಕೆಲವೆಡೆ ಹಣ ಪಾವತಿಯಾಗಿದೇ ಇದ್ದು ಕೂಡಲೇ ಹಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಎಸ್.ಮಂಜೇಶ್‌ಗೌಡ, ತಾಲೂಕು ಅಧ್ಯಕ್ಷ ಪುಟ್ಟಸ್ವಾಮಿ, ಮುಖಂಡ ಲಿಂಗಸ್ವಾಮಿ ಇದ್ದರು.

# ತೆರೆಮೇಲಿನ ನಾಯಕ, ಬದುಕಿನ ನೈಜ ಹೀರೋ



ಡಾ.ಸುಧಾಕರ.ಜಿ.ಲಕ್ಕವಳ್ಳಿ



ಬೆಳ್ಳಿತೆರೆಯಲ್ಲಿ ನೂರು ಬಣ್ಣದ ಪಾತ್ರಗಳಿಗೆ ಜೀವ ತುಂಬಿ, ನಿಜ ಬದುಕಿನಲ್ಲಿ ಸಾವಿರಾರು ಕಣ್ಣೀರು ಒರೆಸಿದ ಕಲಾ ತಪಸ್ವಿ. ಖ್ಯಾತ ನಟ ಮತ್ತು ನಿರ್ಮಾಪಕ ಶ್ರೀ ಮಾಗಂಟಿ ಮುರಳಿ ಮೋಹನ್ ಅವರಿಗೆ 2026ರ ಪದ್ಮಶ್ರೀ ಸಂದಿದೆ. 350ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿ, ತೆಲುಗು ಮತ್ತು ಕನ್ನಡದಲ್ಲಿ 25 ಚಿತ್ರಗಳನ್ನು ನಿರ್ಮಿಸಿ, ದಕ್ಷಿಣ ಭಾರತದ ಚಿತ್ರರಂಗದ ಶಕ್ತಿಯಾದರು. ಹಾಸ್ಯದ ಹೊನಲು, ಗಂಭೀರದ ಗಾಂಭೀರ್ಯ, ಖಳನ ಪಾತ್ರದ ಖದರು ಎಲ್ಲದಕ್ಕೂ ನ್ಯಾಯ ಸಲ್ಲಿಸಿದ ಅಪರೂಪದ ಕಲಾವಿದ ಇವರು.

ಕಲೆಯ ಮಂಟಪದಿಂದ ಇಳಿದು ಸೇವೆಯ ಬೀದಿಗೆ ನಡೆದರು. ಆರೋಗ್ಯ, ಶಿಕ್ಷಣ, ಸಮಾಜ ಸೇವೆಯಲ್ಲಿ ಇವರ ಕೈಚಾಚಿದ ದಾನ ನೂರಾರು ಕುಟುಂಬಗಳಿಗೆ ನೆರಳಾಯಿತು. ಬಡ ಮಕ್ಕಳಿಗೆ ಪುಸ್ತಕದ ಕನಸು, ಅಸಹಾಯಕರಿಗೆ ಆಸ್ಪತ್ರೆಯ ಆಸರೆ ನೀಡುತ್ತಾ ಜಯಭೇರಿ ಟ್ರಸ್ಟ್ ಮೂಲಕ ಮಾನವೀಯತೆಯ ಯಾತ್ರೆ ನಡೆಸಿದರು. ತೆರೆಯ ಮೇಲಿನ ಬೆಳಕನ್ನು ಬಡವರ ಗುಡಿಸಲಿನ ಕತ್ತಲೆಗೆ ಹೊತ್ತೊಯ್ದರು. ಇವರ ಪಾಲಿಗೆ ನಟನೆ ವೃತ್ತಿಯಾದರೆ, ಸೇವೆ ಉಸಿರಾಟವಾಯಿತು.

ಜನರ ದನಿಗೆ ಇನ್ನಷ್ಟು ಬಲ ತುಂಬಲು 2014ರಲ್ಲಿ ಸಂಸದರಾಗಿ ಆಯ್ಕೆಯಾಗಿ, ರಾಜಕೀಯದ ಅಂಗಳದಲ್ಲೂ ಜನಪರ ನಿಲುವು ತೋರಿದರು. ಅಧಿಕಾರದ ಕುರ್ಚಿ ಇವರ ಸರಳತೆಯನ್ನು ಕಸಿಯಲಿಲ್ಲ. ಕಲಾವಿದನ ಹೃದಯ, ನಾಯಕನ ಹೊಣೆಗಾರಿಕೆ ಎರಡನ್ನೂ ಒಟ್ಟಿಗೆ ಹೊತ್ತು ನಡೆದರು. ಭಾಷಣಕ್ಕಿಂತ ಕೆಲಸದಲ್ಲೇ ನಂಬಿಕೆ ಇಟ್ಟರು.

ಸ್ಫೂರ್ತಿ ಸುಧೆ - 61

ಈ ಪದ್ಮಶ್ರೀ ಒಬ್ಬ ನಟನಿಗೆ ಮಾತ್ರ ಸಂದಿಲ್ಲ; ಕ್ಯಾಮೆರಾ ಮುಂದೆ ಹೀರೋ ಆಗಿ ಮಿಂಚಿ, ಕ್ಯಾಮೆರಾ ಹಿಂದೆ ಮಾನವೀಯತೆಯ ದೀಪ ಹಚ್ಚಿದ ಕರ್ಮಯೋಗಿಗೆ ಸಂದ ನಮನ. ಶ್ರೀ ಮುರಳಿ ಮೋಹನ್ ಅವರ ಬದುಕು ಸಾರುತ್ತದೆ: ಕಲೆ ಮತ್ತು ಸೇವೆ ಕೈಜೋಡಿಸಿದರೆ ಸಮಾಜ ನಲಿಯುತ್ತದೆ. ನಿಜವಾದ ಹೀರೋ ಪರದೆಯ ಮೇಲೆ ಮಾತ್ರವಲ್ಲ, ಜನರ ಹೃದಯದಲ್ಲೂ ಇರುತ್ತಾನೆ.

# ಮರಳಿ ಮನೆಗೆ

## ಅಧ್ಯಾಯ 8



| ರೂಪ ಮಂಜುನಾಥ ಹೊಳೆನರಸೀಪುರ

ಜಾಗತಿಕ ಯೋಗದ ಭವ್ಯ ಕ್ಲೈಮ್ಯಾಕ್ಸ್ ಮತ್ತು ನಮ್ಮೊಳಗಿನ ಬೇರುಗಳು!

ನಾವು ಕಳೆದ ಏಳು ಅಧ್ಯಾಯಗಳಲ್ಲಿ ಯೋಗದ ವಿಶಾಲವಾದ ಸಾಮ್ರಾಜ್ಯವನ್ನು ಸುತ್ತಿ ಬಂದಿದ್ದೇವೆ. ಕೃತಕವಾಗಿ ತಾಪಮಾನ ಏರಿಸಿ ಮಾಡುವ ?ಹಾಟ್ ಯೋಗ?ದ ಬೆವರಿನ ಮಳೆಯಿಂದ ಹಿಡಿದು, ಪ್ರಯೋಗಾಲಯಗಳಲ್ಲಿ ವಿಜ್ಞಾನಿಗಳು ಬೆರಗಾಗಿ ನೋಡುತ್ತಿರುವ ನರವಿಜ್ಞಾನದ (Neuroscience)ರಹಸ್ಯಗಳವರೆಗೆ, ಪ್ರಾಣಾಯಾಮವು ಜಾಗತಿಕವಾಗಿ ?ಬ್ರೆತ್‌ವರ್ಕ್? ಆಗಿ ಮರುರೂಪುಗೊಂಡ ಕಥೆಯಿಂದ ಹಿಡಿದು ಸ್ಮಾರ್ಟ್ ವಾಚ್ ಮತ್ತು ಂಐ ಯೋಗದ ಜುಗಲ್‌ಬಂದಿಯವರೆಗೆ ಎಲ್ಲವನ್ನೂ ಕಣ್ಣಾರೆ ಕಂಡಿದ್ದೇವೆ. ಇಂದು ಯೋಗವು ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಿಂದ ಹಿಡಿದು ಜಪಾನ್‌ನ ಬುದ್ಧ ಮಂದಿರಗಳವರೆಗೆ ಇಡೀ ಜಗತ್ತನ್ನೇ ಆವರಿಸಿಕೊಂಡಿದೆ.

ಆದರೆ ಈ ಭವ್ಯ ಜಾಗತಿಕ ಯಾತ್ರೆಯ ಕೊನೆಯಲ್ಲಿ, ನಾವೆಲ್ಲರೂ ಒಂದು ಮಹತ್ವದ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿದೆ: ಜಗತ್ತನ್ನೆಲ್ಲಾ ಸುತ್ತಿದ ಯೋಗದ ಈ ಪವಿತ್ರ ಧ್ವನಿ, ಕೊನೆಗೆ ತಲುಪಬೇಕಾದ ಅಸಲಿ ನಿಲ್ದಾಣ ಯಾವುದು?

ಜಗತ್ತು ಸಾಗುತ್ತಿರುವ ಹಾದಿಯಲ್ಲಿ, ಯೋಗವೆನ್ನುವುದು ಕೇವಲ ದೇಹದ ಕಸರತ್ತಿನಲ್ಲೇ ಮುಗಿಯುವ ಭ್ರಮೆಯೇ?

ಇಂದು ಜಗತ್ತಿನಾದ್ಯಂತ ಯೋಗವು ಒಂದು ದೊಡ್ಡ ಐಷಾರಾಮಿ ಸಂಸ್ಕೃತಿಯಾಗಿದೆ. ದುಬಾರಿ ಮ್ಯಾಟ್‌ಗಳು, ಬ್ರ್ಯಾಂಡೆಡ್ ಯೋಗ ಉಡುಪುಗಳು, ಇನ್‌ಸ್ಟಾಗ್ರಾಮ್‌ನಲ್ಲಿ ಲಕ್ಷಾಂತರ ಲೈಕ್ಸ್ ಗಿಟ್ಟಿಸುವ ಕಠಿಣವಾದ ದೈಹಿಕ ಭಂಗಿಗಳು (Asanas) ? ಇವೇ ಇಂದಿನ ಜಗತ್ತಿಗೆ ಯೋಗದ ಅಂತಿಮ ಚಿತ್ರಣವಾಗಿಬಿಟ್ಟಿದೆ. ಯೋಗವು ಜಾಗತಿಕವಾಗಿ ಗೆದ್ದಿದೆ ನಿಜ, ಆದರೆ ಆ ಗೆಲುವಿನ ಹೊಳಪಿನಲ್ಲಿ ಅದರ ಒಳಗೆ ಇರಬೇಕಾಗಿದ್ದ ?ಆಧ್ಯಾತ್ಮಿಕ ಸತ್ವ? ಸದ್ದಿಲ್ಲದೆ ಕರಗಿಹೋಗುತ್ತಿದೆಯೇ ಎಂಬ ಸಣ್ಣದೊಂದು ಆತಂಕ ಮೂಡುವುದು ಸಹಜ.

ಆಧುನಿಕತೆಯ ಅಬ್ಬರದಲ್ಲಿ ಕರಗಿಹೋಗುತ್ತಿರುವ ಆ "ಆಧ್ಯಾತ್ಮಿಕ ಸತ್ವ" (Spiritual Essence)ಎನ್ನುವುದನ್ನು ನಾವು ಮೂರು ಮುಖ್ಯ ನೆಲೆಗಳಲ್ಲಿ ಅರ್ಥಮಾಡಿಕೊಳ್ಳಬಹುದು:

**'ಅಹಂಕಾರದ ಪ್ರದರ್ಶನ' ವರ್ಸಸ್ 'ಅಹಂಕಾರದ ವಿಸರ್ಜನೆ':**ಇನ್‌ಸ್ಟಾಗ್ರಾಮ್ ಲೈಕ್ಸ್, ಬ್ರ್ಯಾಂಡೆಡ್ ಉಡುಪುಗಳು ಮತ್ತು ಕಠಿಣ ಆಸನಗಳ ಪ್ರದರ್ಶನವು ತಿಳಿಯದಂತೆ ಮನುಷ್ಯನ 'ಅಹಂಕಾರವನ್ನು' (Ego) ಪೋಷಿಸುತ್ತಿದೆ. "ನೋಡಿ, ನಾನು ಎಷ್ಟು ಕಠಿಣವಾದ ಭಂಗಿ ಮಾಡಬಲ್ಲೆ" ಎಂಬ ಹಠ ಇಲ್ಲಿ ಎದ್ದು ಕಾಣುತ್ತದೆ.

ಆಧ್ಯಾತ್ಮಿಕ ಸತ್ವ: ಆದರೆ ಯೋಗದ ನಿಜವಾದ ಸತ್ವ ಇರುವುದೇ ಅಹಂಕಾರವನ್ನು ಕರಗಿಸುವುದರಲ್ಲಿ. ಪತಂಜಲಿ ಮಹರ್ಷಿಗಳು ಹೇಳುವಂತೆ, ಆಸನ ಎಂದರೆ "ಸ್ಥಿರ ಸುಖಮ್ ಆಸನಮ್" ? ಯಾವ ಭಂಗಿಯಲ್ಲಿ ದೇಹ ಮತ್ತು ಮನಸ್ಸು ಅತ್ಯಂತ ಸ್ಥಿರವಾಗಿ, ಸುಖವಾಗಿ (ಯಾವುದೇ ಬಲವಂತವಿಲ್ಲದೆ) ಇರುತ್ತದೆಯೋ ಅದೇ ಆಸನ. ಯೋಗವು ನಮ್ಮನ್ನು ಒಳಗಣ್ಣಿನಿಂದ ನಮ್ಮನ್ನು ನಾವು ನೋಡಿಕೊಳ್ಳಲು ಕಲಿಸಬೇಕೇ ಹೊರತು, ಹೊರಗಿನ ಜಗತ್ತಿಗೆ ಪ್ರದರ್ಶಿಸಲು ಅಲ್ಲ!

**1. 'ಬಾಹ್ಯ ಸೌಂದರ್ಯ' ವರ್ಸಸ್ 'ಆಂತರಿಕ ಶುದ್ಧಿ':** ಇಂದಿನ ಐಷಾರಾಮಿ ಯೋಗ ಸಂಸ್ಕೃತಿ ಕೇವಲ 'ದೇಹವನ್ನು' ಸುಂದರವಾಗಿಸಲು, ತೂಕ ಇಳಿಸಲು ಅಥವಾ ಫಿಟ್‌ನೆಸ್ ಕಾಪಾಡಿಕೊಳ್ಳಲು ಮಾತ್ರ ಸೀಮಿತವಾಗಿದೆ. ಅಂದರೆ, ಇದು ಕೇವಲ ಭೌತಿಕ ಮಟ್ಟದ (Physical level)ಕಸರತ್ತಾಗಿದೆ.

ಆಧ್ಯಾತ್ಮಿಕ ಸತ್ವ: ಯೋಗ ವಿಜ್ಞಾನದ ಪ್ರಕಾರ, ದೈಹಿಕ ಆಸನಗಳು ಕೇವಲ ಮೊದಲ ಹೆಜ್ಜೆ (ಬುನಾದಿ) ಅಷ್ಟೇ. ಇದರ ನಿಜವಾದ ಸತ್ವ ಇರುವುದು ಮನಸ್ಸಿನ ಮೌನದಲ್ಲಿ, ಉಸಿರಾಟದ ನಿಯಂತ್ರಣದಲ್ಲಿ ಮತ್ತು ಪ್ರಾಣಶಕ್ತಿಯ ಜಾಗೃತಿಯಲ್ಲಿ. ದೇಹದ ನಮ್ಯತೆಗಿಂತ (Flexibility of body), ಮನಸ್ಸಿನ ನಮ್ಯತೆ ಮತ್ತು ಭಾವನೆಗಳ ಸಮತೋಲನವೇ ಯೋಗದ ಅಂತಿಮ ಆಧ್ಯಾತ್ಮಿಕ ಗುರಿ.

1. 'ವ್ಯಾಪಾರೀಕರಣ' ವರ್ಸಸ್ 'ಸ್ವಯಂ ಸಾಕ್ಷಾತ್ಕಾರ' (Self-Realization):ಜಗತ್ತಿನಲ್ಲಿ ಯೋಗ ಇಂದು ಬಿಲಿಯನ್ ಡಾಲರ್ ಉದ್ಯಮವಾಗಿ ಮಾರ್ಪಟ್ಟಿದೆ. ಎಲ್ಲವೂ ಪ್ಯಾಕೇಜ್‌ಗಳು, ಸೌಕರ್ಯಗಳು ಮತ್ತು ಐಷಾರಾಮಿ ರೆಸಾರ್ಟ್‌ಗಳ ಸುತ್ತ ಸುತ್ತುತ್ತಿದೆ.

**ಆಧ್ಯಾತ್ಮಿಕ ಸತ್ವ:** ಯೋಗದ ಮೂಲ ಸತ್ವ ಇರುವುದು ಅತ್ಯಂತ ಸರಳತೆಯಲ್ಲಿ. "ಯುಜ್ಯತೇ ಇತಿ ಯೋಗಃ" ? ಅಂದರೆ ಜೀವದ ಜ್ಞಾನವು ದೈವದ ಜ್ಞಾನದೊಂದಿಗೆ, ಅಥವಾ ವ್ಯಕ್ತಿಯು ತನ್ನ ಆಂತರಿಕ ಮೂಲದೊಂದಿಗೆ ಒಂದಾಗುವುದೇ ಯೋಗ. ಇದಕ್ಕೆ ಯಾವುದೇ ದುಬಾರಿ ಮ್ಯಾಟ್ ಅಥವಾ ಬ್ರ್ಯಾಂಡೆಡ್ ಬಟ್ಟೆಯ ಅಗತ್ಯವಿಲ್ಲ; ಕೇವಲ ಶುದ್ಧವಾದ ಸಂಕಲ್ಪ ಮತ್ತು ಶರಣಾಗತಿ ಭಾವ, ಅಭ್ಯಸಿಸುವ ತವಕ ಇದ್ದರೆ ಸಾಕು!

ಜಗತ್ತು ಯೋಗದ "ದೇಹ"ವನ್ನು (Hardware)ಮಾತ್ರ ಸ್ವೀಕರಿಸುವತ್ತ ಹಾತೊರೆಯುತ್ತಿದೆ, ಆದರೆ ಅದರ "ಆತ್ಮ"ವನ್ನು (Software)ಮರೆಯುತ್ತಿದೆ. ನಮ್ಮ ಪೂರ್ವಜರು ಯೋಗವನ್ನು ಕೇವಲ ದೇಹವನ್ನು ಬಗ್ಗಿಸುವ, ಹೊಟ್ಟೆಯನ್ನು ಕರಗಿಸುವ ಕಲೆಯಾಗಿ ಎಂದಿಗೂ ನೋಡಲಿಲ್ಲ. ಅವರಿಗೆ ದೇಹ ಎಂಬುದು ಕೇವಲ ಒಂದು ವಾಹನವಾಗಿತ್ತೇ ಹೊರತು, ಅದೇ ಅಂತಿಮ ತಾಣವಾಗಿರಲಿಲ್ಲ! ಪತಂಜಲಿ ಮುನಿಗಳು ಅಷ್ಟಾಂಗ ಯೋಗದಲ್ಲಿ ಹೇಳಿದ ಎಂಟು ಮೆಟ್ಟಿಲುಗಳಲ್ಲಿ ?ಆಸನ? ಎಂಬುದು ಕೇವಲ ಮೂರನೇ ಮೆಟ್ಟಿಲು ಮಾತ್ರ. ಆದರೆ ಇಂದಿನ ಆಧುನಿಕ ಜಗತ್ತು ಆ ಮೂರನೇ ಮೆಟ್ಟಿಲನ್ನೇ ಇಡೀ ಕೋಟೆ ಎಂದು ಭಾವಿಸಿ ಅಲ್ಲಿಗೇ ನಿಂತುಬಿಟ್ಟಿದೆ!

ನಾವು ಎಷ್ಟೇ ಅತ್ಯಾಧುನಿಕ ಸ್ಮಾರ್ಟ್ ವಾಚ್‌ಗಳನ್ನು ಧರಿಸಲಿ, ನಮ್ಮ ದೇಹದ ಹಾರ್ಟ್-ರೇಟ್ ವ್ಯತ್ಯಾಸವನ್ನು (HRV)ಎಣಿಸಲು ಂಐ ತಂತ್ರಜ್ಞಾನವನ್ನೇ ಬಳಸಲಿ, ಅಥವಾ ನಮ್ಮ ಮೆದುಳಿನ ಸ್ಕ್ಯಾನ್ ಮಾಡಿ ಯೋಗದ ಶಕ್ತಿಯನ್ನು ಪ್ರಯೋಗಾಲಯದಲ್ಲಿ ಸಾಬೀತುಪಡಿಸಲಿ... ಇವೆಲ್ಲವೂ ತಲುಪುವ ಅಂತಿಮ ಬಿಂದು ಒಂದೇ! ಅದೇ ನಮ್ಮ "ಆಂತರಿಕ ಪ್ರಜ್ಞೆ"!




ವಿಜ್ಞಾನ ಮತ್ತು ಯೋಗದ ಸಮ್ಮಿಲನದಲ್ಲಿ ಈ ಆಂತರಿಕ ಪ್ರಜ್ಞೆಯನ್ನು ಹೀಗೆ ಅರ್ಥೈಸಬಹುದು:

1. ಎಲ್ಲವನ್ನೂ ಗಮನಿಸುವ "ಸಾಕ್ಷಿ ಪ್ರಜ್ಞೆ" (The Silent Observer) ನಮ್ಮ ದೇಹದಲ್ಲಿ ಕ್ಷಣಕ್ಷಣಕ್ಕೂ ಬದಲಾವಣೆಗಳು ಆಗುತ್ತಿರುತ್ತವೆ?ಹೃದಯದ ಬಡಿತ ಏರುತ್ತದೆ, ಯೋಚನೆಗಳು ಓಡುತ್ತವೆ, ಭಾವನೆಗಳು ಬದಲಾಗುತ್ತವೆ. ಸ್ಮಾರ್ಟ್ ವಾಚ್ ಇವುಗಳನ್ನು ಡೇಟಾ ರೂಪದಲ್ಲಿ ದಾಖಲಿಸುತ್ತದೆ. ಆದರೆ, ನಿಮ್ಮ ದೇಹ ಮತ್ತು ಮನಸ್ಸಿನಲ್ಲಿ ನಡೆಯುತ್ತಿರುವ ಈ ಎಲ್ಲ ಏರುಪೇರುಗಳನ್ನು ಒಳಗಿನಿಂದ ನಿರಂತರವಾಗಿ ಗಮನಿಸುತ್ತಿರುವ ಒಂದು ಜೀವಂತ ಶಕ್ತಿ ಇದೆಯಲ್ಲ? ಅದುವೇ ಆಂತರಿಕ ಪ್ರಜ್ಞೆ, ಇದನ್ನು ನಮ್ಮ ಶಾಸ್ತ್ರಗಳು 'ಸಾಕ್ಷಿ ಭಾವ' ಎನ್ನುತ್ತವೆ. ಇದು ಎಲ್ಲವನ್ನೂ ನೋಡುತ್ತದೆ, ಆದರೆ ಯಾವುದಕ್ಕೂ ಅಂಟಿಕೊಳ್ಳುವುದಿಲ್ಲ.

**1. ಸ್ವಯಂ-ಚಿಕಿತ್ಸಕ ಶಕ್ತಿ (The Inner Healer)**

ವೈದ್ಯಕೀಯ ವಿಜ್ಞಾನದ ದೃಷ್ಟಿಯಿಂದ ನೋಡುವುದಾದರೆ, ನಮ್ಮ ದೇಹವನ್ನು ಸಹಜ ಸ್ಥಿತಿಗೆ (Homeostasis) ತರಲು ಒಳಗೊಂದು ಅದೃಶ್ಯ ಶಕ್ತಿ ನಿರಂತರವಾಗಿ ಕೆಲಸ ಮಾಡುತ್ತಿರುತ್ತದೆ. ನಿಮ್ಮ ಊಖಗಿ ಉತ್ತಮಗೊಂಡಾಗ ಅಥವಾ ವ್ಯಾಗಸ್ ನರ ಉತ್ತೇಜನಗೊಂಡಾಗ ದೇಹವು ವಿಶ್ರಾಂತಿ ಸ್ಥಿತಿಗೆ ಜಾರುತ್ತದೆ. ಈ ರೀತಿ ದೇಹಕ್ಕೆ ತನ್ನನ್ನು ತಾನು ಗುಣಪಡಿಸಿಕೊಳ್ಳಲು (Self-heal) ಆದೇಶ ನೀಡುವ ಒಳಗಿನ ಆ ಮುಖ್ಯಾಧಿಕಾರಿಯೇ (Chief Commander)ಈ ಆಂತರಿಕ ಪ್ರಜ್ಞೆ!

**1. ಗದ್ದಲದ ಆಚೆಗಿನ ನಿಶ್ಯಬ್ದ (The Ocean Beneath the Waves)**

ನಮ್ಮ ಮನಸ್ಸು ಸದಾ ಆಲೋಚನೆಗಳ ಅಲೆಯಿಂದ ಕದಡಿರುತ್ತದೆ. ಆದರೆ ಆ ಅಲೆಗಳ ಆಳದಲ್ಲಿ, ಅತ್ಯಂತ ಸ್ಥಿರವಾದ, ಪ್ರಶಾಂತವಾದ ಒಂದು ಸಾಗರವಿದೆ. ಯೋಗ, ಬ್ರೆತ್‌ವರ್ಕ್ ಅಥವಾ ಧ್ಯಾನದ ಮೂಲಕ ನಾವು ಹೊರಗಿನ ಗದ್ದಲಗಳನ್ನು ದಾಟಿ ತಲುಪುವ ಆ ಪರಮ ಮೌನವೇ ಆಂತರಿಕ ಪ್ರಜ್ಞೆ, ಅಲ್ಲಿ ಯಾವುದೇ ಗೊಂದಲಗಳಿರುವುದಿಲ್ಲ, ಕೇವಲ "ನಾನಿದ್ದೇನೆ" (I AM) ಎಂಬ ಶುದ್ಧ ಅರಿವು ಮಾತ್ರ ಇರುತ್ತದೆ.

**1. ತಂತ್ರಜ್ಞಾನಕ್ಕೆ ನಿಲುಕದ ಅದ್ಭುತ**

ಯಾವುದೇ ಅತ್ಯಾಧುನಿಕ ಂಐ ಅಥವಾ ಸ್ಮಾರ್ಟ್ ವಾಚ್ ನಿಮ್ಮ ದೇಹದ ತಾಪಮಾನ, ನಿದ್ರೆಯ ಅವಧಿಯನ್ನು ಅಳೆಯಬಲ್ಲದೇ ಹೊರತು, ನಿಮ್ಮೊಳಗಿರುವ 'ಆನಂದ'ವನ್ನಾಗಲಿ ಅಥವಾ 'ಆತ್ಮವಿಶ್ವಾಸ'ವನ್ನಾಗಲಿ ಸಂಖ್ಯೆಗಳಲ್ಲಿ ಅಳೆಯಲು ಅದಕ್ಕೆ ಸಾಧ್ಯವಿಲ್ಲ. ವಿಜ್ಞಾನವು ಕೇವಲ ಭೌತಿಕ ದೇಹವನ್ನು (Hardware) ವಿಶ್ಲೇಷಿಸಿದರೆ, ಈ ಆಂತರಿಕ ಪ್ರಜ್ಞೆಯು ಇಡೀ ವ್ಯವಸ್ಥೆಯನ್ನು ನಡೆಸುವ ಚೇತನವಾಗಿದೆ (Life Force / Software).

ಜಗತ್ತು ಇಷ್ಟೆಲ್ಲಾ ಮುಂದುವರಿದಿದ್ದರೂ, ಮನುಷ್ಯ ಕೊನೆಗೆ ಹುಡುಕುತ್ತಿರುವುದು ಅದೇ ಆಂತರಿಕ ನೆಮ್ಮದಿಯನ್ನು. ತಂತ್ರಜ್ಞಾನವು ಕೇವಲ ಹಾದಿಯನ್ನು ತೋರಿಸಬಲ್ಲದು, ಆದರೆ ಆ ಹಾದಿಯ ಕೊನೆಯಲ್ಲಿ ಸಿಗುವ ಗಮ್ಯಸ್ಥಾನವೇ ನಮ್ಮ ಆಂತರಿಕ ಪ್ರಜ್ಞೆ, ಇದು ನಮ್ಮನ್ನು ಮತ್ತೆ ನಮ್ಮ "ಮೂಲಕ್ಕೆ" (ನಮ್ಮೊಳಗಿನ ಬೇರುಗಳಿಗೆ) ಕರೆದೊಯ್ಯುವ ದಿವ್ಯ ಶಕ್ತಿ!

ವಿಜ್ಞಾನವು ಇಂದು ಯೋಗದ ಒಂದೊಂದೇ ಲಾಭಗಳನ್ನು ಬಿಡಿಸಿ ಹೇಳುತ್ತಿರಬಹುದು. ಆದರೆ ಯೋಗದ ಪರಮ ಗುರಿ ಇರುವುದು ಕಾಯಿಲೆಗಳನ್ನು ಗುಣಪಡಿಸುವುದಷ್ಟೇ ಅಲ್ಲ, ಬದಲಿಗೆ ಮನುಷ್ಯನನ್ನು ಅವನ ?ಅಹಂಕಾರ? ಮತ್ತು ?ಆತಂಕ?ಗಳಿಂದ ಮುಕ್ತಗೊಳಿಸಿ, ಅವನನ್ನು ಬ್ರಹ್ಮಾಂಡದ ಶಕ್ತಿಯೊಂದಿಗೆ ಒಂದುಗೂಡಿಸುವುದು.

"ಯಾವಾಗ ಇಡೀ ಜಗತ್ತು ಡಿಜಿಟಲ್ ಪರದೆಯ ಹಿಂದೆ ಬಿದ್ದು ತಲ್ಲಣಿಸುತ್ತಿದೆಯೋ, ಕೃತಕ ಬುದ್ಧಿಮತ್ತೆಯ (AI) ಮಹಾಪೂರದ ನಡುವೆ ಮನುಷ್ಯ ತನ್ನ ಅಸ್ತಿತ್ವಕ್ಕಾಗಿಯೇ ಕಂಗಾಲಾಗುತ್ತಿದ್ದಾನೋ, ಆಗ ಅವನಿಗೆ ಉಳಿದಿರುವ ಏಕೈಕ ಆಶ್ರಯ ತಾಣ ? ಅವನ ಸ್ವಂತ ಉಸಿರು!"

**ನಿಮ್ಮೊಳಗೇ ಹಿಮಾಲಯವನ್ನು ಹುಡುಕಿ!**

ಯೋಗ ಮಾಡಲು ನೀವು ಹಿಮಾಲಯದ ಗುಹೆಗಳಿಗೇ ಹೋಗಬೇಕಾಗಿಲ್ಲ, ಅಥವಾ ಋಷಿಕೇಶದ ಆಶ್ರಮಗಳಲ್ಲೇ ಕೂರಬೇಕಾಗಿಲ್ಲ. ನಿಮ್ಮ ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲಿ ಕೇವಲ ಇಪ್ಪತ್ತು ನಿಮಿಷ ನೀವು ಎಲ್ಲವನ್ನೂ ಮರೆತು, ಕಣ್ಣುಗಳನ್ನು ಮುಚ್ಚಿ ಪ್ರಶಾಂತವಾಗಿ ಕುಳಿತರೆ, ನಿಮ್ಮದೇ ಉಸಿರಾಟದ ಲಯವನ್ನು ಗಮನಿಸುತ್ತಾ ಹೋದರೆ... ನಿಮ್ಮೊಳಗಿನ ಹೃದಯದ ಕವಾಟವೇ ಒಂದು ಹಿಮಾಲಯದ ಗುಹೆಯಾಗಿ ಬದಲಾಗುತ್ತದೆ!

ಜಗತ್ತಿನ ಅತ್ಯಂತ ದೊಡ್ಡ ಪ್ರಯೋಗಾಲಯ ಇರುವುದು ನಿಮ್ಮ ಹೊರಗಲ್ಲ, ಅದು ನಿಮ್ಮ ಒಳಗೇ ಇದೆ. ನಿಮ್ಮ ಉಸಿರನ್ನು ನೀವು ನಿಯಂತ್ರಿಸಿದಾಗ, ಇಡೀ ಬ್ರಹ್ಮಾಂಡವೇ ನಿಮ್ಮ ನಿಯಂತ್ರಣಕ್ಕೆ ಸಿಕ್ಕಂತೆ ಭಾಸವಾಗುತ್ತದೆ. ಆ ಕ್ಷಣದಲ್ಲಿ ಮೂಡುವ ಶಾಂತಿಯೇ ಯೋಗದ ಅಸಲಿ ಸಿದ್ಧಿ!

ಆತ್ಮೀಯ ಓದುಗರೇ,ನಿಮ್ಮ ಚಾಪೆಯನ್ನು ಹಾಸಿ, ನಿಮ್ಮ ಯಾಗದ ಯಾನವನ್ನು ಇಂದಿನಿಂದಲೇ ಆರಂಭಿಸಿ!

ನಾವು ಒಟ್ಟಿಗೆ ನಡೆಸಿದ ಈ ಒಂದು ತಿಂಗಳ ಸುದೀರ್ಘ ಯೋಗ ಸರಣಿಯ ಅಂತಿಮ ಸಂದೇಶವೊಂದೇ: ಯೋಗವು ಕೇವಲ ಓದುವ ವಿಷಯವಲ್ಲ, ಅದು ಆನಂದವಾಗಿ, ಆರೋಗ್ಯವಾಗಿ ಬದುಕುವ ದಾರಿ!

ಸರಳವಾಗಿ ಆರಂಭಿಸಿ: ದುಬಾರಿ ಸ್ಟುಡಿಯೋ ಬೇಡ, ಫ್ಯಾನ್ಸಿ ಹೆಸರುಗಳು ಬೇಡ. ಪ್ರತಿದಿನ ಬೆಳಿಗ್ಗೆ ಎದ್ದು ನಿಮ್ಮ ಮನೆಯ ನೆಲದ ಮೇಲೆ ಒಂದು ಸಣ್ಣ ಚಾಪೆ ಹಾಸಿ ಕುಳಿತುಕೊಳ್ಳಿ.

ನಿಮ್ಮನ್ನು ನೀವು ಪ್ರೀತಿಸಿ: ನಿಮ್ಮ ದೇಹದ ಮಿತಿಗಳನ್ನು ಗೌರವಿಸುತ್ತಾ, ಉಸಿರನ್ನು ಆಳವಾಗಿ ತೆಗೆದುಕೊಳ್ಳುತ್ತಾ, ನಿಮ್ಮ ಮನಸ್ಸಿನ ಗೊಂದಲಗಳನ್ನು ಸದ್ದಿಲ್ಲದೆ ಹೊರಹಾಕಿ.

ಜಗತ್ತು ಯೋಗದ ಹಿಂದೆ ಓಡುತ್ತಿರಲಿ, ಆದರೆ ನೀವು ಯೋಗದ ಮೂಲಕ ನಿಮ್ಮೊಳಗೆ ಓಡುವುದನ್ನು ಅಭ್ಯಾಸ ಮಾಡಿ! ಏಕೆಂದರೆ, ಇಡೀ ಜಗತ್ತನ್ನು ಗೆದ್ದರೂ ತನ್ನ ಮನಸ್ಸನ್ನು ಗೆಲ್ಲದ ಮನುಷ್ಯ ಸೋತಂತೆಯೇ ಸರಿ.

ವಾರಕ್ಕೆರಡು ಲೇಖನಗಳಂತೆ ನಾವು ಒಟ್ಟಿಗೆ ನಡೆಸಿದ ಈ ಭವ್ಯ ?ಯೋಗ ಮಾಲೆ?ಯ ಪಯಣ ಇಂದಿಗೆ ಸಂಪೂರ್ಣವಾಯಿತು. ಈ ಸರಣಿಯು ನಿಮ್ಮ ಬದುಕಿನಲ್ಲಿ ಸಣ್ಣದೊಂದು ಪ್ರಶಾಂತತೆಯ ಬೆಳಕನ್ನು ತಂದಿದ್ದರೂ ನಮ್ಮ ಶ್ರಮ ಸಾರ್ಥಕ. ಜಾಗತಿಕ ಟ್ರೆಂಡ್‌ಗಳ ಬಿರುಗಾಳಿಯ ನಡುವೆಯೂ ನಮ್ಮ ಮಣ್ಣಿನ ಈ ದಿವ್ಯ ಜ್ಞಾನದ ಬೇರುಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳೋಣ.

ತಂ ವಿದ್ಯಾತ್ ದುಃಖ-ಸಂಯೋಗ-ವಿಯೋಗಂ ಯೋಗಸಂಜ್ಞಿತಮ್, ಎಂಬುದು ಭಗವದ್ಗೀತೆಯ ಆರನೇ ಅಧ್ಯಾಯದ (ಆತ್ಮಸಂಯಮ ಯೋಗ) ಇಪ್ಪತ್ತಮೂರನೇ ಶ್ಲೋಕವಾಗಿದೆ. ಸಾಮಾನ್ಯವಾಗಿ 'ಯೋಗ' ಎಂದರೆ 'ಸೇರುವುದು' ಅಥವಾ 'ಕೂಡುವುದು' (Union) ಎಂದು ಅರ್ಥೈಸಲಾಗುತ್ತದೆ (ಜೀವಾತ್ಮ ಮತ್ತು ಪರಮಾತ್ಮನ ಮಿಲನ). ಆದರೆ ಈ ಶ್ಲೋಕದಲ್ಲಿ ಶ್ರೀಕೃಷ್ಣನು ಯೋಗಕ್ಕೆ ಒಂದು ಅಪೂರ್ವವಾದ ಹಾಗೂ ನಕಾರಾತ್ಮಕತೆಯ ನಿವಾರಣೆಯ ಮೂಲಕ ಸಕಾರಾತ್ಮಕತೆಯನ್ನು ತರುವ ವ್ಯಾಖ್ಯಾನವನ್ನು ನೀಡಿದ್ದಾನೆ.

ಯಾವುದು ದುಃಖದೊಂದಿಗಿನ ಸಂಪರ್ಕದಿಂದ ಸಂಪೂರ್ಣ ಬೇರ್ಪಡೆಯಾಗಿರುವುದೋ(ವಿಯೋಗವೋ), ಅದನ್ನೇ 'ಯೋಗ' ಎಂದು ತಿಳಿಯಬೇಕು.

ಸ ನಿಶ್ಚಯೇನ ಯೋಕ್ತವ್ಯೋ ಯೋಗೋ ಅನಿರ್ವಿಣ್ಣಚೇತಸಾ:

ಅಂತಹ ಯೋಗವನ್ನು ಮನುಷ್ಯನು ಧೃತಿಗೆಡದ (ಬೇಸರವಿಲ್ಲದ) ಮನಸ್ಸಿನಿಂದ ಮತ್ತು ದೃಢ ಸಂಕಲ್ಪದಿಂದ (ನಿಶ್ಚಯದಿಂದ) ಅಭ್ಯಾಸ ಮಾಡಬೇಕು.

ಜೀವನದಲ್ಲಿ ಬರುವ ಕಷ್ಟ-ಕಾರ್ಪಣ್ಯಗಳು ಅಥವಾ ಲೌಕಿಕ ದುಃಖಗಳೊಂದಿಗಿನ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಳ್ಳುವ ಸ್ಥಿತಿಯೇ ಯೋಗ. ಅಂತಹ ಪರಮ ಶಾಂತಿಯನ್ನು ನೀಡುವ ಯೋಗ ಸ್ಥಿತಿಯನ್ನು ಸಾಧಿಸಲು, ಸಾಧಕನು ಮನಸ್ಸಿನಲ್ಲಿ ಯಾವುದೇ ನಿರಾಶೆ ಅಥವಾ ಬೇಸರಕ್ಕೆ ಎಡೆಮಾಡಿಕೊಡದೆ, ಅತ್ಯಂತ ತಾಳ್ಮೆ ಮತ್ತು ದೃಢವಾದ ದೀಕ್ಷೆಯಿಂದ ನಿರಂತರವಾಗಿ ಪ್ರಯತ್ನಿಸಬೇಕು.

ಅಂದರೆ, ಯೋಗ ಎನ್ನುವುದು ಕೇವಲ ಶಾರೀರಿಕ ಕಸರತ್ತಲ್ಲ; ಅದು ದುಃಖದಿಂದ ಮುಕ್ತಿ ಪಡೆದು ಆತ್ಮಾನಂದವನ್ನು ಹೊಂದುವ ಮತ್ತು ಅದಕ್ಕಾಗಿ ಮನಸ್ಸನ್ನು ಸ್ಥಿರವಾಗಿಟ್ಟುಕೊಳ್ಳುವ ಕಲೆಯಾಗಿದೆ.

ಹಾಗಾಗಿ ಯೋಗ ಎನ್ನುವುದು ಇಂದು, ನೆನ್ನೆಯದಲ್ಲ.ಅದು ನಮ್ಮ ಸನಾತನವು ನಮಗಿತ್ತಿರುವ ಅತ್ಯಮೂಲ್ಯ ಕೊಡುಗೆ! ಅದರ ಬೆಳೆಸುವಿಕೆ, ಬಳಸುವಿಕೆ, ಉಳಿಸುವಿಕೆ,ಎಲ್ಲವೂ ನಮ್ಮ ತಿಳಿವಳಿಕೆಯಲ್ಲಿದೆ!

ನಿಮ್ಮ ಉಸಿರು ಸುಗಮವಾಗಿರಲಿ, ನಿಮ್ಮ ಮನಸ್ಸು ಪ್ರಶಾಂತವಾಗಿರಲಿ,ನಿಮ್ಮ ದೇಹ ಸದೃಢವಾಗಿರಲಿ, ನಿಮ್ಮ ಬದುಕು ಯೋಗಮಯವಾಗಿರಲಿ!

**ವಂದನೆಗಳು.**

---

# ಚುನಾವಣಾ ಭರವಸೆಗಳಿಗೆ ಕಾನೂನುಬದ್ಧ ಒಪ್ಪಂದ ಬೇಕು; ಆಗಲೇ ಪ್ರಜೆಯ ಮತಕ್ಕೆ ನ್ಯಾಯ



ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಪ್ರಜಾಪ್ರಭುತ್ವದಲ್ಲಿ ಮತದಾರನ ಕೈಯಲ್ಲಿರುವ ಮತಪತ್ರ ಕೇವಲ ಒಂದು ಕಾಗದವಲ್ಲ; ಅದು ದೇಶದ ಭವಿಷ್ಯವನ್ನು ರೂಪಿಸುವ ಮಹತ್ವದ ಹೊಣೆಗಾರಿಕೆ. ಐದು ವರ್ಷಕ್ಕೊಮ್ಮೆ ನಡೆಯುವ ಚುನಾವಣೆ ಕೇವಲ ಅಧಿಕಾರ ಬದಲಾವಣೆಯ ಪ್ರಕ್ರಿಯೆಯಲ್ಲ, ಅದು ಜನರ ಕನಸುಗಳಿಗೆ, ನಿರೀಕ್ಷೆಗಳಿಗೆ ಮತ್ತು ಭವಿಷ್ಯದ ದಿಕ್ಕಿಗೆ ಹೊಸ ತೀರ್ಪು ನೀಡುವ ಕ್ಷಣವಾಗಿದೆ. ಜನರು ಮತ ಹಾಕುವಾಗ ಅಭ್ಯರ್ಥಿಯ ಮುಖವನ್ನಷ್ಟೇ ನೋಡುವುದಿಲ್ಲ; ಅವನು ನೀಡುವ ಭರವಸೆಗಳನ್ನು, ಘೋಷಿಸುವ ಯೋಜನೆಗಳನ್ನು ಮತ್ತು ಕಟ್ಟಿಕೊಡುವ ಭವಿಷ್ಯದ ಚಿತ್ರಣವನ್ನು ನಂಬಿ ಮತ ಚಲಾಯಿಸುತ್ತಾರೆ.

ಆದರೆ ಚುನಾವಣೆ ಮುಗಿದು ಅಧಿಕಾರದ ಕುರ್ಚಿ ಸಿಕ್ಕ ನಂತರ ಅನೇಕ ಭರವಸೆಗಳು ರಾಜಕೀಯ ಭಾಷಣಗಳ ಧೂಳಿನಡಿಯಲ್ಲಿ ಮರೆಯಾಗುತ್ತವೆ. ಜನರ ನೆನಪಿನಲ್ಲಿ ಉಳಿಯುವ ಭರವಸೆಗಳು, ಆಡಳಿತದ ಕಡತಗಳಲ್ಲಿ ಕಾಣೆಯಾಗುವ ಪರಿಸ್ಥಿತಿ ಹಲವಾರು ಬಾರಿ ಕಂಡುಬರುತ್ತದೆ. ಇದೇ ಕಾರಣಕ್ಕೆ ಇಂದು ಒಂದು ಮಹತ್ವದ ಪ್ರಶ್ನೆ ಸಮಾಜದ ಮುಂದೆ ನಿಂತಿದೆ ಚುನಾವಣೆಯಲ್ಲಿ ನೀಡುವ ಭರವಸೆಗಳಿಗೆ ಕಾನೂನುಬದ್ಧ ಒಪ್ಪಂದದ ರೂಪ ನೀಡುವ ಸಮಯ ಬಂದಿಲ್ಲವೇ?.

ವ್ಯಾಪಾರದಲ್ಲಿ ಒಂದು ಮಾತಿಗೂ ಒಪ್ಪಂದ ಇರುತ್ತದೆ. ಮನೆ ಖರೀದಿಸಿದರೆ ದಾಖಲೆ ಇರುತ್ತದೆ. ಉದ್ಯೋಗಕ್ಕೆ ಸೇರಿದರೆ ಸೇವಾ ನಿಯಮಗಳಿರುತ್ತವೆ. ಬ್ಯಾಂಕ್ ಸಾಲ ಪಡೆದರೆ ಷರತ್ತುಗಳಿರುತ್ತವೆ. ಆದರೆ ಒಂದು ರಾಜ್ಯದ ಅಥವಾ ದೇಶದ ಭವಿಷ್ಯವನ್ನು ನಿರ್ಧರಿಸುವ ಚುನಾವಣಾ ಭರವಸೆಗಳಿಗೆ ಯಾವುದೇ ಕಾನೂನುಬದ್ಧ ಹೊಣೆಗಾರಿಕೆ ಇಲ್ಲದಿರುವುದು ಪ್ರಜಾಪ್ರಭುತ್ವದ ದೊಡ್ಡ ವಿರೋಧಾಭಾಸವಾಗಿದೆ.

ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಅನೇಕ ಭರವಸೆಗಳನ್ನು ಘೋಷಿಸುತ್ತವೆ. ಉಚಿತ ಯೋಜನೆಗಳು, ಉದ್ಯೋಗ ಸೃಷ್ಟಿ, ರೈತರ ಅಭಿವೃದ್ಧಿ, ಮಹಿಳಾ ಸಬಲೀಕರಣ, ಶಿಕ್ಷಣ ಸುಧಾರಣೆ, ಆರೋಗ್ಯ ಸೇವೆಗಳ ವಿಸ್ತರಣೆ, ಮೂಲಸೌಕರ್ಯ ಅಭಿವೃದ್ಧಿ ಇಂತಹ ಅನೇಕ ಘೋಷಣೆಗಳು ಮತದಾರರ ವಿಶ್ವಾಸವನ್ನು ಸೆಳೆಯುತ್ತವೆ. ಆದರೆ ಅಧಿಕಾರಕ್ಕೆ ಬಂದ ನಂತರ ಎಷ್ಟು ಭರವಸೆಗಳು ಅನುಷ್ಠಾನಗೊಳ್ಳುತ್ತವೆ ಎಂಬುದನ್ನು ಪ್ರಶ್ನಿಸುವ ವ್ಯವಸ್ಥೆ ಅತ್ಯಂತ ದುರ್ಬಲವಾಗಿದೆ.

ಪ್ರಜಾಪ್ರಭುತ್ವ ಎಂದರೆ ಕೇವಲ ಮತ ಹಾಕುವ ಹಕ್ಕು ಮಾತ್ರವಲ್ಲ; ಜನರಿಗೆ ನೀಡಿದ ಮಾತಿನ ಹೊಣೆಗಾರಿಕೆಯನ್ನು ಪಾಲಿಸುವ ಆಡಳಿತವು ಆಗಿದೆ. ಚುನಾವಣಾ ಭರವಸೆಗಳನ್ನು ಕೇವಲ ರಾಜಕೀಯ ಭಾಷಣಗಳೆಂದು ಪರಿಗಣಿಸಿದರೆ, ಮತದಾರರ ವಿಶ್ವಾಸಕ್ಕೆ ಧಕ್ಕೆಯಾಗುತ್ತದೆ. ಚುನಾವಣೆಯ ಸಮಯದಲ್ಲಿ ನೀಡುವ ಪ್ರತಿಯೊಂದು ಪ್ರಮುಖ ಭರವಸೆಯೂ ಜನರೊಂದಿಗೆ ಮಾಡಿಕೊಳ್ಳುವ ಸಾಮಾಜಿಕ ಒಪ್ಪಂದವೆಂದು ಪರಿಗಣಿಸಬೇಕಾಗಿದೆ.

ಕಾನೂನುಬದ್ಧ ಒಪ್ಪಂದ ಎಂದರೆ ಎಲ್ಲ ಭರವಸೆಗಳನ್ನು ನೂರು ಪ್ರತಿಶತ ಜಾರಿಗೆ ತರಲೇಬೇಕು ಎಂಬ ಕಟ್ಟುನಿಟ್ಟಲ್ಲ. ಆದರೆ ಯಾವ ಭರವಸೆ ಯಾವ ಅವಧಿಯಲ್ಲಿ, ಯಾವ ಆರ್ಥಿಕ ಮೂಲಗಳಿಂದ, ಯಾವ ಹಂತಗಳಲ್ಲಿ ಅನುಷ್ಠಾನಗೊಳ್ಳುತ್ತದೆ ಎಂಬ ಸ್ಪಷ್ಟ ಕಾರ್ಯಯೋಜನೆ ಇರಬೇಕು. ಅದು ಸಾರ್ವಜನಿಕ ದಾಖಲೆ ಆಗಬೇಕು. ಜನರಿಗೆ ಅದರ ಪ್ರಗತಿ ತಿಳಿಯುವ ವ್ಯವಸ್ಥೆಯೂ ಇರಬೇಕು.

ಇಂತಹ ವ್ಯವಸ್ಥೆ ಜಾರಿಯಾದರೆ ಚುನಾವಣಾ ಪ್ರಚಾರದ ಭಾಷೆಯೇ ಬದಲಾಗುತ್ತದೆ. ಅಸಾಧ್ಯ ಭರವಸೆಗಳನ್ನು ನೀಡಿ ಜನರ ಭಾವನೆಗಳನ್ನು ದುರುಪಯೋಗಪಡಿಸಿಕೊಳ್ಳುವ ಪ್ರವೃತ್ತಿ ಕಡಿಮೆಯಾಗುತ್ತದೆ. ರಾಜಕೀಯ ಪಕ್ಷಗಳು ತಜ್ಞರ ಸಲಹೆ ಪಡೆದು ವಾಸ್ತವಿಕ ಯೋಜನೆಗಳನ್ನು ರೂಪಿಸಲು ಮುಂದಾಗುತ್ತವೆ. ಆಡಳಿತದ ಗುಣಮಟ್ಟವೂ ಹೆಚ್ಚುತ್ತದೆ.

ಇಂದು ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಚುನಾವಣಾ ಪ್ರಣಾಳಿಕೆಗಳು ಸಾರ್ವಜನಿಕ ಪರಿಶೀಲನೆಗೆ ಒಳಗಾಗುತ್ತವೆ. ಸ್ವತಂತ್ರ ಸಂಸ್ಥೆಗಳು ಸರ್ಕಾರದ ಭರವಸೆಗಳ ಅನುಷ್ಠಾನವನ್ನು ಪರಿಶೀಲಿಸಿ ವರದಿಗಳನ್ನು ಪ್ರಕಟಿಸುತ್ತವೆ. ಇದರಿಂದ ಜನರಿಗೆ ಸರ್ಕಾರದ ಕಾರ್ಯಕ್ಷಮತೆಯನ್ನು ಅಳೆಯಲು ಸುಲಭವಾಗುತ್ತದೆ. ಭಾರತದಲ್ಲಿಯೂ ಇಂತಹ ಪಾರದರ್ಶಕ ವ್ಯವಸ್ಥೆಗಳ ಅಗತ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಮತದಾರನ ವಿಶ್ವಾಸವನ್ನು ಪಡೆಯುವುದು ಸುಲಭ; ಆದರೆ ಅದನ್ನು ಉಳಿಸಿಕೊಳ್ಳುವುದು ಅತ್ಯಂತ ಕಷ್ಟ. ಚುನಾವಣೆಯ ಸಮಯದಲ್ಲಿ ಜನರ ಮನೆಬಾಗಿಲಿಗೆ ಬರುವ ನಾಯಕರು, ಚುನಾವಣೆ ಮುಗಿದ ನಂತರವೂ ಅದೇ ಬದ್ಧತೆಯಿಂದ ಜನರ ಸಮಸ್ಯೆಗಳಿಗೆ ಸ್ಪಂದಿಸಿದಾಗ ಮಾತ್ರ ಪ್ರಜಾಪ್ರಭುತ್ವ ಜೀವಂತವಾಗಿರುತ್ತದೆ.

ಕಾನೂನುಬದ್ಧ ಒಪ್ಪಂದದ ಕಲ್ಪನೆ ರಾಜಕೀಯವನ್ನು ದುರ್ಬಲಗೊಳಿಸುವುದಲ್ಲ; ಬದಲಾಗಿ ಅದನ್ನು ಹೆಚ್ಚು ಜವಾಬ್ದಾರಿಯುತವಾಗಿಸುತ್ತದೆ. ಆಡಳಿತ ಎಂದರೆ ಅಧಿಕಾರ ಅನುಭವಿಸುವ ಅವಕಾಶವಲ್ಲ, ಜನರ ವಿಶ್ವಾಸವನ್ನು ಉಳಿಸಿಕೊಳ್ಳುವ ಕರ್ತವ್ಯ ಎಂಬ ಅರಿವು ಬಲಗೊಳ್ಳುತ್ತದೆ.

ಈ ವ್ಯವಸ್ಥೆ ಜಾರಿಯಾದರೆ ಚುನಾವಣಾ ಆಯೋಗ, ವಿಧಾನಮಂಡಲ, ಸಾರ್ವಜನಿಕ ಲೆಕ್ಕಪರಿಶೋಧನಾ ಸಂಸ್ಥೆಗಳು ಹಾಗೂ ನಾಗರಿಕ ಸಮಾಜದ ಪಾತ್ರವೂ ಮಹತ್ವ ಪಡೆಯುತ್ತದೆ. ಪ್ರತಿ ವರ್ಷ ಚುನಾವಣಾ ಭರವಸೆಗಳ ಪ್ರಗತಿ ವರದಿಯನ್ನು ಜನರ ಮುಂದೆ ಮಂಡಿಸುವ ಕಡ್ಡಾಯ ವ್ಯವಸ್ಥೆ ರೂಪಿಸಬಹುದು. ಯಾವ ಭರವಸೆ ಪೂರ್ಣಗೊಂಡಿದೆ, ಯಾವುದು ಪ್ರಗತಿಯಲ್ಲಿದೆ, ಯಾವುದು ಸಾಧ್ಯವಾಗಿಲ್ಲ ಮತ್ತು ಅದರ ಕಾರಣವೇನು ಎಂಬುದನ್ನು ಸರ್ಕಾರ ಬಹಿರಂಗಪಡಿಸಬೇಕು.

ಇದರಿಂದ ರಾಜಕೀಯ ಸಂಸ್ಕೃತಿಯಲ್ಲಿಯೂ ಹೊಸ ಅಧ್ಯಾಯ ಆರಂಭವಾಗಬಹುದು. ಭಾವನಾತ್ಮಕ ಘೋಷಣೆಗಳಿಗಿಂತ ಆಧಾರಸಹಿತ ಯೋಜನೆಗಳು ಹೆಚ್ಚು ಪ್ರಾಮುಖ್ಯ ಪಡೆಯುತ್ತವೆ. ಜನರೂ ವ್ಯಕ್ತಿಪೂಜೆಗೆ ಬದಲಾಗಿ ಕಾರ್ಯಕ್ಷಮತೆಯ ಆಧಾರದ ಮೇಲೆ ಆಡಳಿತವನ್ನು ಮೌಲ್ಯಮಾಪನ ಮಾಡಲು ಆರಂಭಿಸುತ್ತಾರೆ.

ಆದಾಗ್ಯೂ ಈ ಕಲ್ಪನೆ ಜಾರಿಯಾಗುವಾಗ ಕೆಲವು ಸವಾಲುಗಳೂ ಇವೆ. ಪ್ರಕೃತಿ ವಿಕೋಪಗಳು, ಆರ್ಥಿಕ ಹಿಂಜರಿತ, ಯುದ್ಧದಂತಹ ಅನಿರೀಕ್ಷಿತ ಸಂದರ್ಭಗಳು ಸರ್ಕಾರದ ಆದ್ಯತೆಗಳನ್ನು ಬದಲಾಯಿಸಬಹುದು. ಆದ್ದರಿಂದ ಕಾನೂನುಬದ್ಧ ಒಪ್ಪಂದವು ವಾಸ್ತವ ಪರಿಸ್ಥಿತಿಗಳನ್ನು ಪರಿಗಣಿಸುವ ರೀತಿಯಲ್ಲಿ ರೂಪುಗೊಳ್ಳಬೇಕು. ಆದರೆ ಅಂತಹ ಸಂದರ್ಭಗಳಲ್ಲಿಯೂ ಸರ್ಕಾರ ಜನರಿಗೆ ಸ್ಪಷ್ಟನೆ ನೀಡುವ ಜವಾಬ್ದಾರಿಯಿಂದ ಹಿಂದೆ ಸರಿಯಬಾರದು.

ಪ್ರಜಾಪ್ರಭುತ್ವದ ನಿಜವಾದ ಬಲ ಜನರ ವಿಶ್ವಾಸದಲ್ಲಿದೆ. ಆ ವಿಶ್ವಾಸವನ್ನು ಉಳಿಸಿಕೊಳ್ಳಲು ರಾಜಕೀಯ ಪಕ್ಷಗಳು ಮಾತಿನ ಮೌಲ್ಯವನ್ನು ಕಾಪಾಡಬೇಕು. ಚುನಾವಣಾ ಭರವಸೆಗಳು ಕೇವಲ ಪ್ರಚಾರದ ವೇದಿಕೆಯಲ್ಲೇ ಉಳಿಯದೆ, ಆಡಳಿತದ ದಿಕ್ಕು ತೋರಿಸುವ ಮಾರ್ಗಸೂಚಿಯಾಗಬೇಕು.

ಇಂದು ಮತದಾರರು ಹೆಚ್ಚು ಜಾಗೃತರಾಗಿದ್ದಾರೆ. ಅವರು ಕೇವಲ ಭರವಸೆಗಳನ್ನು ಕೇಳುವುದಿಲ್ಲ; ಅವುಗಳ ಅನುಷ್ಠಾನವನ್ನು ಪ್ರಶ್ನಿಸುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳು, ಮಾಧ್ಯಮಗಳು ಮತ್ತು ನಾಗರಿಕ ಸಂಘಟನೆಗಳು ಆಡಳಿತವನ್ನು ನಿರಂತರವಾಗಿ ಪರಿಶೀಲಿಸುತ್ತಿವೆ. ಈ ಬದಲಾದ ಪರಿಸ್ಥಿತಿಯಲ್ಲಿ ಜವಾಬ್ದಾರಿಯುತ ರಾಜಕೀಯವೇ ಜನರ ವಿಶ್ವಾಸವನ್ನು ಗಳಿಸಬಲ್ಲದು.

ಮತ ಕೇಳುವಾಗ ನೀಡಿದ ಮಾತು ಅಧಿಕಾರಕ್ಕೆ ಬಂದ ನಂತರವೂ ಅಷ್ಟೇ ಪವಿತ್ರವಾಗಿರಬೇಕು. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಜನರು ಕೇವಲ ಸರ್ಕಾರವನ್ನು ಆಯ್ಕೆ ಮಾಡುವುದಿಲ್ಲ; ತಮ್ಮ ಭವಿಷ್ಯವನ್ನು ಒಪ್ಪಿಸುತ್ತಾರೆ. ಆ ವಿಶ್ವಾಸಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ.

ಚುನಾವಣಾ ಭರವಸೆಗಳಿಗೆ ಕಾನೂನುಬದ್ಧ ಒಪ್ಪಂದದ ವ್ಯವಸ್ಥೆ ರೂಪಿಸುವ ಕುರಿತು ದೇಶವ್ಯಾಪಿ ಚರ್ಚೆ ಆರಂಭವಾಗಬೇಕಿದೆ. ಅದು ರಾಜಕೀಯ ಪಕ್ಷಗಳ ವಿರುದ್ಧದ ಕ್ರಮವಲ್ಲ; ಪ್ರಜಾಪ್ರಭುತ್ವವನ್ನು ಇನ್ನಷ್ಟು ಬಲಿಷ್ಠಗೊಳಿಸುವ ಸುಧಾರಣೆಯಾಗಿದೆ. ಮಾತು ಮತ್ತು ಕಾರ್ಯದ ನಡುವೆ ಅಂತರ ಕಡಿಮೆಯಾದಾಗ ಮಾತ್ರ ಜನರ ನಂಬಿಕೆ ಗಟ್ಟಿಯಾಗುತ್ತದೆ.

ಅಂತಿಮವಾಗಿ, ಪ್ರಜಾಪ್ರಭುತ್ವದ ಯಶಸ್ಸು ಚುನಾವಣೆ ನಡೆದ ದಿನದಿಂದ ಅಳೆಯಲಾಗುವುದಿಲ್ಲ; ಚುನಾವಣೆಯಲ್ಲಿ ನೀಡಿದ ಮಾತುಗಳನ್ನು ಎಷ್ಟು ಪ್ರಾಮಾಣಿಕವಾಗಿ ನೆರವೇರಿಸಲಾಯಿತು ಎಂಬುದರಿಂದ ಅಳೆಯಲಾಗುತ್ತದೆ. ಚುನಾವಣಾ ಭರವಸೆಗಳಿಗೆ ಕಾನೂನುಬದ್ಧ ಒಪ್ಪಂದ ಬೇಕು ಎಂಬ ಬೇಡಿಕೆ ರಾಜಕೀಯ ವಿರೋಧವಲ್ಲ; ಅದು ಪ್ರಜೆಯ ಮತಕ್ಕೆ ಗೌರವ ನೀಡುವ, ಜವಾಬ್ದಾರಿಯುತ ಆಡಳಿತಕ್ಕೆ ದಾರಿ ತೋರುವ ಮತ್ತು ಪ್ರಜಾಪ್ರಭುತ್ವದ ಆತ್ಮವನ್ನು ಇನ್ನಷ್ಟು ಬಲಪಡಿಸುವ ಅಗತ್ಯ ಸುಧಾರಣೆಯಾಗಿದೆ. ಜನರು ಮತ ಹಾಕುವಾಗ ನೀಡಿದ ವಿಶ್ವಾಸಕ್ಕೆ ನ್ಯಾಯ ಸಿಗಬೇಕಾದರೆ, ಮಾತುಗಳಿಗೆ ಮೌಲ್ಯವೂ, ಭರವಸೆಗಳಿಗೆ ಹೊಣೆಗಾರಿಕೆಯೂ ಇರಲೇಬೇಕು. ಆಗ ಮಾತ್ರ ಪ್ರಜೆಯ ಮತಕ್ಕೆ ನಿಜವಾದ ನ್ಯಾಯ ಸಿಗುತ್ತದೆ.




---

# ನಗಿಸುವ ಕಾಯಕದ..... ನಗೆ ಮಾರಿ ತಂದೆ



| ವೀಣಾ ಹೇಮಂತ್‌ಗೌಡ ಪಾಟೀಲ್

12ನೇ ಶತಮಾನದ ಶರಣರಲ್ಲಿ ಒಬ್ಬರಾಗಿದ್ದ ನಗೆ ಮಾರಿ ತಂದೆಯವರು ಜಾತಿಯಿಂದ ಕುಂಬಾರರಾಗಿದ್ದು ವೃತ್ತಿ ಹಾಗೂ ಪ್ರವೃತ್ತಿಯಿಂದ ವಿದೂಷಕ ವೃತ್ತಿಯನ್ನು ನಡೆಸುತ್ತಿದ್ದರು. ನಗದೆ ಇರುವವರನ್ನು ನಗಿಸುವ ಅವರ ಚಾಕಚಕ್ಯತೆ ಬೆರಗಾಗಿಸುವಂಥದ್ದು. ಪ್ರತಿದಿನವೂ ಒಬ್ಬೊಬ್ಬ ಶರಣನನ್ನು ನಗಿಸುವುದನ್ನೇ ತನ್ನ ಕಾಯಕ ಎಂದು ಭಾವಿಸಿದ್ದ ಮಾರಿ ತಂದೆಯವರನ್ನು ಜನ ನಗೆಯ ಮಾರಿಯ ತಂದೆ ಎಂದು ಕರೆಯುತ್ತಿದ್ದರು.

ಪ್ರತಿದಿನವೂ ವಿವಿಧ ಊರುಗಳಲ್ಲಿನ ಸಂತೆ ಬೀದಿಗಳಲ್ಲಿ, ಜನರು ಸೇರುವ ಸ್ಥಳಗಳಲ್ಲಿ ಜನರನ್ನು ನಗಿಸುವ ಅವರ ಕಾಯಕವನ್ನು ಮಾಡಿ ಅವರು ಕೊಟ್ಟ ದುಡ್ಡನ್ನು ಪಡೆದುಕೊಂಡು ಜಂಗಮ ದಾಸೋಹವನ್ನು ನಡೆಸುತ್ತಿದ್ದ ಶರಣರು ಅವರಾಗಿದ್ದರು.

ಅದೆಂತದ್ದೇ ನಿಷ್ಠುರದ ಸಮಯವಾದರೂ ಕೂಡ ತಮ್ಮ ಪ್ರತಿಭೆಯಿಂದ ಜನರನ್ನು ನಗಿಸುತ್ತಿದ್ದ ನಗೆಯ ಮಾರಿಯ ತಂದೆಯವರ ಜಾಣ್ಮೆ ಕಲ್ಯಾಣದ ಜನರ ಮನೆ ಮಾತಾಗಿದ್ದು ಅವರ ಕೀರ್ತಿ ಕೈಲಾಸಕ್ಕೂ ತಲುಪಿತು.

ಅತಿರಥ ಮಹಾರಥರನ್ನು ಕೂಡ ನಗಿಸುವ ಅವರ ಕಲಾವಂತಿಕೆಯನ್ನು ತಾವು ಕೂಡ ಸವಿಯಬೇಕು ಎಂಬ ಆಶಯ ದೇವಾನುದೇವ ಮಹಾದೇವ ಶಿವ ಪಾರ್ವತಿ ದಂಪತಿಗಳದಾಯಿತು.

ಅಂತೆಯೇ ಅವರಿಬ್ಬರೂ ವೃದ್ಧ ವೇಷಧಾರಿಗಳಾಗಿ ಕಲ್ಯಾಣಕ್ಕೆ ಸಮೀಪದ ಊರಿನಲ್ಲಿ ಪ್ರತ್ಯಕ್ಷರಾದರು. ಅವರೊಂದಿಗೆ ನಂದಿಯನ್ನು ಕೂಡ ಮುದಿಯಾಗಿಸಿ ಕರೆ ತಂದ ದಂಪತಿಗಳು ನಿಧಾನವಾಗಿ ನಡೆಯುತ್ತಾ ಊರ ಹೊರಗಿನ ಕೆರೆಯ ದಡಕ್ಕೆ ಬಂದು ಕುಳಿತರು.

ಶಿವಲೀಲೆಯ ವಿಲಾಸವನ್ನು ಅರಿಯದ ನಗೆಯ ಮಾರಿ ತಂದೆಗಳು ಹತ್ತಿರದ ಹಳ್ಳಿಗೆ ಹೋಗಿ ತಮ್ಮ ನಗಿಸುವ ಕಾಯಕವನ್ನು ಮಾಡಿ ಮರಳಿ ಬರುತ್ತಿರುವಾಗ ಹಳ್ಳದ ಬಳಿ ಕುಳಿತ ವೃದ್ಧ ದಂಪತಿಗಳನ್ನು ನೋಡಿದರು.

ಅರೆ! ಈ ವೃದ್ಧ ದಂಪತಿಗಳನ್ನು ನಗಿಸಿ ಮತ್ತಷ್ಟು ಹಣವನ್ನು ಸಂಪಾದಿಸಿ ಇನ್ನಷ್ಟು ಶರಣರಿಗೆ ದಾಸೋಹದ ವ್ಯವಸ್ಥೆ ಮಾಡಬಹುದು ಎಂಬ ಆಶಯವನ್ನು ಹೊತ್ತ ನಗೆ ಮಾರಿ ತಂದೆಯವರು ಆ ವೃದ್ಧರ ಬಳಿ ಧಾವಿಸಿ ಬಂದರು.

ಪರಸ್ಪರರನ್ನು ನೋಡಿದ ನಂತರ ವೃದ್ಧ ವೇಷಧಾರಿ ಶಿವನು ನಗೆಯ ಮಾರಿ ತಂದೆಯವರನ್ನು ಕುರಿತು ಯಾರು ನೀನು ಎಲ್ಲಿಂದ ಬಂದೆ? ಎಂದು ಕೇಳಿದರು.

ನಗೆಯ ಮಾರಿ ತಂದೆಯವರು ಹಿರಿಯ ವಯಸ್ಕರಿಗೆ ಅತ್ಯಂತ ಗೌರವ ಪೂರ್ವಕವಾಗಿ ತಲೆಬಾಗಿ ತಾನು ಕಲ್ಯಾಣದ ವಾಸಿಯಾಗಿದ್ದು ಜನರನ್ನು ನಗಿಸುವ ಕಾಯಕವನ್ನು ಮಾಡುತ್ತೇನೆ. ಅದರಿಂದ ಬಂದ ಹಣದಲ್ಲಿ ಶರಣರಿಗೆ ದಾಸೋಹ ಮಾಡುತ್ತೇನೆ, ಕಾಯಕ ಮುಗಿಸಿ ಬರುವುದರಲ್ಲಿ ತಡವಾಯಿತು ಇದೀಗ ಹಳ್ಳವನ್ನು ದಾಟಿ ಹೋಗಬೇಕು ಎಂದು ಹೇಳಿದರು.

ಇದನ್ನು ಕೇಳಿದ ಶಿವನು ಅದು ಹೇಗೆ ತುಂಬಿದ ಹಳ್ಳವನ್ನು ದಾಟಿ ಹೋಗುವೆ ಎಂದು ಕೇಳಿದರು. ಆಗ ನಗೆಯ ಮಾರಿ ತಂದೆಯವರು ನನ್ನದು ಹೇಗೋ ಆಗುತ್ತದೆ ಬಿಡು ಅಜ್ಜ ಆದರೆ ಮುಪ್ಪಾನ ಮುದುಕನಾದ ನೀನು ಹೇಗೆ ನಿನ್ನ ಪತ್ನಿ ಹಾಗೂ ನಿನ್ನ ಮುದಿ ಎತ್ತನ್ನು ಕರೆದುಕೊಂಡು ಹಳ್ಳ ದಾಟುವೆ ಎಂಬುದನ್ನು ಹೇಳು ಎಂದನು.



ಅದಕ್ಕೆ ವೃದ್ಧ ವೇಷಧಾರಿ ಶಿವನು ನಾನು ನನ್ನ ಮುದಿ ಎತ್ತಿನ ಮೇಲೆ ಕುಳಿತುಕೊಳ್ಳುತ್ತೇನೆ, ನಂತರ ನನ್ನ ಮೇಲೆ ನನ್ನ ಪತ್ನಿಯನ್ನು ಕುಳ್ಳಿರಿಸಿಕೊಳ್ಳುತ್ತೇನೆ ಹಾಗೆ ಹಳ್ಳವನ್ನು ದಾಟಿಕೊಳ್ಳುತ್ತೇವೆ ಎಂದು ಹೇಳಿದನು.

ಈ ಮಾತನ್ನು ಕೇಳಿದ ಕೂಡಲೇ ನಗೆಯ ಮಾರಿ ತಂದೆಯು ನೀನು ಮುದಿ ಎತ್ತಿನ ಮೇಲೆ ಕುಳಿತುಕೊಳ್ಳುವೆ ನಿನ್ನ ಹೆಗಲ ಮೇಲೆ ನಿನ್ನ ಪತ್ನಿ ಕುಳಿತುಕೊಳ್ಳುವಳು ಎಂದು ಹೇಳಿದೆಯಲ್ಲವೇ ನಾನು ಆಕೆಯ ಹೆಗಲ ಮೇಲೆ ಕುಳಿತುಕೊಳ್ಳುತ್ತೇನೆ ಹಾಗೂ ನಿಮ್ಮೊಂದಿಗೆ ಹಳ್ಳ ದಾಟಿಕೊಳ್ಳುತ್ತೇನೆ ಎಂದು ಹೇಳಿದಾಗ ದಂಪತಿಗಳಿಬ್ಬರಿಗೂ ಅತ್ಯಂತ ಸಂತಸದಿಂದ ಕೂಡಿದವರಾಗಿ ಜೊರು ಜೋರಾಗಿ ನಕ್ಕರು.

ಕೂಡಲೇ ಕೈ ಒಡ್ಡಿದ ನಗೆ ಮಾರಿ ತಂದೆ ನನ್ನ ಕಾಯಕದ ಹಣವನ್ನು ನೀಡಿ ಎಂದು ಮಾರುವೇಷಧಾರಿ ಶಿವ ಪಾರ್ವತಿ ದೇವಿಯರನ್ನು ಕೇಳಿದನು. ತಮ್ಮ ನಿಜ ವೇಷದಲ್ಲಿ ಪ್ರತ್ಯಕ್ಷರಾದ ದಂಪತಿಗಳನ್ನು ನೋಡಿ ಭಕ್ತಿ ಪೂರ್ವಕವಾಗಿ ನಮಿಸಿದ ನಗೆಯ ಮಾರಿ ತಂದೆ ಮತ್ತೆ ಕೈಯೊಡ್ಡಿದರು.

ನಾವು ದೇವರು ಎಂದು ಗೊತ್ತಾಗಿಯೂ ಕೂಡ ನೀನು ನಮ್ಮಿಂದ ಕಾಯಕದ ಹಣವನ್ನು ಅಪೇಕ್ಷಿಸುತ್ತಿರುವೆಯಲ್ಲ ಎಂದು ಪಾರ್ವತಿ ದೇವಿಯು ನಯವಾಗಿ ಅಕ್ಷೇಪಿಸಿದಾಗ

ಮಾರಿ ತಂದೆ... ಅವ್ವ ನಾನು ನನ್ನ ಕಾಯಕದ ಹಣದಿಂದಲೇ ಗುರು, ಲಿಂಗ, ಜಂಗಮರ ಸೇವೆ ಮಾಡುವವನು... ನನ್ನ ಕಾಯಕವನ್ನು ನಾನು ಮಾಡಿದ್ದು ನಿಮ್ಮಿಂದ ಅದನ್ನು ಅಪೇಕ್ಷಿಸುವುದು ತಪ್ಪೇ? ಎಂದು ಮರು ಪ್ರಶ್ನಿಸಿದರು. ಆಗ ಸಂತೃಪ್ತರಾದ ಶಿವ ಪಾರ್ವತಿ ದಂಪತಿಗಳು ನೀನು ನಮ್ಮೊಂದಿಗೆ ಕೈಲಾಸಕ್ಕೆ ಬಂದುಬಿಡು... ಅಲ್ಲಿ ನಿನ್ನ ಕಾಯಕವನ್ನು ಆರಾಮವಾಗಿ ಮಾಡಿಕೊಂಡು ಇರಬಹುದು ಎಂದು ಪ್ರೀತಿಯ ಆಹ್ವಾನ ನೀಡಿದರು ಎಂಬ ಕಥೆಯನ್ನು ನಾವು ಅಲ್ಲಲ್ಲಿ ಕೇಳಿಯೇ ಇದ್ದೇವೆ.

**ಉಪೇಕ್ಷಿತ ವಚನಕಾರರು**

ಇವರ ಒಟ್ಟು 101 ವಚನಗಳು ಲಭ್ಯವಿದ್ದು ಆತುರ ವೈರಿ ಮಾರೇಶ್ವರ ಎಂಬುದು ಇವರ ವಚನಗಳ ಅಂಕಿತವಾಗಿದೆ. ದೃಷ್ಟಾಂತ ಕಥೆ ಹಾಗೂ ಹರಿತವಾದ ವ್ಯಂಗ್ಯ ಇವರ ವಚನಗಳ ವೈಶಿಷ್ಟ್ಯವಾಗಿತ್ತು.

ಲಿಂಗವ ಪೂಜಿಸುವಲ್ಲಿ ಲಿಂಗದ ಅಂಗವನರಿದು ಮುಟ್ಟಬೇಕು, ಲಿಂಗಕ್ಕೆ ಅರ್ಪಿತವ ಮಾಡುವಲ್ಲಿ ಲಿಂಗದ ಅಪ್ಯಾಯನವರಿವಲ್ಲಿ ಉಚಿತವನರಿದು ಅರ್ಪಿಸಬೇಕು, ತನ್ನ ಹಸಿವನರಿತು ಹುಸಿಯ ಪೂಜೆಯ ಕಂಡಡೆ, ಕಿರುಕುಳದಲಿ ಇಕ್ಕುವ ಆತುರ ವೈರಿ ಮಾರೇಶ್ವರ

ಎಂಬ ವಚನದಲ್ಲಿ ಡಾಂಭಿಕತೆಯನ್ನು, ಭಕ್ತಿಯ ಮುಖವಾಡ ಧರಿಸಿ ಪೂಜಿಸುವುದನ್ನು ನಗೆಯ ಮಾರಿ ತಂದೆ ಖಂಡಿಸುತ್ತಾರೆ. ಅಗಸನ ಮುನಿಸು ಕತ್ತೆಯ ಸ್ನೇಹ, ಸರ್ಪನ ಮುನಿಸು ಕಪ್ಪೆಯ ಸ್ನೇಹ ಶಬರನ ಸೊಪ್ಪುಡಿಗೆ ಪ್ರಭೆಯವನ ನಂಬುಗೆ ಮರೆವಡಿಗನ ಮಾತು ಗುಡುಗಿನ ಮನೆ ಇಂತಿವು

ಅಡಗಿಹ ಬೇಧವನರಿ ಆತುರ ವೈರಿ ಮಾರೇಶ್ವರ

ವಿವಿಧ ವಿಷಯಗಳ ನಡುವಣ ಬೇಧವನರಿತು ನಾವು ನಡೆಯಬೇಕು ಎಂಬುದನ್ನು ನಗೆಯ ಮಾರಿ ತಂದೆಯವರು ಅತ್ಯಂತ ಮಾರ್ಮಿಕವಾಗಿ ಹೇಳುತ್ತಾರೆ. ಶರಣ ನಗೆ ಮಾರಿ ತಂದೆಯವರಿಗೆ ನಮ್ಮ ಶರಣು ಸಮರ್ಪಣೆ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,